ಗುರುವಾರ, ಜನವರಿ 27, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 27 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾವಾಣಿ
ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ...

ಆಳ-ಅಗಲ
ಹಲವು ವಿಶೇಷಗಳ ಗಣರಾಜ್ಯೋತ್ಸವ

ಇಂದು ಏರ್ ಇಂಡಿಯಾ ಹಸ್ತಾಂತರ ಸಾಧ್ಯತೆ 8
ವಿಶ್ವದಲ್ಲಿ ಪಿಡುಗು ಕಾಣಿಸಿಕೊಂಡಾಗಿನಿಂದ ವರದಿಯಾದ ಗರಿಷ್ಠ ಪ್ರಕರಣಗಳಿವು 9
ಮಂಗಳೂರಿನಲ್ಲಿ 'ಸ್ವಾಭಿಮಾನದ ನಡಿಗೆ' 5
ಕೋವಿಡ್: ವಾರದಲ್ಲಿ 2 ಕೋಟಿಗೂ ಅಧಿಕ ಪ್ರಕರಣ 9

ಗ್ರಾಮಸ್ಥರ ಮನೆ ಬಾಗಿಲಿಗೆ ಸೇವೆ • ಮಾರ್ಚ್ ಅಂತ್ಯದೊಳಗೆ ರಾಜ್ಯದಾದ್ಯಂತ ಯೋಜನೆ ವಿಸ್ತರಣೆ

12 ಜಿಲ್ಲೆಗಳಲ್ಲಿ 'ಗ್ರಾಮ ಒನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಒನ್', 'ಕರ್ನಾಟಕ ಒನ್' ಮಾದರಿಯಲ್ಲೇ ಸರ್ಕಾರಿ ಸೇವೆಗಳನ್ನು ಗ್ರಾಮಸ್ಥರಿಗೆ ತಲುಪಿಸುವ 'ಗ್ರಾಮ ಒನ್' ಯೋಜನೆ ಮೊದಲ ಹಂತದಲ್ಲಿ 12 ಜಿಲ್ಲೆಗಳ 3,026 ಗ್ರಾಮ ಪಂಚಾಯಿತಿಗಳಲ್ಲಿ ಆರಂಭಗೊಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಈ ಯೋಜನೆಗೆ ವರ್ಚುವಲ್ ಮೂಲಕ ಚಾಲನೆ ನೀಡಿದರು. 'ಮಾರ್ಚ್ ಅಂತ್ಯದೊಳಗೆ ಈ ಯೋಜನೆಯನ್ನು ಉಳಿದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲು ಉದ್ದೇಶಿಸಲಾಗಿದೆ' ಎಂದು ಅವರು ಹೇಳಿದರು.

'ಕಂದಾಯ, ಕೃಷಿ, ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆಧಾರ್, ರೇಷನ್ ಕಾರ್ಡ್ ಮತ್ತಿತರ ಸೇವೆಗಳನ್ನು ಗ್ರಾಮಮಟ್ಟದಲ್ಲಿಯೇ ಲಭ್ಯವಾಗಿಸುವ ಚಿಂತನೆಯಿಂದ ಈ ಯೋಜನೆ ಆರಂಭಿಸಲಾಗಿದೆ. ತಾಲ್ಲೂಕು ಕಚೇರಿಗಳಲ್ಲಿ ಉಂಟಾಗುತ್ತಿರುವ ಜನಸಂದಣಿ ತಪ್ಪಿಸಲು ಹಾಗೂ ಸೇವೆಗಳ ಪೂರೈಕೆಯನ್ನು ವಿಕೇಂದ್ರೀಕರಿಸುವ ಉದ್ದೇಶದಿಂದ ಈ ಎಲ್ಲ ಸೇವೆಗಳನ್ನು ಗ್ರಾಮಮಟ್ಟದಲ್ಲಿ ಒದಗಿಸಲಾಗುವುದು. ಗ್ರಾಮಸ್ಥರು ಗ್ರಾಮ ಪಂಚಾಯತಿ ಕಚೇರಿಗೆ ತೆರಳಿ 'ಗ್ರಾಮ ಒನ್' ಸೇವಾ ಕೇಂದ್ರಗಳ ಮೂಲಕ ಸೇವೆಗಳನ್ನು ಪಡೆದುಕೊಳ್ಳಬಹುದು. ಆ ಮೂಲಕ, ಜನರು ಸಮಯ ಹಾಗೂ ಹಣ ವ್ಯಯ ಮಾಡುವುದು ತಪ್ಪಲಿದೆ' ಎಂದರು.

ಸಸಿಗೆ ನೀರೆರೆಯುವ ಮೂಲಕ 'ಗ್ರಾಮ ಒನ್' ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು

ಪ್ರಜಾವಾಣಿ ಚಿತ್ರ

'ಈ ಹಿಂದೆ ನಾಲ್ಕು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಆರಂಭಿಸಿ ಅನುಷ್ಠಾನದಲ್ಲಿನ ಎಲ್ಲ ತೊಡಕುಗಳನ್ನು ನಿವಾರಿಸಲಾಗಿದೆ. ಉತ್ತಮ ಸಲಕರಣೆಗಳು, ಸಮರ್ಥ ಹಾಗೂ ಸದೃಢ ತಂತ್ರಜ್ಞಾನದಿಂದ ಯಾವುದೇ ಅಡಚಣೆಗಳಿಲ್ಲದೆ ಸೇವೆ ಒದಗಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಜನರಿಗೆ ಸರ್ಕಾರದ ಸೇವೆಗಳನ್ನು ತಲುಪಿಸುವ ಕ್ರಾಂತಿಕಾರಿ ಬದಲಾವಣೆ ಇದು. ಸರ್ಕಾರದ ಸೇವೆಗಳನ್ನು ತಳಮಟ್ಟದಲ್ಲಿ ಸಮರ್ಪಕವಾಗಿ ಮತ್ತು ಸುಲಭವಾಗಿ ತಲುಪಿಸಲಾಗುವುದು. ಈ ವ್ಯವಸ್ಥೆಯ ಮೂಲಕ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಜನರ ವಿಶ್ವಾಸ ಗಳಿಸುವ ಚಿಂತನೆ ಇದೆ' ಎಂದು ತಿಳಿಸಿದರು.

'ಸಚಿವರು, ಶಾಸಕರು, ಜನಪ್ರತಿನಿಧಿಗಳು ಗ್ರಾಮ ಒನ್ ವ್ಯವಸ್ಥೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಜೊತೆಗೆ, ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ಇದರ ಕಾರ್ಯನಿರ್ವಹಣೆಯನ್ನು ಪರಿಶೀಲಿಸಬೇಕು' ಎಂದೂ ಮುಖ್ಯಮಂತ್ರಿ ಸಲಹೆ ನೀಡಿದರು.

5ನೇ ಪುಟ ನೋಡಿ

ಯಾವ ಸೇವೆಗಳು ಲಭ್ಯ

ಮನೆ, ಹೊಲದ ಹಕ್ಕುಪತ್ರ, ಸಂಧ್ಯಾ ಸುರಕ್ಷಾ, ಅಂಗವಿಕಲರ ಮಾಸಾಶನ, ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರ– ಹೀಗೆ ಹಲವು ಸೇವೆಗಳನ್ನು 'ಗ್ರಾಮ ಒನ್' ಯೋಜನೆಯ ಮೂಲಕ ಜನರು ಪಡೆದುಕೊಳ್ಳಬಹುದು. ಸೇವಾ ಸಿಂಧು ಕಾರ್ಯಕ್ರಮದ ಎಲ್ಲಾ 750 ಕ್ಕೂ ಹೆಚ್ಚು ಸೇವೆಗಳು, ಸಕಾಲ ಸೇವೆಗಳು, ಸಿಎಂಆರ್‌ಎಫ್ ಸೇವೆಗಳು, ಮೈಕ್ರೊ ಬ್ಯಾಂಕಿಂಗ್ ಸೇವೆಗಳು, ಆಧಾರ್ ತಿದ್ದುಪಡಿ.

ಯಾವ ಜಿಲ್ಲೆಗಳಲ್ಲಿ ಆರಂಭ

ಬೀದರ್, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಹಾವೇರಿ, ವಿಜಯಪುರ, ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿಕ್ಕಮಗಳೂರು, ಉಡುಪಿ, ಕೊಡಗು

- 3,026 ಗ್ರಾಮ ಒನ್ ಸೇವಾ ಕೇಂದ್ರಗಳು
- ಈ ಕೇಂದ್ರಗಳು ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ ಕಾರ್ಯನಿರ್ವಹಿಸುತ್ತವೆ.

ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳನ್ನು ಸುಲಭವಾಗಿ ಲಭ್ಯವಾಗಿಸಿ ಗ್ರಾಮೀಣ ಜನರ ಜೀವನ ಗುಣಮಟ್ಟ ಉನ್ನತೀಕರಿಸಲು ಗ್ರಾಮ ಒನ್ ಯೋಜನೆ ಸಹಕಾರಿ ಆಗಲಿದೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಕರುನಾಡ ಕಲೆ

ನವದೆಹಲಿಯಲ್ಲಿ ಬುಧವಾರ ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಪಾಲ್ಗೊಂಡಿದ್ದ ಕರ್ನಾಟಕದ ಸ್ತಬ್ಧಚಿತ್ರ –ಪಿಟಿಐ ಚಿತ್ರ

ಐಷಾರಾಮಿ ಉತ್ಪನ್ನಗಳ ಮೇಲೆ ಹೆಚ್ಚುವರಿ ಸೆಸ್?

• ಅನ್ನಪೂರ್ಣಾ ಸಿಂಗ್

ನವದೆಹಲಿ: ಸಾಂಕ್ರಾಮಿಕದ ಅವಧಿಯಲ್ಲಿಯೂ ಐಷಾರಾಮಿ ಉತ್ಪನ್ನಗಳ ಮಾರಾಟ ಪ್ರಮಾಣ ಹೆಚ್ಚಾಗಿರುವ ಕಾರಣ, ಕೇಂದ್ರ ಸರ್ಕಾರವು ಇಂತಹ ಉತ್ಪನ್ನಗಳ ಮೇಲೆ ಹೆಚ್ಚುವರಿಯಾಗಿ ಸೆಸ್ ವಿಧಿಸುವ ಸಾಧ್ಯತೆ ಇದೆ.

ಇದೇ ವೇಳೆ, ಸಾಂಕ್ರಾಮಿಕದ ಸಂದರ್ಭದಲ್ಲಿ ಬೇಡಿಕೆ ಕುಸಿದಿರುವ, ವ್ಯಾಪಕವಾಗಿ ಬಳಕೆಯಾಗುವ ಕೆಲವು ಉತ್ಪನ್ನಗಳ ಮೇಲಿನ ಸುಂಕ ಕಡಿಮೆ ಮಾಡುವ ಸಾಧ್ಯತೆಯೂ ಇದೆ. ಕೇಂದ್ರವು ಫೆಬ್ರುವರಿ 1ರಂದು ಮಂಡಿಸಲಿರುವ ಬಜೆಟ್‌ನಲ್ಲಿ ಈ ಬಗ್ಗೆ ಘೋಷಣೆ ಮಾಡುವ ನಿರೀಕ್ಷೆ ಇದೆ.

ಐಷಾರಾಮಿ ಮನೆಗಳು, ದುಬಾರಿ ಕಾರುಗಳು, ಮುತ್ತುಗಳು ಹಾಗೂ ಆಭರಣಗಳ ಮಾರಾಟ, ಬೆಲೆಬಾಳುವ ವಸ್ತುಗಳ ಆಮದು ಕೋವಿಡ್ ಸಮಯದಲ್ಲಿ ಗಮನಾರ್ಹ ಹೆಚ್ಚಳ ಕಂಡಿವೆ. ಇದೇ ಅವಧಿಯಲ್ಲಿ ದ್ವಿಚಕ್ರ ವಾಹನಗಳ ಮಾರಾಟ ಮತ್ತು ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬಗಳ ಪಾಲಿಗೆ ಅಗತ್ಯವಾದ ಇತರ ಕೆಲವು ಉತ್ಪನ್ನಗಳ ಮಾರಾಟವು ಇಳಿಕೆ ಕಂಡಿದೆ.

ವಿವಿಧ ಉತ್ಪನ್ನಗಳ ಮಾರಾಟ ಯಾವ ರೀತಿ ಆಗುತ್ತಿದೆ ಎಂಬುದನ್ನು ಕೇಂದ್ರ ಗಮನಿಸುತ್ತಿದೆ. ಉತ್ಪನ್ನಗಳ ಮಾರಾಟ ಪ್ರಮಾಣ ಆಧರಿಸಿ ಸುಂಕ ಹೆಚ್ಚಿಸುವ ಅಥವಾ ತಗ್ಗಿಸುವ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಜಿಎಸ್‌ಟಿ ದರಗಳನ್ನು ಜಿಎಸ್‌ಟಿ ಮಂಡಳಿ ಮೂಲಕ ವರ್ಷದ ಯಾವುದೇ ಸಂದರ್ಭದಲ್ಲಿ ಬದಲಾಯಿಸಬಹುದಾದರೂ, ಕೇಂದ್ರ ಸರ್ಕಾರವು ಹಣಕಾಸು ಮಸೂದೆ ಮೂಲಕ ಸುಂಕ, ಸೆಸ್‌ಗಳನ್ನು ಹೆಚ್ಚಿಸುವ ಅಥವಾ ಇಳಿಸುವ ಕೆಲಸ ಮಾಡುತ್ತದೆ. ಆತ್ಮನಿರ್ಭರ ಭಾರತ ಯೋಜನೆಗೆ ಬೆಂಬಲವಾಗುವ ನಿಟ್ಟಿನಲ್ಲಿ ಕಸ್ಟಮ್ಸ್ ಮತ್ತು ಕೇಂದ್ರ ಎಕ್ಸ್‌ಸೈಸ್ ಸುಂಕದಲ್ಲಿ ಮಹತ್ವದ ಬದಲಾವಣೆಗಳು ಆಗಬಹುದು ಎನ್ನಲಾಗಿದೆ.

ಕೋವಿಡ್ ಪರೀಕ್ಷೆ ಹಾಗೂ ಲಸಿಕೆಗೆ ಸಂಪನ್ಮೂಲ ಒಗ್ಗೂಡಿಸಲು ಅತ್ಯಂತ ದುಬಾರಿ ಮೌಲ್ಯದ ಕೆಲವು ಐಷಾರಾಮಿ ಉತ್ಪನ್ನಗಳ ಮೇಲೆ ಹೊಸ ಸೆಸ್ ವಿಧಿಸಬಹುದು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಡಿಎಲ್‌ಎಫ್ ಕಂಪನಿ ಐಷಾರಾಮಿ ಮನೆಗಳಿಗೆ ಹಿಂದಿನ ವರ್ಷದಲ್ಲಿ ದಾಖಲೆಯ ಬೇಡಿಕೆ ಬಂದಿದೆ. ಜರ್ಮನಿ ಮೂಲದ ಬಿಎಂಡಬ್ಲ್ಯು ಕಂಪನಿಯು 2021ರಲ್ಲಿ 8,876 ಕಾರುಗಳನ್ನು, 5,191 ದುಬಾರಿ ಬೈಕ್‌ಗಳನ್ನು ಮಾರಾಟ ಮಾಡಿದೆ. ಔಡಿ ಕಾರುಗಳಿಗೆ ಹಿಂದಿನ ವರ್ಷದಲ್ಲಿ ಬೇಡಿಕೆಯು ದುಪ್ಪಟ್ಟಾಗಿದೆ. 2020–21ರಲ್ಲಿ ದೇಶವು ಐದು ವರ್ಷಗಳ ಗರಿಷ್ಠ ಮೌಲ್ಯದ ಚಿನ್ನ ಆಮದು ಮಾಡಿಕೊಂಡಿದೆ.

ವಿಧಾನ ಪರಿಷತ್: ಹರಿಪ್ರಸಾದ್ ವಿರೋಧ ಪಕ್ಷದ ನಾಯಕ

ಬೆಂಗಳೂರು: ರಾಜ್ಯ ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾಗಿ ಬಿ.ಕೆ. ಹರಿಪ್ರಸಾದ್, ಉಪ ನಾಯಕರಾಗಿ ಕೆ. ಗೋವಿಂದರಾಜ್ ಹಾಗೂ ಮುಖ್ಯ ಸಚೇತಕರಾಗಿ ಪ್ರಕಾಶ್ ರಾಥೋಡ್ ಅವರನ್ನು ಕಾಂಗ್ರೆಸ್ ನೇಮಿಸಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಈ ನೇಮಕ ಮಾಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ. 8

ಆಜಾದ್‌ಗೆ 'ಪದ್ಮಭೂಷಣ': ಕಾಂಗ್ರೆಸ್‌ನಲ್ಲಿ ಕಚ್ಚಾಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಕಾಂಗ್ರೆಸ್‌ನ ಹಿರಿಯ ಮುಖಂಡ ಗುಲಾಂ ನಬಿ ಆಜಾದ್ ಅವರಿಗೆ 'ಪದ್ಮಭೂಷಣ' ಪ್ರಶಸ್ತಿ ಘೋಷಿಸಿರುವುದು ಆ ಪಕ್ಷದಲ್ಲಿ ಆಂತರಿಕ ಕಚ್ಚಾಟಕ್ಕೆ ಕಾರಣವಾಗಿದೆ. ಈ ಕುರಿತು ಕಾಂಗ್ರೆಸ್‌ನ ಕೆಲವು ಮುಖಂಡರು ಟ್ವೀಟರ್ ಮೂಲಕ ಪರ, ವಿರೋಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಗುಲಾಂ ನಬಿ ಆಜಾದ್

'ಆಜಾದ್ ಅವರ ಸೇವೆಯನ್ನು ರಾಷ್ಟ್ರ ಗುರುತಿಸಿದೆ. ಆದರೆ, ಕಾಂಗ್ರೆಸ್ ಅವರ ಸೇವೆಯನ್ನು ಬಯಸುವುದಿಲ್ಲ' ಎಂದು ಪಕ್ಷದ ಮುಖಂಡರ ಕಾಲೆಳೆದಿರುವ ಹಿರಿಯ ಮುಖಂಡ ಕಪಿಲ್ ಸಿಬಲ್, ಆಜಾದ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಮುಖಂಡರಾದ ಮನೀಷ್ ತಿವಾರಿ, ಶಶಿ ತರೂರ್, ಆನಂದ್ ಶರ್ಮಾ ಅವರೂ ಆಜಾದ್ ಅವರನ್ನು ಅಭಿನಂದಿಸಿದ್ದಾರೆ.

ಆದರೆ, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಟ್ವೀಟ್ ಮಾಡಿರುವ ಪಕ್ಷದ ಇನ್ನೊಬ್ಬ ಮುಖಂಡ ಜೈರಾಮ್ ರಮೇಶ್, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕಾಂಗ್ರೆಸ್ ನಾಯಕನಿಗೆ ದೇಶದ 3ನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ದಯಪಾಲಿಸುವ ಮೂಲಕ ಈಗಿರುವ ಕಂದಕವನ್ನು ಮತ್ತಷ್ಟು ವಿಸ್ತಾರಗೊಳಿಸಿದೆ ಎಂದು ಟೀಕಿಸಿದ್ದಾರೆ.

9ನೇ ಪುಟ ನೋಡಿ

ಪ್ರಶಸ್ತಿ ನಿರಾಕರಿಸಿದ ತಬಲಾ ವಾದಕ

ಕೋಲ್ಕತ್ತ (ಪಿಟಿಐ): ಕೇಂದ್ರ ಸರ್ಕಾರದ 'ಪದ್ಮಶ್ರೀ' ಪ್ರಶಸ್ತಿ ಸ್ವೀಕರಿಸಲು ನಿರಾಕರಿಸಿರುವುದಾಗಿ ಪಶ್ಚಿಮ ಬಂಗಾಳದ ತಬಲಾ ವಾದಕ ಪಂಡಿತ್ ಅನಿಂದ್ಯ ಚಟರ್ಜಿ ಹೇಳಿದ್ದಾರೆ.

'ಈಗಾಗಲೇ ನನಗಿಂತ ಚಿಕ್ಕವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. 10 ವರ್ಷಗಳ ಹಿಂದೆಯೇ ಪ್ರಶಸ್ತಿ ನೀಡಿದ್ದರೆ ಅದನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತಿದ್ದೆ' ಎಂದು ಅವರು ತಿಳಿಸಿದ್ದಾರೆ. 'ಪ್ರಶಸ್ತಿಗೆ ಆಯ್ಕೆ ಮಾಡುವುದಾಗಿ ಮಂಗಳವಾರ ದೆಹಲಿಯಿಂದ ಕರೆ ಬಂದಿತ್ತು. ಆದರೆ, ನಾನು ಅದನ್ನು ನಯವಾಗಿ ನಿರಾಕರಿಸಿ ಧನ್ಯವಾದ ತಿಳಿಸಿದೆ. ನಾನು ಪ್ರಶಸ್ತಿ ಪಡೆಯುವ ಹಂತವನ್ನು ದಾಟಿದ್ದೇನೆ. ವೃತ್ತಿಜೀವನದ ಈ ಹಂತದಲ್ಲಿ 'ಪದ್ಮಶ್ರೀ' ಸ್ವೀಕರಿಸಲು ನಾನು ಸಿದ್ಧನಿಲ್ಲ ಎಂದು ಹೇಳಿದೆ' ಎಂದು 90 ವರ್ಷ ವಯಸ್ಸಿನ ಚಟರ್ಜಿ ಅವರು ತಿಳಿಸಿದ್ದಾರೆ.

ಒಳ ಪುಟಗಳು

'ಕೋವಿಡ್ ತಗ್ಗಿಸುವಲ್ಲಿ ಸರ್ಕಾರ ಯಶಸ್ವಿ' 5

ಅತಿಥಿ ಉಪನ್ಯಾಸಕರ ನೇಮಕ: ಆನ್‌ಲೈನ್ ಕೌನ್ಸೆಲಿಂಗ್ ಇಂದಿನಿಂದ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹಿಂಸಾರೂಪ ಪಡೆದ ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆ

ಎನ್‌ಟಿಪಿಸಿ ಪರೀಕ್ಷೆ ಮುಂದೂಡಿದ ರೈಲ್ವೆ

ನವದೆಹಲಿ (ಪಿಟಿಐ): 'ನಾನ್ ಟೆಕ್ನಿಕಲ್ ಪಾಪ್ಯುಲರ್ ಕೆಟಗರಿ' (ಎನ್‌ಟಿಪಿಸಿ) ಹುದ್ದೆಗಳ ಭರ್ತಿಗಾಗಿ ನಡೆಯುತ್ತಿರುವ ಆಯ್ಕೆ ಪ್ರಕ್ರಿಯೆ ವಿರೋಧಿಸಿ ಬಿಹಾರ, ಉತ್ತರಪ್ರದೇಶದ ಹಲವೆಡೆ ಉದ್ಯೋಗಾಕಾಂಕ್ಷಿಗಳು ನಡೆಸುತ್ತಿರುವ ಪ್ರತಿಭಟನೆ ಬುಧವಾರ ಹಿಂಸಾರೂಪ ಪಡೆದಿದೆ. ಇದರ ಬೆನ್ನಲ್ಲೇ, ರೈಲ್ವೆಯು 'ಎನ್‌ಟಿಪಿಸಿ' ಹಾಗೂ 'ಲೆವೆಲ್–1' ಪರೀಕ್ಷೆಗಳನ್ನು ಮುಂದೂಡಿದೆ.

ಬಿಹಾರದಲ್ಲಿ ಪ್ಯಾಸೆಂಜರ್ ರೈಲೊಂದಕ್ಕೆ ಉದ್ಯೋಗಾಕಾಂಕ್ಷಿಗಳು ಕಲ್ಲುಗಳನ್ನು ತೂರಿದ್ದಾರೆ. ಗಯಾ ಜಂಕ್ಷನ್ ರೈಲು ನಿಲ್ದಾಣಕ್ಕೆ ನುಗ್ಗಿದ ಉದ್ರಿಕ್ತರ ಗುಂಪೊಂದು, ಭಭುವಾ–ಪಟ್ನಾ ಇಂಟರ್‌ಸಿಟಿ ಎಕ್ಸ್‌ಪ್ರೆಸ್‌ಗೆ ಬೆಂಕಿ ಹಚ್ಚಿದೆ. ಲಾಠಿ ಪ್ರಹಾರ, ಅಶ್ರುವಾಯು ಬಳಸಿ ಪೊಲೀಸರು ಪ್ರತಿಭಟನಾಕಾರರನ್ನು ಚದುರಿಸಿದ್ದಾರೆ.

'ಪಟ್ನಾ ಹೊರವಲಯದ ತಾರೆಗನಾ, ಜೆಹಾನಾಬಾದ್‌ನಲ್ಲಿಯೂ ಪ್ರತಿಭಟನೆ ನಡೆಸಿದರು' ಎಂದು ಪೂರ್ವ–ಮಧ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ರಾಜೇಶ್‌ಕುಮಾರ್ ತಿಳಿಸಿದ್ದಾರೆ.

ಕೆಲ ನಿಲ್ದಾಣಗಳಲ್ಲಿ ಹಳಿಗಳ ಮೇಲೆ ಅಭ್ಯರ್ಥಿಗಳು ಮಂಗಳವಾರ ಸಹ ಕುಳಿತು ಪ್ರತಿಭಟಿಸಿದ್ದರಿಂದಾಗಿ ರೈಲು ಸಂಚಾರ ವ್ಯತ್ಯಯಗೊಂಡಿತ್ತು.

ಮುಂದೂಡಿಕೆ: 'ಫೆ.15ರಂದು ಆರಂಭವಾಗಬೇಕಿದ್ದ ಸಿಬಿಟಿಯ 2ನೇ ಹಂತದ ಪರೀಕ್ಷೆ ಹಾಗೂ ಫೆ. 23ರಿಂದ ಆರಂಭವಾಗಬೇಕಿದ್ದ ಮೊದಲ ಹಂತದ ಪರೀಕ್ಷೆಯನ್ನು ಮುಂದೂಡಲಾಗಿದೆ' ಎಂದು ರೈಲ್ವೆ ಮೂಲಗಳು ಹೇಳಿವೆ.

ವಿವಿಧ ರೈಲ್ವೆ ನೇಮಕಾತಿ ಮಂಡಳಿಗಳು (ಆರ್‌ಆರ್‌ಬಿ) ನಡೆಸಿರುವ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರ ಹಾಗೂ ಅನುತ್ತೀರ್ಣಗೊಂಡವರ ಅಹವಾಲುಗಳನ್ನು ಆಲಿಸುವ ಸಂಬಂಧ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ರೈಲ್ವೆ ವಕ್ತಾರ ತಿಳಿಸಿದ್ದಾರೆ.

ಪ್ರತಿಭಟನೆ ಏಕೆ?: ಪರೀಕ್ಷೆಯನ್ನು ಎರಡು ಹಂತಗಳಲ್ಲಿ ನಡೆಸುವ ರೈಲ್ವೆಯ ನಿರ್ಧಾರವನ್ನು ಉದ್ಯೋಗಾಕಾಂಕ್ಷಿಗಳು ವಿರೋಧಿಸಿದ್ದು, ಸೋಮವಾರದಿಂದಲೇ ಪ್ರತಿಭಟನೆಗಿಳಿದಿದ್ದಾರೆ.

'ಅಂತಿಮ ಆಯ್ಕೆಗಾಗಿ ಅಭ್ಯರ್ಥಿಗಳು ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ಎದುರಿಸಬೇಕು ಎಂದು ರೈಲ್ವೆ ಹೇಳುತ್ತಿದೆ. ಇದು ಮೊದಲ ಹಂತದ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮಾಡುತ್ತಿರುವ ವಂಚನೆ' ಎಂದು ಪ್ರತಿಭಟನಕಾರರು ಹೇಳುತ್ತಾರೆ.

'ನಿಮ್ಮ ಸ್ವತ್ತುಗಳಿವು; ನಾಶ ಮಾಡಬೇಡಿ'

'ನಿಮ್ಮ ಅಹವಾಲುಗಳನ್ನು ಆಲಿಸಿ, ಸಮಸ್ಯೆ ಇತ್ಯರ್ಥಗೊಳಿಸಲಾಗುವುದು. ಹೀಗಾಗಿ ಯಾರೂ ಸಾರ್ವಜನಿಕ ಸ್ವತ್ತುಗಳನ್ನು ಹಾಳು ಮಾಡಬಾರದು' ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಪ್ರತಿಭಟನಕಾರರಿಗೆ ಬುಧವಾರ ಮನವಿ ಮಾಡಿದರು.'ಇದು ನಿಮ್ಮದೇ ಸ್ವತ್ತು. ಏಕೆ ಹಾಳು ಮಾಡುತ್ತಿದ್ದೀರಿ' ಎಂದು ಪ್ರಶ್ನಿಸಿದ ಅವರು, 'ಸಾರ್ವಜನಿಕ ಆಸ್ತಿಯನ್ನು ಹೀಗೆ ಹಾಳುಗೆಡಹಿದರೆ, ತಪ್ಪಿತಸ್ಥರ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದೂ ಎಚ್ಚರಿಸಿದ್ದಾರೆ.

ದೂರು ಸಲ್ಲಿಕೆಗೆ ಫೆ.16ರವರೆಗೆ ಅವಕಾಶ

ಅಭ್ಯರ್ಥಿಗಳು ತಮ್ಮ ದೂರು/ಅಹವಾಲುಗಳನ್ನು rrbcommittee@railnet.gov.in ಈ ವಿಳಾಸಕ್ಕೆ ಕಳುಹಿಸಬೇಕು. ಫೆ. 16 ಕೊನೆಯ ದಿನವಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಉನ್ನತಾಧಿಕಾರ ಸಮಿತಿಯು ದೂರುಗಳನ್ನು ಪರಿಶೀಲಿಸಿ, ಮಾರ್ಚ್ 4ರಂದು ತನ್ನ ಶಿಫಾರಸುಗಳನ್ನು ಸಲ್ಲಿಸಲಿದೆ.

ಚಿತ್ರ 9

ವಿಶೇಷ ಯೋಜನೆಗೆ ನಿಗದಿಯಾಗಿದ್ದ ₹250 ಕೋಟಿ ವಾಪಸ್

ಅಲೆಮಾರಿಗಳ ಸ್ವಂತ ಸೂರಿನ ಕನಸು ಭಗ್ನ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳ ನಡುವಿನ ಸಮನ್ವಯತೆ ಕೊರತೆಯಿಂದ ವಸತಿಹೀನ ಅಲೆಮಾರಿ, ಅರೆ ಅಲೆಮಾರಿ ಮತ್ತು ಸೂಕ್ಷ್ಮ ಸಮುದಾಯಗಳ 14 ಸಾವಿರಕ್ಕೂ ಹೆಚ್ಚು ಕುಟುಂಬಗಳು ವಸತಿ ಯೋಜನೆಯಿಂದ ವಂಚಿತವಾಗಿವೆ.

ಸ್ವಂತ ವಿಳಾಸ, ಆಧಾರ್ ಕಾರ್ಡ್, ಪಡಿತರ ಚೀಟಿಯೇ ಇಲ್ಲದೆ ಬೀದಿಬೀದಿ ಅಲೆಯುವ ಸಮುದಾಯಗಳ ಸ್ವಂತ ಸೂರಿನ ಕನಸು ನುಚ್ಚು ನೂರಾಗಿದೆ ಎಂಬುದು ಅಲೆಮಾರಿ ಸಮುದಾಯಗಳ ಅಳಲು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಸಮುದಾಯಗಳ ದೌರ್ಜನ್ಯ ಸಂತ್ರಸ್ತರು, ಮಾಜಿ ದೇವದಾಸಿಯರು, ಅಂತರ್ಜಾತಿ ವಿವಾಹಿತ ದಂಪತಿಗಳು, ಒಂಟಿ ಮಹಿಳೆಯರು, ಮೀನುಗಾರರಿಗೆ ವಿಶೇಷವಾಗಿ ವಸತಿ ಯೋಜನೆ ಮುಖ್ಯಮಂತ್ರಿ ಘೋಷಣೆ ಮಾಡಿದ್ದರು.

ಸಾಂದರ್ಭಿಕ ಚಿತ್ರ

ಪ್ರಜಾವಾಣಿ ವಿಶೇಷ

ಅಂಬೇಡ್ಕರ್ ವಸತಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳ ಮೂಲಕ ನೀಡುವ ಮನೆಗಳನ್ನು ಈ ಅತಿಸೂಕ್ಷ್ಮ ಸಮುದಾಯಗಳು ಪಡೆಯಲು ಸಾಧ್ಯವಿಲ್ಲದ ಕಾರಣ ಪ್ರತ್ಯೇಕವಾಗಿ ಮನೆ ನಿರ್ಮಿಸಿಕೊಡಬೇಕು ಎಂಬುದು ಅಲೆಮಾರಿ ಸಮುದಾಯಗಳ ಹೋರಾಟಗಾರರ ಒತ್ತಾಯವಾಗಿತ್ತು. ಇದಕ್ಕೆ ಒಪ್ಪಿದ್ದ ಸರ್ಕಾರ, ವಸತಿ ಯೋಜನೆ ಅನುಷ್ಠಾನಕ್ಕೆ ಪ್ರತ್ಯೇಕ ಅನುದಾನ ನಿಗದಿ ಮಾಡಿತ್ತು.

ಪರಿಶಿಷ್ಟ ಜಾತಿಗಳ ಉಪಯೋಜನೆ(ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ(ಟಿಎಸ್‌ಪಿ) ಬಜೆಟ್‌ನಲ್ಲೂ ಈ ಯೋಜನೆಗೆ ಅನುಮೋದನೆ ದೊರೆತಿತ್ತು.

8ನೇ ಪುಟ ನೋಡಿ

'ಸಭೆ ನಡೆಸಿ ಪರಿಹಾರ ಮಾರ್ಗ'

ಅಲೆಮಾರಿ ಸಮುದಾಯಗಳ ವಸತಿ ಯೋಜನೆ ಸಂಬಂಧ ಶುಕ್ರವಾರ ಸಭೆ ಕರೆಯಲಾಗಿದ್ದು, ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲಾಗುವುದು ಎಂದು ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಸ್. ಬಸವರಾಜು ತಿಳಿಸಿದರು. ಚಾಲ್ತಿ ಯೋಜನೆಗೆ ಅನುದಾನ ಕೋರಿ ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಈ ವಿಶೇಷ ಯೋಜನೆಗೆ ಅನುದಾನ ನೀಡಲಾಗಿತ್ತು. ಸ್ಪಷ್ಟನೆ ಇಲ್ಲದೆ ಅನುದಾನ ಖರ್ಚು ಮಾಡಿದರೆ ಆಕ್ಷೇಪ ವ್ಯಕ್ತವಾಗಲಿದೆ ಎಂಬ ಕಾರಣಕ್ಕೆ ಹಣಕಾಸು ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸ್ಪಷ್ಟನೆ ಕೋರಲಾಗಿತ್ತು ಎಂದು ಹೇಳಿದರು.

5 ಲಕ್ಷ ಹೊಸ ಮನೆಗಳ ಗುರಿಯನ್ನು ಸರ್ಕಾರ ನಿಗದಿ ಮಾಡಿದೆ. ಸೂಕ್ಷ್ಮ ಸಮುದಾಯಗಳಿಗೂ ಇದರಲ್ಲೇ ವಸತಿ ಸೌಕರ್ಯ ಕಲ್ಪಿಸಿ ಎಂದು ಹಣಕಾಸು ಇಲಾಖೆ ತಿಳಿಸಿದೆ. ಈ ಬಗ್ಗೆ ಚರ್ಚೆ ನಡೆಸಿ ಮಾರ್ಗೋಪಾಯ ಕಂಡುಕೊಳ್ಳಲಾಗುವುದು ಎಂದು ಅವರು 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

ಅಲೆಮಾರಿ ಸಮುದಾಯಗಳ ವಸತಿ ಯೋಜನೆ ಸಂಬಂಧ ಸದ್ಯದಲ್ಲೇ ಸಭೆ ಕರೆಯಲಾಗುವುದು. ಈ ಸಮುದಾಯಗಳಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಲಾಗುವುದು

ಕೋಟ ಶ್ರೀನಿವಾಸ ಪೂಜಾರಿ
ಸಮಾಜ ಕಲ್ಯಾಣ ಸಚಿವ

www.licindia.in

LIC ಪಾಲಿಸಿದಾರರ ಅವಗಾಹನೆಗೆ :

ಸದಾ ಸಿದ್ಧರಾಗಿರುವುದು ಜೀವನದ ಅತ್ಯುತ್ತಮ ಕೆಲಸ.

ಭಾರತ ಸರಕಾರವು ಲೈಫ್ ಇನ್ಶುರನ್ಸ್ ಕಾರ್ಪೊರೇಶನ್ ಆ್ಯಕ್ಟ್, 1956ನ್ನು ಪರಿಷ್ಕರಿಸಿ ಕಾರ್ಪೊರೇಶನ್‌ಗೆ ತನ್ನ ಪ್ರಸ್ತಾವಿತ ಪಬ್ಲಿಕ್ ಇಶ್ಯೂದಲ್ಲಿ ಪಾಲಿಸಿದಾರರಿಗೆ ಪ್ರೈಪೋಟಿಯ ಆಧಾರದಲ್ಲಿ ಶೇರ್‌ಗಳನ್ನು ರಿಜರ್ವ್ ಮಾಡಿರಿಸಲು ಅನುಮತಿ ನೀಡಿದೆ.*
ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು, ಪಾಲಿಸಿದಾರರು ಕೆಳಗಿನ ಎರಡು ಹೆಜ್ಜೆಗಳನ್ನು ಕೈಗೊಳ್ಳಬೇಕಾಗುತ್ತದೆ.

1 LICಯಲ್ಲಿ ನಿಮ್ಮ ವೈಯಕ್ತಿಕ ದಾಖಲೆಗಳನ್ನು ನವೀಕರಿಸಬೇಕು

- www.licindia.inನಲ್ಲಿ ಸಂದರ್ಶಿಸಿರಿ ಮತ್ತು ಆನ್‌ಲೈನ್‌ನಲ್ಲಿ ನಿಮ್ಮ ಪರಮನೆಂಟ್ ಅಕೌಂಟ್ ನಂಬರ್ (PAN) ನೋಂದಾಯಿಸಲು ಐಕಾನ್‌ನ ಮೇಲೆ ಕ್ಲಿಕ್ ಮಾಡಿರಿ.
- ನಿಮ್ಮ ಜನನ ತಾರೀಖು, ಲಿಂಗ, ಈಮೇಲ್ ಐಡಿ, PAN, ಪೂರ್ತಿ ಹೆಸರು, ಮೊಬೈಲ್ ನಂಬರ್ ಮತ್ತು LIC ಪಾಲಿಸಿ ನಂಬರ್ ದಾಖಲು ಮಾಡಿರಿ.
- ನಿಮ್ಮ ಎಲ್ಲಾ LIC ಪಾಲಿಸಿಗಳಿಗಾಗಿ PAN ನವೀಕರಣಕ್ಕಾಗಿ ನಿರ್ದೇಶನಗಳನ್ನು ಪಾಲಿಸಿರಿ.

ಏನಾದರೂ ಸಹಾಯ ಬೇಕಾದಲ್ಲಿ ನಿಮ್ಮ LIC ಏಜೆಂಟರನ್ನು ಸಂಪರ್ಕಿಸಿರಿ.

2 ಒಂದು DEMAT ಅಕೌಂಟ್ ತೆರೆಯಿರಿ (ಈಗಾಗಲೇ ನಿಮ್ಮಲ್ಲಿ ಇಲ್ಲದಿದ್ದರೆ)

- DEMAT ಅಕೌಂಟ್ ತೆರೆಯಲು ರಿಜಿಸ್ಟರ್ಡ್ ಡಿಪಾಜಿಟರಿ ಪಾರ್ಟಿಸಿಪೆಂಟ್‌ಗಳಿಗಾಗಿ (DP) ಈ ಕೆಳಗಿನ ಯಾವುದಾದರೂ ವೆಬ್‌ಸೈಟನ್ನು ಸಂದರ್ಶಿಸಿರಿ :
  NSDL:
  https://sebi.gov.in/sebiweb/other/OtherAction.do?doRecognisedFpi=yes&intmId=19
  CDSL:
  https://sebi.gov.in/sebiweb/other/OtherAction.do?doRecognisedFpi=yes&intmId=18
- DEMAT ಅಕೌಂಟ್ ತೆರೆಯಲು DPಗೆ ನೀವು ಈ ಕೆಳಗಿನವುಗಳನ್ನು ಒದಗಿಸಬೇಕಾಗುತ್ತದೆ :
  - ಇತ್ತೀಚಿನ ಫೋಟೊಗ್ರಾಫ್
  - PAN ಕಾರ್ಡ್
  - ವಿಳಾಸದ ಪುರಾವೆ
  - ಕ್ಯಾನ್ಸಲ್ಡ್ ಚೆಕ್
- ಇನ್ನೂ ಹೆಚ್ಚಿನ ಮಾಹಿತಿಯನ್ನು DP ನೀಡ ಬೇಕಾಗಬಹುದು.

ಏನಾದರೂ ಸಹಾಯ ಬೇಕಾದಲ್ಲಿ ನಿಮ್ಮ ಬ್ಯಾಂಕರ್ ಅಥವಾ ಬ್ರೋಕರನ್ನು ಸಂಪರ್ಕಿಸಿರಿ.

ಈ ಕೆಳಗಿನವುಗಳನ್ನು ದಯವಿಟ್ಟು ಗಮನಿಸಿರಿ
ಈ ನೋಟೀಸು ಅಥವಾ ನಮ್ಮ ಶೇರ್‌ಹೋಲ್ಡರ್‌ಗಳೊಂದಿಗೆ ನಾವು ಹಂಚಿಕೊಂಡಿರುವ ಯಾವುದೇ ಮಾಹಿತಿಯು ಕಾರ್ಪೊರೇಶನ್‌ನ ಇಕ್ವಿಟಿ ಶೇರ್‌ಗಳ ಆಫರ್ ಎಂದು ತಿಳಿಯಬಾರದು. | ಡಿಪಾಜಿಟರಿ ಪಾರ್ಟಿಸಿಪೆಂಟರನ್ನು ಸ್ವತಃ ಪಾಲಿಸಿದಾರಕರೇ ಸಂಪರ್ಕಿಸಬೇಕು ಮತ್ತು DEMAT ಅಕೌಂಟ್ ಮತ್ತು ಅದರ ಕಾರ್ಯ ನಿರ್ವಹಣೆ ಅವರದ್ದೇ ಜವಾಬ್ದಾರಿಯಾಗಿರುತ್ತದೆ. ಸಂಬಂಧಪಟ್ಟ ಎಲ್ಲಾ ವೆಚ್ಚಗಳನ್ನು ಪಾಲಿಸಿದಾರಕರೇ ವಹಿಸಿಕೊಳ್ಳಬೇಕಾಗುತ್ತದೆ. | ಯಾವುದೇ ಪ್ರಸ್ತಾವಿತ ನೀಡಿಕೆಯಲ್ಲಿ ಶೇರ್‌ಗಳ ರಿಜರ್ವೇಶನ್ ಆಗಿದ್ದರೂ ಕೂಡ, ಅರ್ಜಿ ಮಾಡಿದ ಯಾವುದೇ ಅಥವಾ ಎಲ್ಲಾ ಇಕ್ವಿಟಿ ಶೇರ್‌ಗಳನ್ನು ಪಾಲಿಸಿದಾರಕರಿಗೆ ಅಲಾಟ್ ಮಾಡಲಾಗುವುದೆಂಬ ಯಾವುದೇ ಆಶ್ವಾಸನೆ ನೀಡಲಾಗುತ್ತಿಲ್ಲ. | ತಮ್ಮ ಇಕ್ವಿಟಿ ಶೇರ್‌ಗಳ ಕಾರ್ಯದಕ್ಷತೆಯ ಯಾವ ಗ್ಯಾರಂಟಿಯನ್ನೂ ಕಾರ್ಪೊರೇಶನ್ ನೀಡುತ್ತಿಲ್ಲ ಮತ್ತು ತಮ್ಮ ಇಕ್ವಿಟಿಗಳಲ್ಲಿ ಮಾಡಲಾಗುವ ಪಬ್ಲಿಕ್ ಆಫರಿಂಗ್‌ನಲ್ಲಿನ ವಿನಿಯೋಜನೆಗಳಿಗೆ ಸಂಬಂಧಿಸಿದ ಅಪಾಯ ಸಾಧ್ಯತೆಗಳ ಬಗ್ಗೆ ವಿನಿಯೋಜಕರು ಜಾಗೃತರಾಗಿರಬೇಕು. ಪಾಲಿಸಿದಾರಕರಿಗಾಗಿ ಶೇರ್‌ಗಳ ಪ್ರಸ್ತಾವಿತ ರಿಜರ್ವೇಶನ್ ಬಗ್ಗೆ ಅತಿ ಮುಖ್ಯ ಮಾಹಿತಿಗಾಗಿ ಸಂದರ್ಶಿಸಿರಿ https://licindia.in/ipo
*ಪ್ರಸ್ತಾವಿತ IPO ವಿವರಗಳನ್ನು ಅದು ಒಮ್ಮೆ ಅಂತಿಮ ರೂಪ ಪಡೆದಾಗ ತಿಳಿಸಲಾಗುತ್ತದೆ.

ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ
LIC/RKS/2021-22/39/KAN

ನಮ್ಮನ್ನು ಫಾಲೋ ಮಾಡಿರಿ : LIC India Forever | IRDAI Regn No.: 512

ನಿವೃತ್ತ ಉಪ ಕಾರ್ಯದರ್ಶಿ– 4 ಭಾಗಿ • ತನಿಖೆಗೆ ಪೂರ್ವಾನುಮತಿ ಕೋರಿ ಪ್ರಸ್ತಾವ

ಬಿಡಿಎ: ಬದಲಿ ನಿವೇಶನ – ಮತ್ತೊಂದು ಅಕ್ರಮ

• ಮಂಜುನಾಥ ಹೆಬ್ಬಾರ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಡಿಎ) ಮತ್ತೊಂದು ಬದಲಿ ನಿವೇಶನ ಅಕ್ರಮ ನಡೆದಿದ್ದು, ಇದರಲ್ಲಿ ಪ್ರಾಧಿಕಾರದ ಉಪ ಕಾರ್ಯದರ್ಶಿಯೇ ಭಾಗಿಯಾಗಿದ್ದಾರೆ.

ಪ್ರಾಧಿಕಾರದ ಉಪಕಾರ್ಯದರ್ಶಿ– 4 ಆಗಿದ್ದ ಬಿ.ರಾಜು (ನಿವೃತ್ತರಾಗಿದ್ದಾರೆ) ಅವರು ಪ್ರತಿಷ್ಠಿತ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಿದ್ದಾರೆ. ಈ ಪ್ರಕರಣದಲ್ಲಿ ಅಧಿಕಾರಿಯು ಕರ್ತವ್ಯದಲ್ಲಿ ಲೋಪವೆಸಗಿರುವುದು ಲಭ್ಯವಿರುವ ದಾಖಲಾತಿಗಳ ಪರಿಶೀಲನೆಯಿಂದ ಮೇಲ್ನೋಟಕ್ಕೆ ಗೊತ್ತಾಗಿದೆ. ಅವರ ವಿರುದ್ಧ ವಿವರವಾದ ವಿಚಾರಣೆ/ತನಿಖೆ ಕೈಗೊಳ್ಳಲು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರ ಕಲಂ 17(ಎ) ರನ್ವಯ ಪೂರ್ವಾನುಮತಿ ನೀಡಬೇಕು ಎಂದು ಕೋರಿ ಬಿಡಿಎ ಆಯುಕ್ತರು ನಗರಾಭಿವೃದ್ಧಿಗೆ ಇಲಾಖೆಗೆ 2022ರ ಜನವರಿ 10ರಂದು ಪ್ರಸ್ತಾವನೆ ಸಲ್ಲಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಏನಿದು ಪ್ರಕರಣ: ರಾಜಾಜಿನಗರ ಕೈಗಾರಿಕಾ ಬಡಾವಣೆಯ ಎರಡನೇ ಹಂತದಲ್ಲಿ ಎಂ.ಮರಿಸ್ವಾಮಪ್ಪ ಎಂಬುವರಿಗೆ ಕೈಗಾರಿಕಾ ನಿವೇಶನ (ಸಂಖ್ಯೆ: 19/ಬಿ) ಹಂಚಿಕೆಯಾಗಿತ್ತು. ನಂತರ ನಿವೇಶನವನ್ನು ಅವರ ಪುತ್ರಿ ಸರೋಜಾ ಅವರ ಹೆಸರಿಗೆ ವರ್ಗಾಯಿಸಲಾಗಿತ್ತು.

ಈ ನಿವೇಶನದಲ್ಲಿ ವಿದ್ಯುತ್ ಹೈಟೆನ್ಶನ್ ಮಾರ್ಗ ಹಾದುಹೋಗಿರುವ ಕಾರಣ ಸರೋಜಾ ಅವರು ಬದಲಿ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದರು. ಅದೇ ಬಡಾವಣೆಯಲ್ಲಿ/ ಇತರ ಬಡಾವಣೆಯಲ್ಲಿ ವ್ಯತ್ಯಾಸದ ಹಣ ಕಟ್ಟಿಸಿಕೊಂಡು ಬದಲಿ ನಿವೇಶನ ಮಂಜೂರು ಮಾಡಲು ಬದಲಿ ನಿವೇಶನ ಹಂಚಿಕೆ ಸಮಿತಿ ತೀರ್ಮಾನಿಸಿತ್ತು.

ಆದರೆ, ಬದಲಿ ನಿವೇಶನವನ್ನು ಪ್ರತಿಷ್ಠಿತ ಬಡಾವಣೆಗಳಲ್ಲಿ ಹಂಚಿಕೆ ಮಾಡಿ, ಹಂಚಿಕೆ ಪತ್ರಗಳನ್ನು ನೀಡಲಾಗಿದೆ. ಜತೆಗೆ, 10,740 ಚದರ ಅಡಿಗಳಷ್ಟು ಹೆಚ್ಚುವರಿ ನಿವೇಶನ ಹಂಚಿಕೆ ಮಾಡಲಾಗಿದೆ. ಅಲ್ಲದೇ, ಬದಲಿ ನಿವೇಶನ ಹಂಚಿಕೆಗೆ ಆಯುಕ್ತರ ಅನುಮೋದನೆಯನ್ನೂ ಪಡೆದಿರಲಿಲ್ಲ.

ಬದಲಿ ನಿವೇಶನ ಹಂಚಿಕೆಯಾದ ನಂತರ ಅವುಗಳನ್ನು ಸರೋಜಾ ಅವರು ಶುದ್ಧ ಕ್ರಯಪತ್ರ ನೋಂದಾಯಿಸಿಕೊಳ್ಳದೆಯೇ ಡಿ.ಮೋಹನ್‌ರಾಜ್ ಎಂಬುವವರಿಗೆ ಮಾರಾಟ ಮಾಡಿದ್ದರು. ಅವರು ನಿವೇಶನಗಳ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಾರೆ.

'ಪ್ರಾಧಿಕಾರದ ನಿರ್ಣಯದಂತೆ ಈ ಹಿಂದೆಯೇ ಹೈಟೆನ್ಷನ್ ಕೆಳಗೆ ಬರುವ ಜಮೀನಿಗೆ ಮತ್ತು ಉಪಯೋಗಿಸಿಕೊಳ್ಳಲು ಯೋಗ್ಯವಾಗಿರುವ ಜಮೀನಿಗೆ ಚದರ ಗಜಕ್ಕೆ ಇಂತಿಷ್ಟು ಎಂದು ಪ್ರತ್ಯೇಕ ದರ ನಿಗದಿಪಡಿಸಿ ಶುದ್ಧ ಕ್ರಯ ಪತ್ರ ನೋಂದಾಯಿಸಿಕೊಡಲಾಗಿದೆ. ಬದಲಿ ನಿವೇಶನ ಹಂಚಿಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೂ ಪ್ರಾಧಿಕಾರದ ಸಿಬ್ಬಂದಿ ಬದಲಿ ನಿವೇಶನ ಹಂಚಿಕೆ ಮಾಡಿ ಕರ್ತವ್ಯ ಲೋಪವೆಸಗಿದ್ದಾರೆ' ಎಂದು ಆಯುಕ್ತರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಬಿ.ರಾಜು ಅವರು 2021ರ ಮೇ 31ರಂದು ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ.

ನಗರಾಭಿವೃದ್ಧಿ ಇಲಾಖೆ ಮೀನಮೇಷ

ವಿವಿಧ ಅಕ್ರಮಗಳ ಭಾಗಿಯಾದ ಅಧಿಕಾರಿಗಳ ವಿರುದ್ಧ ವಿಚಾರಣೆಗೆ ಪೂರ್ವಾನುಮತಿ ನೀಡುವಂತೆ ಬಿಡಿಎ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ 15 ದಿನಗಳು ಕಳೆದಿವೆ.

ಈ ಪ್ರಸ್ತಾವನೆಯನ್ನು ಪ್ರಾಧಿಕಾರದ ವಿಜಿಲೆನ್ಸ್ ಅಧಿಕಾರಿ (ಉಪ ಕಾರ್ಯದರ್ಶಿ) ಪರಿಶೀಲನೆ ನಡೆಸಿ ಸಕ್ಷಮ ಪ್ರಾಧಿಕಾರವಾದ ಮುಖ್ಯಮಂತ್ರಿಯವರ ಅನುಮೋದನೆಗೆ ಕಳುಹಿಸಬೇಕು. ಆದರೆ, 15 ದಿನಗಳು ಕಳೆದರೂ ಮುಖ್ಯಮಂತ್ರಿ ಸಚಿವಾಲಯಕ್ಕೆ ಅವರು ಕಡತ ಕಳುಹಿಸಿಲ್ಲ ಎಂದು ಮೂಲಗಳು ಹೇಳಿವೆ.

ಬಿಡಿಎನಲ್ಲಿ ಭೂಸ್ವಾಧೀನ, ಪರಿಹಾರ ಪಾವತಿ, ನಿವೇಶನಗಳ ಹಂಚಿಕೆ, ಸಗಟು ನಿವೇಶನಗಳ ಮಂಜೂರಾತಿ, ಭೂಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳ ಡಿನೋಟಿಫಿಕೇಷನ್ ಸೇರಿದಂತೆ ಹಲವು ಬಗೆಯ ಅಕ್ರಮಗಳು ನಡೆದಿವೆ. ಇದರಲ್ಲಿ 10ಕ್ಕೂ ಅಧಿಕ ಕೆಎಎಸ್ ಅಧಿಕಾರಿಗಳು ಭಾಗಿಯಾಗಿದ್ದಾರೆ.

ಪ್ರಾಧಿಕಾರದಲ್ಲಿ ನಡೆದಿರುವ ಎಲ್ಲ ಅಕ್ರಮಗಳ ಕುರಿತು ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ ನೀಡಿದ್ದರು. ಮುಖ್ಯಮಂತ್ರಿ ಅವರ ಸೂಚನೆಯ ಬಳಿಕವೂ ಅನುಮತಿ ನೀಡಲು ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ ಎಂದು ಬಿಡಿಎ ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಕೋಲಾರ: ಶಾಲೆಯಲ್ಲಿ ನಮಾಜ್ ಮುಖ್ಯ ಶಿಕ್ಷಕಿ ತಲೆದಂಡ

ಕೋಲಾರ: ಜಿಲ್ಲೆಯ ಮುಳಬಾಗಿಲಿನ ಸೋಮೇಶ್ವರಪಾಳ್ಯದ ಬಳೇ ಚೆಂಗಪ್ಪ ಸರ್ಕಾರಿ ಕನ್ನಡ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ನಮಾಜ್ ಮಾಡಲು ಅವಕಾಶ ನೀಡಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಶಾಲೆಯ ಮುಖ್ಯ ಶಿಕ್ಷಕಿ ಎಸ್.ಎಂ.ಉಮಾದೇವಿ ಅವರನ್ನು ಅಮಾನತು ಮಾಡಲಾಗಿದೆ.

ಶಾಲೆಯಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ನಮಾಜ್ ಮಾಡಲು ಅವಕಾಶ ನೀಡಿದ್ದರಿಂದ ವಿವಾದ ಸೃಷ್ಟಿಯಾಗಿತ್ತು. ಹೀಗಾಗಿ ಸ್ಥಳೀಯ ಶಾಸಕರು ಹಾಗೂ ಜಿಲ್ಲಾಧಿಕಾರಿಯು ಪ್ರಕರಣ ಸಂಬಂಧ ತನಿಖೆ ನಡೆಸಿ ವರದಿ ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಆದೇಶಿಸಿದ್ದರು.

ಬಳಿಕ ಡಿಡಿಪಿಐ ರೇವಣ ಸಿದ್ದಪ್ಪ ಅವರು ಶಾಲೆಗೆ ಭೇಟಿ ಕೊಟ್ಟು ಉಮಾದೇವಿ ಮತ್ತು ಸಹ ಶಿಕ್ಷಕರ ವಿಚಾರಣೆ ನಡೆಸಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ್ದರು. ಇದರ ಬೆನ್ನಲ್ಲೇ ಮುಳಬಾಗಿಲು ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಡಿ. ಗಿರಿಜೇಶ್ವರಿ ದೇವಿ ಅವರು ಉಮಾದೇವಿ ಅವರನ್ನು ಕರ್ತವ್ಯ ಲೋಪದ ಆರೋಪದ ಮೇಲೆ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

'ಸರ್ಕಾರವನ್ನು ಮಾಧ್ಯಮ ಎಚ್ಚರಿಸಲಿ'

ಬೆಂಗಳೂರು: 'ಜನತಂತ್ರ ವ್ಯವಸ್ಥೆಯಲ್ಲಿ ಮಾಧ್ಯಮವು ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಬೇಕು. ಬದಲಾದ ಸನ್ನಿವೇಶದಲ್ಲಿ ಮಾಧ್ಯಮವೂ ರಾಜಕೀಯ ಪಕ್ಷಗಳ ಕೈಗೊಂಬೆಯಂತೆ ಕಾರ್ಯನಿರ್ವಹಿಸುತ್ತಿವೆ' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಬೇಸರ ವ್ಯಕ್ತಪಡಿಸಿದರು.

ನಚ್ಚಿ ಬಳಗ ನಗರದಲ್ಲಿ ಬುಧವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ 'ಚಕ್ರವರ್ತಿಯಾಗದ ನಚ್ಚಿ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು. 'ಮಾಧ್ಯಮದಲ್ಲಿ ಈಗ ನೇರ ಬರವಣಿಗೆ ಹಾಗೂ ಹೇಳಿಕೆಗಳು ಕಾಣಸಿಗುವುದಿಲ್ಲ. ಪತ್ರಕರ್ತರಲ್ಲಿನ ಬದ್ಧತೆಯೂ ಮಾಯವಾಗುತ್ತಿದೆ. ಜನತಂತ್ರ ವ್ಯವಸ್ಥೆಯಲ್ಲಿ ಮಾಧ್ಯಮ ಪಾಠದ ಮನೆಯಾಗಬೇಕು. ಆದರೆ, ಈಗ ಅದು ಕುಸಿತದ ಹಾದಿ ಹಿಡಿದಿದೆ. ರಾಜಕಾರಣ ಮತ್ತು ಮಾಧ್ಯಮ ಒಂದೇ ಎಂಬಂತಾಗಿದ್ದು, ರಾಜಕೀಯ ಪಕ್ಷಗಳ ಹಿಡಿತಕ್ಕೆ ಒಳಗಾಗುತ್ತಿವೆ. ಈ ಕ್ಷೇತ್ರದ ಹಿರಿಯರು ಜವಾಬ್ದಾರಿ ತೆಗೆದುಕೊಂಡು, ಸರಿಯಾದ ಹಾದಿಯಲ್ಲಿ ಮಾಧ್ಯಮ ಸಾಗುವಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, 'ನಚ್ಚಿ ಅವರಿಗೆ ಎಲ್ಲ ವಿಷಯದ ಬಗ್ಗೆಯೂ ಮಾಹಿತಿ ಇರುತ್ತಿತ್ತು. ಅವರು ತಮ್ಮದೇ ಆದ ರೀತಿಯಲ್ಲಿ ಬದುಕು ನಡೆಸಿ, ಪತ್ರಿಕೋದ್ಯಮ ಕ್ಷೇತ್ರದಲ್ಲಿ ಛಾಪು ಮೂಡಿಸಿದ್ದಾರೆ. ಇಂತಹ ಪತ್ರಕರ್ತರ ಬದುಕು, ಬರಹಗಳನ್ನು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ತಿಳಿಸುವ ಕೆಲಸವಾಗಬೇಕು. ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ನಾಲ್ಕನೆ ಅಂಗ. ಅದು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಿ, ಸಮಾಜ ಸುಧಾರಣೆಗೆ ಶ್ರಮಿಸಬೇಕು' ಎಂದು ತಿಳಿಸಿದರು.

'ಅರ್ಚಕರು ಸೇರಿ ಸಂಕಷ್ಟಕ್ಕೆ ಸಿಲುಕಿದವರಿಗೆ ನೆರವು'

ಬೆಂಗಳೂರು: 'ಆರ್ಥಿಕವಾಗಿ ಸಂಕಷ್ಟದಲ್ಲಿರುವ ಬ್ರಾಹ್ಮಣ ಸಮುದಾಯದ ಅರ್ಚಕರು ಹಾಗೂ ಅಡುಗೆ ಕೆಲಸದವರ ಅಭ್ಯುದಯಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಭರವಸೆ ನೀಡಿದರು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಾಸಭೆಯ ನವೀಕೃತ ವೆಬ್ ಪೋರ್ಟಲ್ ಲೋಕಾರ್ಪಣೆ ಮಾಡಿ ಮಾತನಾಡಿದರು. 'ನೂತನ ಪೋರ್ಟಲ್ ಮಹಾಸಭಾದ ಸಮಸ್ತ ಚಟುವಟಿಕೆಗಳ ವಿವರಗಳನ್ನು ಒಳಗೊಂಡಿದೆ. ಪ್ರತಿಭಾವಂತ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು ವಿದ್ಯಾನಿಧಿ ಯೋಜನೆ ಜಾರಿಗೊಳಿಸಲಾಗುವುದು' ಎಂದು ತಿಳಿಸಿದರು.

'ಕೋಮು ಕಾರ್ಯಸೂಚಿ ಜಾರಿ: ರಾಜ್ಯದ ಹಿತಕ್ಕೆ ಮಾರಕ'

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ತರಾಟೆ ತೆಗೆದುಕೊಂಡ ವಿಜ್ಞಾನಿಗಳು, ಲೇಖಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಕುಚಿತ ಕೋಮು ಹಿತಾಸಕ್ತಿಗಳ ಕಾರ್ಯಸೂಚಿಗಳು ಮತ್ತು ಯಾರಿಂದಲೋ ಪಡೆದ ಸಲಹೆಗಳನ್ನು ಅನುಷ್ಠಾನಗೊಳಿಸುತ್ತಿರುವುದು ರಾಜ್ಯದ ಹಿತಾಸಕ್ತಿಗೆ ಮಾರಕ' ಎಂದು ವಿಜ್ಞಾನಿಗಳು, ಕಲಾವಿದರು ಮತ್ತು ಲೇಖಕರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಕುರಿತು ಬೊಮ್ಮಾಯಿ ಅವರಿಗೆ ಬಹಿರಂಗ ಪತ್ರ ಬರೆದಿರುವ 40 ಮಂದಿ ಪ್ರಮುಖರು, 'ಇತ್ತೀಚಿನ ದಮನಕಾರಿ ಗೋಹತ್ಯೆ ನಿಷೇಧ ಕಾಯ್ದೆ ಮತ್ತು ಮತಾಂತರ ನಿಷೇಧ ಮಸೂದೆಗಳು ಧಾರ್ಮಿಕ ಅಲ್ಪಸಂಖ್ಯಾತರ ಆರ್ಥಿಕ ಮತ್ತು ಧಾರ್ಮಿಕ ಹಕ್ಕುಗಳನ್ನು ದಮನ ಮಾಡುತ್ತವೆ. ಎಲ್ಲ ಕಾಯ್ದೆ, ಕಾರ್ಯಕ್ರಮ, ನೀತಿಗಳ ಬಗ್ಗೆ ಪ್ರಜಾಸತ್ತಾತ್ಮಕವಾಗಿ, ಪಾರದರ್ಶಕವಾಗಿ ಚರ್ಚೆ ನಡೆಸಬೇಕಾಗಿರುವುದು ಮುಖ್ಯಮಂತ್ರಿಗಳ ಕರ್ತವ್ಯ' ಎಂದು ಪ್ರತಿಪಾದಿಸಿದ್ದಾರೆ.

ಮುಖ್ಯಾಂಶಗಳು
- ಅಲ್ಪಸಂಖ್ಯಾತರ ವಿರೋಧಿ ನೀತಿ ಸರಿಯಲ್ಲ
- ಪ್ರಗತಿಪರ ರಾಜ್ಯವೆಂಬ ಹೆಗ್ಗಳಿಕೆಗೆ ಕಳಂಕ
- ವಿದ್ರೋಹಿಗಳ ವಿರುದ್ಧದ ಕ್ರಮಕ್ಕೆ ಸರ್ಕಾರ ವಿಫಲ

ಪತ್ರ ಬರೆದ ಪ್ರಮುಖರಲ್ಲಿ ಎನ್‌ಸಿಬಿಎಸ್ ನಿರ್ದೇಶಕ ಪ್ರೊ. ಸತ್ಯಜಿತ್ ಮೇಯರ್, ಭೌತವಿಜ್ಞಾನಿ ಪ್ರೊ.ಶ್ರೀಕಾಂತ್ ಶಾಸ್ತ್ರಿ, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮಾಜಿ ಕಾರ್ಯದರ್ಶಿ ಪ್ರೊ.ವಿನೋದ್ ಗೌರ್, ವಕೀಲೆ ಫ್ಲಾವಿಯಾ ಆಗ್ನೆಸ್, ಲೇಖಕರಾದ ರಾಮಚಂದ್ರ ಗುಹಾ, ಪ್ರೊ. ರಾಮೇಶ್ವರಿ ವರ್ಮಾ, ಪುರುಷೋತ್ತಮ ಬಿಳಿಮಲೆ, ಡಾ.ಯಲ್ಲಪ್ಪ ರೆಡ್ಡಿ, ನಾಗೇಶ್ ಹೆಗಡೆ, ಹರೀಶ್ ನರಸಪ್ಪ, ವಿವೇಕ್ ಶ್ಯಾನಭಾಗ್, ಶರತ್ ಅನಂತಮೂರ್ತಿ, ಬೆಜವಾಡ ವಿಲ್ಸನ್, ಪ್ರೊ.ಎ.ಆರ್. ವಾಸವಿ, ಅಮ್ಮು ಜೋಸೆಫ್, ಬಾಲನ್ ನಂಬಿಯಾರ್ ಸೇರಿದ್ದಾರೆ.

ಸರ್ಕಾರದ ಅಲ್ಪಸಂಖ್ಯಾತರ ವಿರೋಧಿ ನೀತಿಗಳಿಂದಾಗಿ ಶಾಂತಿ, ಸಹಿಷ್ಣುತೆ ಮತ್ತು ಸೌಹಾರ್ದತೆ ರಾಜ್ಯದ ಮೇರು ಗುರುತಾಗಿ ಉಳಿದಿಲ್ಲ. ಈ ಸಮಸ್ಯೆಗಳನ್ನು ಪರಿಹರಿಸದೇ ಇದ್ದರೆ, ಹೂಡಿಕೆ ಮತ್ತು ಉದ್ಯಮಗಳ ತಾಣವಾಗಿರುವ ಕರ್ನಾಟಕದ ಖ್ಯಾತಿ ಕೆಡುವುದರಲ್ಲಿ ಸಂಶಯವಿಲ್ಲ ಎಂದು ಎಚ್ಚರಿಸಿದ್ದಾರೆ.

'ಕಳೆದ ಕೆಲವು ತಿಂಗಳಿಂದ ಹಲವು ಜಿಲ್ಲೆಗಳಲ್ಲಿ ದಾರುಣ ಹತ್ಯೆಗಳಾಗಿವೆ. ನಿರಂತರ ದ್ವೇಷ ಭಾಷಣಗಳು ನಡೆದಿವೆ. ಅಲ್ಪಸಂಖ್ಯಾತರ ಮೇಲೆ ಮತ್ತು ಅವರ ಆರಾಧನಾ ಮಂದಿರಗಳ ಮೇಲೆ ದಾಳಿ ನಡೆದಿವೆ. ಮಾನಗೇಡಿ ಹತ್ಯೆಗಳು, ಮತೀಯ ಗೂಂಡಾಗಿರಿ, ಧಾರ್ಮಿಕ ಗುಂಪುಗಳ ನಡುವೆ ಹಗೆತನ, ಜಗಳಗಳು ನಡೆದಿವೆ. ಇದಕ್ಕೆಲ್ಲ ಕೆಲವು ಶಾಸಕರ ಸಂವಿಧಾನ ಬಾಹಿರ ಹೇಳಿಕೆಗಳು ಪ್ರೋತ್ಸಾಹ ನೀಡಿವೆ. ಸಮಾಜ ವಿದ್ರೋಹಿ ಗುಂಪುಗಳ ವಿರುದ್ಧ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಘಟನಾವಳಿಗಳು ಪ್ರಗತಿಪರ ರಾಜ್ಯವೆಂಬ ಕರ್ನಾಟಕದ ಸುದೀರ್ಘ ಚರಿತ್ರೆಗೆ ಕಳಂಕವಾಗಿದೆ. ಕರ್ನಾಟಕದ ಬಹುತ್ವದ ಸಮಾಜವೊಂದರ ಸೌಹಾರ್ದ ಬಾಳ್ವೆಗೆ ನೀರೆರೆದ ರಾಜ್ಯ. ಸಹಿಷ್ಣುತೆ ಮತ್ತು ಸಹಬಾಳ್ವೆ ಈಗ ಛಿದ್ರವಾಗುತ್ತಿದೆ. ರಾಜ್ಯವು ಹಲವು ದಿಸೆಗಳಲ್ಲಿ ಈ ಗುರುತನ್ನು ಕಳೆದುಕೊಳ್ಳುತ್ತಿದೆ. ಆರ್ಥಿಕ, ಆಡಳಿತಾತ್ಮಕ ಮತ್ತು ರಾಜಕೀಯ ಆಯಮಗಳಲ್ಲಿ ಕರ್ನಾಟಕ ತನ್ನ ಭಾಗೀದಾರಿ ಶಕ್ತಿಯನ್ನು ಕಳೆದುಕೊಳ್ಳುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಇತ್ತೀಚಿನ ನೇತ್ಯಾತ್ಮಕ ಘಟನಾವಳಿಗಳನ್ನು ನೀವು ಗಂಭೀರವಾಗಿ ಪುನರ್ ವಿಮರ್ಶಿಸಿ, ಕಾನೂನಿನ ಆಡಳಿತ, ಸಂವಿಧಾನದ ತತ್ವಗಳು, ನಾಗರಿಕ ಹಕ್ಕುಗಳು, ಮುಕ್ತ ಮೂಲಭೂತ ಮಾನವೀಯ ಲಕ್ಷಣಗಳನ್ನು ಮರಳಿ ಸ್ಥಾಪಿಸಬೇಕು. ಈ ಸವಾಲುಗಳನ್ನು ಎದುರಿಸುವ ನಿಮ್ಮ ಸಾಮರ್ಥ್ಯವೇ ಭವಿಷ್ಯದಲ್ಲಿ ನಿಮ್ಮನ್ನು ಅಳೆಯುವ ಮಾನದಂಡಗಳು' ಎಂದೂ ಸಲಹೆ ನೀಡಿದ್ದಾರೆ.

ನಗರದಲ್ಲಿ ಇಂದು

'ಜೆನೆಸಿಸ್–2021' ಹೊಸ ಸೆಮಿಸ್ಟರ್ ತರಗತಿಗಳ ಉದ್ಘಾಟನೆ: ರಿಷಿಕೇಶ್ ಟಿ.ಕೃಷ್ಣನ್, ಶೇಷರಾವ್ ಪಾಪ್ಲಿಕರ್, ಅಧ್ಯಕ್ಷತೆ–ಪಿ.ಎನ್.ಪ್ರವೀಣ್, ಆಯೋಜನೆ–ಆರ್‌ವಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಸಮ್ಮೇಳನ ಸಭಾಂಗಣ, ಜಯನಗರ ಟಿ ಬ್ಲಾಕ್, ಬೆಳಿಗ್ಗೆ 10

ಪುಸ್ತಕಗಳ ಬಿಡುಗಡೆ: ಪುಸ್ತಕಗಳು– ಎಚ್.ಡುಂಡಿರಾಜ್ ಅವರ 'ಹನಿಗವನ ಏನು? ಏಕೆ? ಹೇಗೆ?', ಚಿದಾನಂದ ಸಾಲಿ ಅವರ 'ಹೊಗೆಯ ಹೊಳೆಯಿದು ತಿಳಿಯದು', ಪ್ರೊ.ಎಲ್.ಎಸ್.ಶೇಷಗಿರಿ ರಾವ್ ಅವರ 'ಆಧುನಿಕ ಕನ್ನಡ ಸಾಹಿತ್ಯ ನಡೆದು ಬಂದ ದಾರಿ', ಉಷಾ ನರಸಿಂಹನ್ ಅವರ 'ಕೆಂಡದ ರೊಟ್ಟಿ', ಬಿಡುಗಡೆ–ಪ್ರೊ.ಕೃಷ್ಣೇಗೌಡ, ಅತಿಥಿ–ದೇವು ಪತ್ತಾರ, ಆಯೋಜನೆ–ಅಂಕಿತ ಪುಸ್ತಕ ಮತ್ತು ಬುಕ್‌ಬ್ರಹ್ಮ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

'ಸರ್ವಜ್ಞನ ವಚನಗಳಲ್ಲಿ ವೈಜ್ಞಾನಿಕ ಶಾಲೆ' ಉಪನ್ಯಾಸ: ಶೀಲಾದೇವಿ ಎಸ್. ಮಳೀಮಠ, ಅತಿಥಿ–ಎಂ.ಸಿ.ನರೇಂದ್ರ, ಅಧ್ಯಕ್ಷತೆ–ಜಗದೀಶ್ ರೆಡ್ಡಿ, ಆಯೋಜನೆ ಮತ್ತು ಸ್ಥಳ–ಕನ್ನಡ ಯುವಜನ ಸಂಘದ ಸಭಾಂಗಣ, ಎಚ್.ಸಿದ್ಧಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

'ಪಕ್ಷ ತೊರೆಯುವವರ ಬಗ್ಗೆ ಆತಂಕವಿಲ್ಲ'

ಪ್ರಜಾವಾಣಿ ವಾರ್ತೆ

ಎಚ್.ಡಿ. ಕುಮಾರಸ್ವಾಮಿ

ಬೆಂಗಳೂರು: ಯಾರೆಲ್ಲಾ ಜೆಡಿಎಸ್‌ನಿಂದ ಹೊರಹೋಗಲು ಸಿದ್ಧರಾಗಿದ್ದಾರೆ ಎಂಬ ಮಾಹಿತಿ ತಮಗೆ ಇದೆ. ಪಕ್ಷ ತೊರೆಯುವವರ ಬಗ್ಗೆ ತಮಗೇನೂ ಆತಂಕವಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಬಿಜೆಪಿ ಅಧಿಕಾರದಲ್ಲಿದೆ. ಶಾಸಕರು ತಮ್ಮ ಕ್ಷೇತ್ರದ ಕೆಲಸಗಳನ್ನು ಮಾಡಿಸಿಕೊಳ್ಳಲು ಮುಖ್ಯಮಂತ್ರಿ ಮತ್ತು ಸಚಿವರನ್ನು ಭೇಟಿ ಮಾಡುತ್ತಾರೆ. ಕೆಲವು ಶಾಸಕರು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರಿಂದ ಅನುದಾನ ಪಡೆದು ಗೆದ್ದು ಬಂದಿದ್ದಾರೆ. ಅಂಥಹವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡುತ್ತಾರೆ. ಎಲ್ಲ ಶಾಸಕರನ್ನೂ ಅನುಮಾನದಿಂದ ನೋಡಲು ಸಾಧ್ಯವೆ' ಎಂದು ಪ್ರಶ್ನಿಸಿದರು.

'ನಮ್ಮ ಪಕ್ಷದ ಕೆಲವು ಶಾಸಕರು ಸಿದ್ದರಾಮಯ್ಯ ಅವರಿಂದ ಗೆದ್ದು ಬಂದಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಅವರ ಗೆಲುವಿಗಾಗಿ ಎಷ್ಟು ಕಷ್ಟಪಟ್ಟಿದ್ದೇವೆ ಎಂಬುದು ನಮಗೆ ಗೊತ್ತಿದೆ. ಸಿದ್ದರಾಮಯ್ಯ ಅವರಿಂದ ಗೆದ್ದವರಿಗೆ 2023ರ ಚುನಾವಣೆಯಲ್ಲಿ ಗೊತ್ತಾಗುತ್ತದೆ' ಎಂದರು.

ಬಿಜೆಪಿಯ ಕೆಲವು ಶಾಸಕರು ತಮ್ಮ ಸಂಪರ್ಕದಲ್ಲಿ ಇದ್ದಾರೆ ಎಂದು ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ. ಅವರು ಯಾವ ಪಕ್ಷದ ಬಾಲಂಗೋಚಿ ಎಂಬುದು ಈಗ ಸ್ಪಷ್ಟವಾಗಿ ಗೋಚರವಾಗುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿಯ ಕೆಲವರು ಜೆಡಿಎಸ್‌ಗೂ ಅರ್ಜಿ ಹಾಕಿಕೊಂಡಿದ್ದಾರೆ. ಆ ಪಕ್ಷಗಳ ಸಣ್ಣಪುಟ್ಟ ಮುಖಂಡರು, ಹೊಸಬರು ಜೆಡಿಎಸ್‌ಗೆ ಬರಲು ಸಿದ್ಧರಾಗಿದ್ದಾರೆ ಎಂದು ಹೇಳಿದರು.

'ತಾವು ಜೆಡಿಎಸ್ ಅಧ್ಯಕ್ಷರಾಗಿದ್ದಾಗ ಕುಮಾರಸ್ವಾಮಿ ಎಲ್ಲಿದ್ದರು ಎಂದು ಸಿದ್ದರಾಮಯ್ಯ ಕೇಳಿದ್ದಾರೆ. ಪಕ್ಷಕ್ಕೆ ನನ್ನ ಕೊಡುಗೆಯೂ ಇದೆ. ಅವರ ಕೊಡುಗೆ ಏನೂ ಇಲ್ಲ. ಇಲ್ಲಿ ಅಧಿಕಾರ ಅನುಭವಿಸಿ ಬೇರೆ ಕಡೆ ಹೋದರು. ಅವರಿಗೆ ಸಿದ್ಧಾಂತವೇ ಇಲ್ಲ. ಅಧಿಕಾರವೇ ಅವರ ಸಿದ್ಧಾಂತ' ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

'ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಆಪರೇಷನ್ ಕಮಲದಿಂದ ಬಿಜೆಪಿ ಸೇರಿದವರ ಎದುರು ಸ್ಪರ್ಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಸೋಲಿಸಲು ಸಿದ್ದರಾಮಯ್ಯ ಹಣ ಪಡೆದಿದ್ದರು. ಹಣ ತೆಗೆದುಕೊಂಡವರೇ ನನ್ನ ಬಳಿ ಹೇಳಿದ್ದಾರೆ. ಈಗ ಸತ್ಯ ಹರೀಶ್ಚಂದ್ರರಂತೆ ಸಿದ್ಧಾಂತ ಹೇಳುತ್ತಿದ್ದಾರೆ' ಎಂದು ಆರೋಪಿಸಿದರು.

ಜೆಡಿಎಸ್ ಶಾಸಕರನ್ನು ಸೆಳೆಯುವುದಿಲ್ಲ ಎಂಬ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ಮೇಲೆ ಅಷ್ಟಾದರೂ ಕನಿಕರ, ಗೌರವ ಇಟ್ಟಿದ್ದಾರೆ. ಅವರಿಗೆ ಧನ್ಯವಾದ ಹೇಳುತ್ತೇನೆ' ಎಂದರು.

ಬಂಡೆಪ್ಪ ನೇತೃತ್ವದಲ್ಲಿ ಜೆಡಿಎಸ್ ಪ್ರಮುಖರ ಸಮಿತಿ ರಚನೆ

ಬೆಂಗಳೂರು: ಜೆಡಿಎಸ್ ಪಕ್ಷದ ಸಂಘಟನೆ, ಬಲವರ್ಧನೆ ಮತ್ತು ಚುನಾವಣೆಗೆ ಸಂಬಂಧಿಸಿದ ವಿಷಯಗಳ ಕುರಿತು ನಿರ್ಣಯ ಕೈಗೊಳ್ಳುವುದಕ್ಕಾಗಿ ಶಾಸಕ ಬಂಡೆಪ್ಪ ಕಾಶೆಂಪೂರ ಅಧ್ಯಕ್ಷತೆಯಲ್ಲಿ 20 ಸದಸ್ಯರ 'ಪ್ರಮುಖರ ಸಮಿತಿ' ರಚಿಸಲಾಗಿದೆ.

ಶಾಸಕರಾದ ವೆಂಕಟರಾವ್ ನಾಡಗೌಡ, ಸಿ.ಎಸ್. ಪುಟ್ಟರಾಜು, ಎಂ. ಕೃಷ್ಣಾ ರೆಡ್ಡಿ, ರಾಜಾ ವೆಂಕಟಪ್ಪ ನಾಯ್ಕ ದೊರೆ, ಸಂಸದ ಪ್ರಜ್ವಲ್ ರೇವಣ್ಣ, ರಾಜ್ಯಸಭೆ ಸದಸ್ಯ ಎಂ. ಕುಪೇಂದ್ರ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಬಿ.ಎಂ. ಫಾರೂಕ್, ಕೆ.ಎ. ತಿಪ್ಪೇಸ್ವಾಮಿ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್, ಮಾಜಿ ಶಾಸಕರಾದ ವೈ.ಎಸ್.ವಿ. ದತ್ತ, ಕೆ.ಎಂ. ತಿಮ್ಮರಾಯಪ್ಪ, ಶಾರದಾ ಪೂರ್‍ಯಾನಾಯ್ಕ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಟಿ.ಎ. ಶರವಣ, ಮುಖಂಡರಾದ ನಾಸೀರ್ ಭಗವಾನ್, ಹನುಮಂತಪ್ಪ ಬಸಪ್ಪ ಮಾವಿನಮರದ, ರೂತ್ ಮನೋರಮಾ, ಸುಧಾಕರ್ ಎಸ್. ಶೆಟ್ಟಿ., ವಿ. ನಾರಾಯಣಸ್ವಾಮಿ ಮತ್ತು ಸಮೃದ್ಧಿ ಮಂಜುನಾಥ್ ಅವರನ್ನು ಸದಸ್ಯರನ್ನಾಗಿ ನೇಮಿಸಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್. ಕೆ. ಕುಮಾರಸ್ವಾಮಿ ಬುಧವಾರ ಆದೇಶ ಹೊರಡಿಸಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ಶಾಸಕಾಂಗ ಪಕ್ಷದ ನಾಯಕ ಎಚ್. ಡಿ. ಕುಮಾರಸ್ವಾಮಿ ಮತ್ತು ಎಚ್.ಕೆ. ಕುಮಾರಸ್ವಾಮಿ ಪ್ರಮುಖರ ಸಮಿತಿಯ ವಿಶೇಷ ಆಹ್ವಾನಿತರಾಗಿದ್ದಾರೆ.

ಕಾರ್ಯಾಧ್ಯಕ್ಷರಾಗಿ ಎಂ.ಎನ್. ನಬಿ

ಮಾಜಿ ಸಚಿವ ಎಂ.ಎನ್. ನಬಿ ಅವರನ್ನು ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಶಾಸಕ ರಾಜಾ ವೆಂಕಟಪ್ಪ ನಾಯ್ಕ ದೊರೆ ಅವರನ್ನು ಜೆಡಿಎಸ್ ರಾಜ್ಯ ಪರಿಶಿಷ್ಟ ಪಂಗಡಗಳ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ, ಪಿ.ಸಿ. ಮೋಹನ್, ಆರ್. ಅಶೋಕ, ಸಂಗೊಳ್ಳಿ ಕೃಷ್ಣಮೂರ್ತಿ, ಜಿ.ಎಲ್. ನಾರಾಯಣಸ್ವಾಮಿ, ಈಶ್ವರಾನಂದಪುರಿ ಸ್ವಾಮೀಜಿ, ವಾಟಾಳ್ ನಾಗರಾಜ್ ಭಾಗವಹಿಸಿದರು –ಪ್ರಜಾವಾಣಿ ಚಿತ್ರ

'ಶಾಲೆ, ಕಾಲೇಜುಗಳಲ್ಲಿ ಸಂಗೊಳ್ಳಿ ರಾಯಣ್ಣ ಭಾವಚಿತ್ರ'

ಬೆಂಗಳೂರು: ರಾಜ್ಯದ ಎಲ್ಲ ಶಾಲೆ, ಕಾಲೇಜುಗಳಲ್ಲಿ ಸಂಗೊಳ್ಳಿ ರಾಯಣ್ಣನ ಭಾವಚಿತ್ರವನ್ನು ಅಳಡಿಸುವಂತೆ ಆದೇಶ ಹೊರಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಸಂಗೊಳ್ಳಿ ರಾಯಣ್ಣನ ಜನ್ಮದಿನದ ಅಂಗವಾಗಿ ನಗರದ ದೇವರಾಜ ಅರಸು ವೃತ್ತದಲ್ಲಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಅವರು ಬುಧವಾರ ಮಾಲಾರ್ಪಣೆ ಮಾಡಿದರು.

'ರಾಯಣ್ಣನ ದೇಶ ಭಕ್ತಿ, ನಿಷ್ಠೆ, ಧೈರ್ಯ ಮತ್ತು ಶೌರ್ಯದ ಕುರಿತು ಮಕ್ಕಳಲ್ಲಿ ಅರಿವು ಮೂಡಿಸಬೇಕಿದೆ. ಅದಕ್ಕೆ ಪೂರಕವಾಗಿ ಶಾಲೆ, ಕಾಲೇಜುಗಳಲ್ಲಿ ರಾಯಣ್ಣನ ಭಾವಚಿತ್ರ ಅಳವಡಿಸಲು ನಿರ್ಧರಿಸಿದ್ದೇವೆ' ಎಂದು ತಿಳಿಸಿದರು.

'ಸಂಗೊಳ್ಳಿ ರಾಯಣ್ಣನ ಹೆಸರಿನಲ್ಲಿ ₹ 180 ಕೋಟಿ ವೆಚ್ಚದಲ್ಲಿ ಸೈನಿಕ ಶಾಲೆ ಆರಂಭಕ್ಕೆ ಸಿದ್ಧತೆ ನಡೆದಿದೆ. ಈಗಾಗಲೇ ₹ 55 ಕೋಟಿ ಬಿಡುಗಡೆ ಮಾಡಲಾಗಿದೆ. 100 ಎಕರೆ ಪ್ರದೇಶದಲ್ಲಿ ವಿದ್ಯಾರ್ಥಿ ನಿಲಯಗಳೂ ಸೇರಿದಂತೆ ಸುಸಜ್ಜಿತವಾದ ಸೈನಿಕ ಶಾಲೆ ನಿರ್ಮಿಸಲಾಗುವುದು. ರಕ್ಷಣಾ ಇಲಾಖೆಯ ಉಸ್ತುವಾರಿಯಲ್ಲಿ ಶಾಲೆಯನ್ನು ನಡೆಸಲು ಮಾತುಕತೆ ನಡೆಯುತ್ತಿದೆ' ಎಂದು ತಿಳಿಸಿದರು.

'ನವದೆಹಲಿಯಲ್ಲಿ ರಾಣಿ ಚೆನ್ನಮ್ಮನ ಪ್ರತಿಮೆಯ ಬಳಿಯಲ್ಲೇ ರಾಯಣ್ಣನ ಪ್ರತಿಮೆ ಸ್ಥಾಪನೆಗೆ ಅನುಮತಿ ಕೋರಿ ಪತ್ರ ಬರೆಯಲಾಗಿದೆ. ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲೂ ರಾಯಣ್ಣನ ಪ್ರತಿಮೆ ಸ್ಥಾಪನೆಗೆ ಕ್ರಮ ವಹಿಸಲಾಗಿದೆ' ಎಂದು ಮುಖ್ಯಮಂತ್ರಿ ಹೇಳಿದರು.

ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಕಂದಾಯ ಸಚಿವ ಆರ್.ಅಶೋಕ, ಸಂಸದ ಪಿ.ಸಿ. ಮೋಹನ್, ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್, ಮುಖಂಡ ಎಚ್.ಎಂ.ರೇವಣ್ಣ ಉಪಸ್ಥಿತರಿದ್ದರು.

ರಸ್ತೆಗಳ ಹೆಸರು ಬದಲಿಸಲು ಕ್ರಮ

ಬೆಂಗಳೂರಿನ ರಸ್ತೆಗಳಿಗೆ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ನಾಮಕರಣ ಮಾಡುವಂತೆ ಸಂಸದ ಪಿ.ಸಿ. ಮೋಹನ್ ಒತ್ತಾಯಿಸಿದರು. ಈ ಕುರಿತು ಸಭೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

IN THE COURT OF THE CITY CIVIL, SESSIONS AND SPECIAL JUDGE AT BENGALURU.

MISC NO. 438/2020

BETWEEN
The Competent Authority
Assistant Commissioner/
Bengaluru South sub division
Bengaluru. ...Petitioner

AND
M/S TGS Constructions Pvt Ltd
And others ...Respondents

Notice to Respondents No. 1 to 3

1. M/s TGS Construction Pvt Ltd
Represented by its Managing Director
Smt. Mandeep Kaur
No.577/B, II Floor, Outer Ring Road
Teachers Colony Koramangala
Near Silk Board, Bengaluru.
2. Smt. Mandeep Kaur W/o Sachin Naik
No.577/B, II Floor, Outer Ring Road
Teachers Colony Koramangala
Near Silk Board, Bengaluru.
3. Sri. Siddaraju
S/o Late. Lingappa
No. 7, Kalyan Nagar Main Road,
Nagarabhavi 2nd Stage
Bengaluru-560072.

Whereas, the Petitioner has filed the above petitions under section 5(2) of the KPIDFE Act 2004 against Respondents.

The Respondent No. 1 to 3 are hereby issued show cause notice u/s 12(1) of KPIDFE Act 2004, to appear in court of the Addl City Civil & session Judge (CCH-92) at Bengaluru, in person or by a pleader duly instructed and able to answer all material questions relating to above petitions on 08-02-2022 at 11.00 'O' Clock in the forenoon to answer the petitions.

Take notice that in default of your appearance on the date above mentioned the Petitions will be heard and determined in your absence.

Given under my hand and seal of the court this day 20th January 2022.

Sd/-
Smt. Shantha Mullur
Special Public Prosecutor
City Civil Court
Bengaluru.

By order of the court
Assistant Registrar
City Civil Court
Bengaluru

DIPR/DDU/3008/AKAR/2021-22

IN THE COURT OF THE CITY CIVIL, SESSIONS AND SPECIAL JUDGE AT BENGALURU.

MISC NO. 432/2020

BETWEEN
The Competent Authority
Assistant Commissioner/
Bengaluru South sub division
Bengaluru. ...Petitioner

AND
M/S TGS Constructions Pvt Ltd
And others ...Respondents

Notice to Respondents No. 1 to 3

1. M/s TGS Construction Pvt Ltd
Represented by its Managing Director
Smt. Mandeep Kaur
No.577/B, II Floor, Outer Ring Road
Teachers Colony Koramangala
Near Silk Board, Bengaluru.
2. Smt. Mandeep Kaur W/o Sachin Naik
No.577/B, II Floor, Outer Ring Road
Teachers Colony Koramangala
Near Silk Board, Bengaluru.
3. Sri. S. Murali
S/o Late. Shivalingappa
No. 13, 3rd Cross,
Sudhama Nagar, Double Road,
Bengaluru-560027.

Whereas, the Petitioner has filed the above petitions under section 5(2) of the KPIDFE Act 2004 against Respondents.

The Respondent No. 1 to 3 are hereby issued show cause notice u/s 12(1) of KPIDFE Act 2004, to appear in court of the Addl City Civil & session Judge (CCH-92) at Bengaluru, in person or by a pleader duly instructed and able to answer all material questions relating to above petitions on 08-02-2022 at 11.00 'O' Clock in the forenoon to answer the petitions.

Take notice that in default of your appearance on the date above mentioned the Petitions will be heard and determined in your absence.

Given under my hand and seal of the court this day 20th January 2022.

Sd/-
Smt. Shantha Mullur
Special Public Prosecutor
City Civil Court
Bengaluru.

By order of the court
Assistant Registrar
City Civil Court
Bengaluru

DIPR/DDU/3010/AKAR/2021-22

IN THE COURT OF THE CITY CIVIL, SESSIONS AND SPECIAL JUDGE AT BENGALURU.

MISC NO. 433/20, 434/20, 435/20, 436/20, 437/20 & 439/20, 440/20, 441/20 and 442/2020

BETWEEN
The Competent Authority
Assistant Commissioner/
Bengaluru South sub division
Bengaluru. ...Petitioner

AND
M/S TGS Constructions Pvt Ltd
And others ...Respondents

Notice to Respondents No. 1 and 2

1. M/s TGS Construction Pvt Ltd
Represented by its Managing Director
Smt. Mandeep Kaur
No.577/B, II Floor, Outer Ring Road
Teachers Colony Koramangala
Near Silk Board, Bengaluru.
2. Smt. Mandeep Kaur, Managing Director
W/o Sachin Naik
No. 577/B, II Floor, Outer Ring Road
Teachers Colony Koramangala
Near silk Board, Bengaluru.

Whereas, the Petitioner has filed the above petitions under section 5(2) of the KPIDFE Act 2004 against Respondents.

The Respondent No. 1 and 2 are hereby issued show cause notice u/s 12(1) of KPIDFE Act 2004, to appear in court of the Addl City Civil & session Judge (CCH-92) at Bengaluru, in person or by a pleader duly instructed and able to answer all material questions relating to above petitions on 08-02-2022 at 11.00 'O' Clock in the forenoon to answer the petitions.

Take notice that in default of your appearance on the date above mentioned the Petitions will be heard and determined in your absence.

Given under my hand and seal of the court this day 20th January 2022.

Sd/-
Smt. Shantha Mullur
Special Public Prosecutor
City Civil Court
Bengaluru.

By order of the court
Assistant Registrar
City Civil Court
Bengaluru

DIPR/DDU/3009/AKAR/2021-22

ಕೇಕ್ ಕಪ್‌ಗಳ 'ಬ್ರ್ಯಾಂಡ್' ಈ ಮೇಘನಾ ಜೈನ್!

• ಸಚ್ಚಿದಾನಂದ ಕುರಗುಂದ

ಹೊಸ ಬೆಳಕು

ಬೆಂಗಳೂರು: ಬೇಕರಿ ಕ್ಷೇತ್ರದ ಕುರಿತು ವಿದ್ಯಾರ್ಥಿದೆಸೆಯಲ್ಲಿಯೇ ಮೂಡಿದ ಒಲವು ಈ ಯುವತಿಗೆ ನವೋದ್ಯಮ ಆರಂಭಿಸುವ ದಾರಿ ತೋರಿಸಿತು. ಆ ಮೂಲಕ, ಈಕೆ ಮಹಿಳಾ ಸಬಲೀಕರಣಕ್ಕೆ ಮಾದರಿಯಾಗಿ ಕಾಣುತ್ತಾರೆ.

ಬೇಕರಿ ಕ್ಷೇತ್ರದಲ್ಲಿ ಹೊಸತನ ಮತ್ತು ವಿಭಿನ್ನ ರೀತಿಯ ಮಾದರಿಯ ಕೇಕ್‌ಗಳನ್ನು ಬಹುತೇಕ ಆನ್‌ಲೈನ್ ಮೂಲಕವೇ ವಹಿವಾಟು ನಡೆಸುತ್ತಿರುವ 26ರ ಹರೆಯದ ಮೇಘನಾ ಜೈನ್, ತಮ್ಮ ವ್ಯಾಪಾರ ವಹಿವಾಟಿನ ಜಾಲವನ್ನು ಈಗ ದೇಶದಾದ್ಯಂತ ವಿಸ್ತರಿಸಿಕೊಂಡಿದ್ದಾರೆ. ಅವರಲ್ಲಿರುವ ಉದ್ಯೋಗಿಗಳಲ್ಲಿ ಒಬ್ಬ ಡೆಲಿವರಿ ಬಾಯ್ ಮತ್ತು ಡೇಟಾ ಅನಾಲಿಟಿಕ್ಸ್ ಹೊರತುಪಡಿಸಿದರೆ ಉಳಿದ ಎಲ್ಲರೂ ಮಹಿಳೆಯರು!

ಕೋವಿಡ್ ಮತ್ತು ಉದ್ಯಮದ ಹತ್ತು ಹಲವು ಸವಾಲುಗಳ ನಡುವೆಯೂ ಕೇಕ್ ಕಪ್‌ಗಳ ಬ್ರ್ಯಾಂಡ್‌ಗೆ ಮೇಘನಾ ಜೈನ್ ಹೆಸರುವಾಸಿಯಾಗಿದ್ದಾರೆ. ಬಿ.ಕಾಂ. ಓದುವಾಗಲೇ ಕೇಕ್ ಕಪ್‌ಗಳನ್ನು ತಯಾರಿಸುವುದನ್ನು ಆರಂಭಿಸಿದ್ದರು. ಸಹಪಾಠಿಗಳಿಗೆ ಕೇಕ್ ಮಾರಾಟ ಮಾಡುತ್ತಿದ್ದರು. ನಂತರ, ಕಾಲೇಜಿನ ಕೆಫೆಟೇರಿಯಾದಲ್ಲಿ ಮಾರಾಟ ಮಾಡಿದರು.

ಪದವಿ ಪಡೆದ ಬಳಿಕ ಮೂರು ತಿಂಗಳು ತರಬೇತಿ ಪಡೆದು, ಸ್ವಂತ ನವೋದ್ಯಮ ಆರಂಭಿಸಬೇಕು ಎನ್ನುವ ಯೋಚನೆ ಮೂಡಿದಾಗ ಹತ್ತಾರು ಪ್ರಶ್ನೆಗಳು, ಸವಾಲುಗಳು ಎದುರಾದವು. ಸಣ್ಣ ಉದ್ಯಮವನ್ನು ಮೊದಲು ಮನೆಯಿಂದಲೇ ಆರಂಭಿಸಿದರು. ನಂತರ ಜೆ.ಪಿ. ನಗರದಲ್ಲಿ 'ಡ್ರೀಮ್ ಎ ಡಜನ್' ಹೆಸರಿನಲ್ಲಿ ಬೇಕರಿ ತೆರೆದರು.

ಮೇಘನಾ ಜೈನ್

'ಆಹಾರ ಉದ್ಯಮದಲ್ಲಿ ಮಹಿಳೆಯರು ಕಡಿಮೆ. ಆದರೆ, ನಮ್ಮಲ್ಲಿ ಇಬ್ಬರನ್ನು ಹೊರತುಪಡಿಸಿದರೆ ಎಲ್ಲರೂ ಮಹಿಳೆಯರೇ. 15 ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಉದ್ಯಮ ಯಾರೇ ಆರಂಭಿಸಿದರೂ ಸವಾಲು ಇದ್ದೇ ಇರುತ್ತದೆ. ಆದರೆ, ಮಹಿಳೆಗೆ ಹೆಚ್ಚು ಸವಾಲುಗಳು. ಆರಂಭದಲ್ಲಿ ಕಟ್ಟಡ ಬಾಡಿಗೆ ಪಡೆಯಲು ಹೋದಾಗ ತಂದೆಯನ್ನು ಕರೆದುಕೊಂಡು ಬರಲು ಮಾಲೀಕರು ಸೂಚಿಸಿದರು. ಅಂದರೆ, ಮಹಿಳೆಯರ ಮೇಲೆ ವಿಶ್ವಾಸ ಇರಿಸುವುದು ಕಷ್ಟ. ಉದ್ಯಮ ಕ್ಷೇತ್ರದಲ್ಲಿ ಮಹಿಳೆಯರನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಇವರಿಂದ ಸಾಧ್ಯವಾಗುವುದಿಲ್ಲ ಎನ್ನುವ ಅನುಮಾನದಿಂದಲೇ ನೋಡುತ್ತಾರೆ' ಎಂದು ಮೇಘನಾ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ.

'ಈಗಲೂ ನಮ್ಮಲ್ಲಿ ಬರುವವರು ಮಾಲೀಕರು ಯಾರು ಎನ್ನುವ ಪ್ರಶ್ನೆಯನ್ನು ನನ್ನನ್ನೇ ಕೇಳುತ್ತಾರೆ. ಚಿಕ್ಕವಯಸ್ಸಿನಲ್ಲಿ ಒಬ್ಬ ಯುವತಿ ದೊಡ್ಡ ಜವಾಬ್ದಾರಿ ವಹಿಸಿಕೊಂಡಿದ್ದಾಳೆ ಎನ್ನುವುದನ್ನು ಅವರು ನಂಬುವುದಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ ಒಬ್ಬ ಮಹಿಳೆ ಏಕೆ ಮಾಲೀಕರಾಗುತ್ತಾರೆ ಎನ್ನುವ ಮನಸ್ಥಿತಿಯೂ ಇದಕ್ಕೆ ಕಾರಣ ಇರಬಹುದು' ಎಂದು ಹೇಳುತ್ತಾರೆ.

'ಡ್ರೀಮ್ ಎ ಡಜನ್ ' ತಂಡ.

'ನನ್ನ ಅಜ್ಜಿಯೇ ನನಗೆ ಸ್ಫೂರ್ತಿ. ಸುಮಾರು 40 ವರ್ಷಗಳ ಕಾಲ ಅವರು ಬಟ್ಟೆಗಳನ್ನು ಮಾರಾಟ ಮಾಡುತ್ತಿದ್ದರು. ಹೀಗಾಗಿ, ನನಗೆ ಸ್ವಂತ ಉದ್ಯಮದ ಬಗ್ಗೆ ಆಸಕ್ತಿ ಮೂಡಿತು. ಕಪ್ ಕೇಕ್‌ಗಳನ್ನು ಮಾಡುವುದರಲ್ಲಿ ನಾವು ಪರಿಣತಿ ಪಡೆದಿದ್ದೇವೆ. ಮುಂದಿನ ದಿನಗಳಲ್ಲಿ ಕೇಕ್ ತಯಾರಿಸುವುದನ್ನು ವಿಸ್ತರಿಸಲು ಮತ್ತಷ್ಟು ಕಿಚನ್‌ಗಳನ್ನು ಆರಂಭಿಸುವ ಉದ್ದೇಶವಿದೆ' ಎಂದು ಆತ್ಮವಿಶ್ವಾಸದಿಂದ ನುಡಿಯುತ್ತಾರೆ.

ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಕೋವಿಡ್

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಕೋವಿಡ್ ದೃಢಪಟ್ಟಿದೆ. ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಹಾಗೂ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಬುಧವಾರ ಏರ್ಪಡಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಲಿಲ್ಲ.

'ನನಗೆ ಕೋವಿಡ್‌ನ ಸೌಮ್ಯ ಲಕ್ಷಣಗಳಿವೆ. ವೈದ್ಯಕೀಯ ಸಲಹೆಯಂತೆ ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದೇನೆ. ಇತ್ತೀಚೆಗೆ ನನ್ನ ಸಂಪರ್ಕಕ್ಕೆ ಬಂದಿರುವವರು ಎಚ್ಚರಿಕೆಯಿಂದ ಇರಬೇಕು ಹಾಗೂ ಅಗತ್ಯ ಬಿದ್ದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಡಬೇಕು' ಎಂದು ಅವರು ಮನವಿ ಮಾಡಿಕೊಂಡಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ 73ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಧ್ವಜಾರೋಹಣ ನೆರವೇರಿಸಿದರು. ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, ಮನೋಜ್ ಜೈನ್, ಕೆ.ಎ.ದಯಾನಂದ್, ಡಾ. ಕೆ.ವಿ. ತ್ರಿಲೋಕ ಚಂದ್ರ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಕೋವಿಡ್ ಅಂಕಿ–ಅಂಶ

ಆಧಾರ: ವೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	36.52 ಕೋಟಿ ▲	4.00 ಕೋಟಿ ▲
ಸಕ್ರಿಯ ಪ್ರಕರಣ	6.94 ಕೋಟಿ ▲	22.23 ಲಕ್ಷ ▼
ಗುಣಮುಖ	28.54 ಕೋಟಿ ▲	3.73 ಕೋಟಿ ▲
ಸಾವು	56.37 ಲಕ್ಷ ▲	4.91 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	34.19 ಲಕ್ಷ ▲	2.85 ಲಕ್ಷ ▲
ಗುಣಮುಖ	23.70 ಲಕ್ಷ ▲	2.99 ಲಕ್ಷ ▲
ಸಾವು	9,849 ▲	665 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು



ಎಲ್ಲಿ ಹೆಚ್ಚು ಸಾವು (ಒಟ್ಟು)

- 1.42 ಲಕ್ಷ ಮಹಾರಾಷ್ಟ್ರ
- 52,141 ▲ ಕೇರಳ
- 37,312 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

- 75.69 ಮಹಾರಾಷ್ಟ್ರ ▲
- 57.25 ಕೇರಳ ▲
- 31.94 ತಮಿಳುನಾಡು ▲

ಭಾರತದ ಕೋವಿಡ್ ಸಂಖ್ಯೆ ವಿವರ: ಬುಧವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

- 16,48,758 ▲ ಒಟ್ಟು ಸೋಂಕಿತರು (16,26,331 ನಿನ್ನೆಯ ವಿವರ)
- 2,16,145 ▲ ಸಕ್ರಿಯ ಪ್ರಕರಣಗಳು
- 14,16,078 ▲ ಗುಣಮುಖ ಆದವರು
- 16,534 ಒಟ್ಟು ಸಾವು ▲

ದಿನದ ಮಾಹಿತಿ

- ಹೊಸ ಪ್ರಕರಣ 22,427 ▲
- ಗುಣಮುಖ 18,734 ▼
- ಸಾವು 08 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ–ಅಂಶ

- 36,54,413 ▲ ಒಟ್ಟು ಸೋಂಕಿತರು (36,05,508 ನಿನ್ನೆಯ ವಿವರ)
- 3,57,909 ▲ ಸಕ್ರಿಯ ಪ್ರಕರಣಗಳು
- 32,57,769 ▲ ಗುಣಮುಖರಾದವರು
- 38,705 ಒಟ್ಟು ಸಾವು ▲

ದಿನದ ಏರಿಕೆ

- ಹೊಸ ಪ್ರಕರಣ 48,905 ▲
- ಗುಣಮುಖ 41,699 ▼
- ಸಾವು 39 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: 3.57 ಲಕ್ಷಕ್ಕೆ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 48,905 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 3.57 ಲಕ್ಷಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 2.17 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 22.51 ರಷ್ಟಿದೆ. ಈವರೆಗೆ ವರದಿಯಾದ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 36.54 ಲಕ್ಷಕ್ಕೆ ಏರಿಕೆಯಾಗಿದೆ.

ಒಂಬತ್ತು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 20 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತೆ ಏರಿಕೆ ಕಂಡಿದ್ದು, 22,427 ಮಂದಿ ಸೋಂಕಿತರಾಗಿದ್ದಾರೆ. ಮೈಸೂರಿನಲ್ಲಿ 2,797, ತುಮಕೂರಿನಲ್ಲಿ 2,645, ಮಂಡ್ಯದಲ್ಲಿ 2,186, ಹಾಸನದಲ್ಲಿ 2,016, ಕೋಲಾರದಲ್ಲಿ 1,547, ಧಾರವಾಡದಲ್ಲಿ 1,523, ಉಡುಪಿಯಲ್ಲಿ 1,392, ಬಳ್ಳಾರಿಯಲ್ಲಿ 1,141 ಹಾಗೂ ಕಲಬುರಗಿಯಲ್ಲಿ 1,007 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 18,734 ಮಂದಿ ಸೇರಿದಂತೆ ರಾಜ್ಯದಲ್ಲಿ 41,699 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 32.57 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳಲ್ಲಿ ಬೆಂಗಳೂರಿನಲ್ಲಿಯೇ 2.16 ಲಕ್ಷ ಮಂದಿ ಸೋಂಕಿತರಿದ್ದಾರೆ.

ಕೊರೊನಾ ಸೋಂಕಿತರಲ್ಲಿ 39 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಎಂಟು ಮಂದಿ, ಹಾಸನ ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ ನಾಲ್ವರು, ಮೈಸೂರಿನಲ್ಲಿ ಮೂವರು, ಉತ್ತರ ಕನ್ನಡ, ರಾಮನಗರ, ಮಂಡ್ಯ, ಕಲಬುರಗಿ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ ಇಬ್ಬರು ಸಾವಿಗೀಡಾಗಿರುವುದು ಖಚಿತಪಟ್ಟಿದೆ.

ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.07 ರಷ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,705ಕ್ಕೆ ತಲುಪಿದೆ.

'ಮಹಿಳೆಯರಲ್ಲಿ ಆರೋಗ್ಯ ಕಾಳಜಿ ಹೆಚ್ಚಲಿ'

ಬೆಂಗಳೂರು: 'ಕುಟುಂಬ ನಿರ್ವಹಣೆಯ ಹೊಣೆ ಹೊತ್ತಿರುವ ಮಹಿಳೆಯರು ತಮ್ಮ ಆರೋಗ್ಯವನ್ನು ಕಡೆಗಣಿಸಿ, ಭವಿಷ್ಯದಲ್ಲಿ ಸಮಸ್ಯೆ ತಂದೊಡ್ಡಿಕೊಳ್ಳುತ್ತಿದ್ದಾರೆ' ಎಂದು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಬೃಂದಾ ಅಡಿಗ ತಿಳಿಸಿದರು.

ಇಲ್ಲಿನ ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆ ಹಮ್ಮಿಕೊಂಡ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, 'ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯೇ ಕುಟುಂಬದ ಮೂಲ ಆಧಾರ ಸ್ತಂಭ. ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಮುಂದೆ ಬರುವಂತೆ ಕುಟುಂಬದ ಸದಸ್ಯರು ಪ್ರೋತ್ಸಾಹಿಸಬೇಕು' ಎಂದು ಹೇಳಿದರು. ಆಸ್ಪತ್ರೆಯ ನಿರ್ದೇಶಕ ಡಾ. ಮನೀಶ್ ರೈ ಮಾತನಾಡಿದರು.

ಕಾರಿನಲ್ಲಿ ಬಂದು ಹೂವಿನ ಕುಂಡ ಕದಿಯುವ ಯುವತಿ!

ಬೆಂಗಳೂರು: ಯುವತಿಯೊಬ್ಬಳು ರಾತ್ರಿ ಹೊತ್ತಿನಲ್ಲಿ ಐಷಾರಾಮಿ ಕಾರಿನಲ್ಲಿ ಬಂದು ಮನೆಯೊಂದರ ಕಾಂಪೌಂಡ್‌ನಲ್ಲಿ ಇಟ್ಟಿರುವ ಹೂವಿನ ಕುಂಡಗಳನ್ನು ಕದ್ದೊಯ್ಯುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದು ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡುತ್ತಿದೆ.

ಪ್ಯಾಂಟ್ ಹಾಗೂ ಕಪ್ಪು ಬಣ್ಣದ ಟೀಶರ್ಟ್ ಧರಿಸಿರುವ ಯುವತಿಯು ಕೆಂಪು ಬಣ್ಣದ ಕಾರಿನಿಂದ ಇಳಿದು ಹೂವಿನ ಕುಂಡಗಳನ್ನು ಎತ್ತಿಕೊಂಡು ಹೋಗಿ ಕಾರಿನ ಡಿಕ್ಕಿಯಲ್ಲಿ ಇಟ್ಟುಕೊಂಡು ಪರಾರಿಯಾಗುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ.

ಸಂಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಆರ್‌ಎಂವಿ ಎರಡನೇ ಹಂತದಲ್ಲಿರುವ ಕಾವ್ಯ ಸೆಲ್ವಂ ಎಂಬುವರ ಮನೆಯಿಂದ ಈ ಕುಂಡಗಳು ಕಳುವಾಗಿವೆ. ಅವರು ಸಿಸಿಟಿವಿ ದೃಶ್ಯಾವಳಿಯನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದು ಅದನ್ನು ಬೆಂಗಳೂರು ಪೊಲೀಸರಿಗೂ ಟ್ಯಾಗ್ ಮಾಡಿದ್ದಾರೆ.

₹45 ಸಾವಿರ ವಾರಸುದಾರನಿಗೆ ಒಪ್ಪಿಸಿದ ಪೊಲೀಸ್ ಸಿಬ್ಬಂದಿ

ಬೆಂಗಳೂರು: ₹45 ಸಾವಿರ ನಗದು ಇದ್ದ ಪರ್ಸ್‌ವೊಂದು ಕೆಂಪೇಗೌಡ ನಗರ (ಕೆ.ಜಿ.ನಗರ) ಪೊಲೀಸ್ ಠಾಣೆ ಸಿಬ್ಬಂದಿಗೆ ದೊರೆತಿದ್ದು, ಅದನ್ನು ಅವರು ವಾರಸುದಾರರಿಗೆ ಹಿಂತಿರುಗಿಸಿದ್ದಾರೆ.

‘ರವಿ ಎಂಬುವವರು ಮಗಳ ಶಾಲಾ ಶುಲ್ಕ ಪಾವತಿಸಲು ₹45 ಸಾವಿರ ಮೊತ್ತ ಸಾಲ ಪಡೆದಿದ್ದರು. ಅದನ್ನು ಪರ್ಸ್‌ನಲ್ಲಿ ಇಟ್ಟುಕೊಂಡು ಬನಶಂಕರಿ ಮಾರ್ಗವಾಗಿ ಹೋಗುತ್ತಿದ್ದ ವೇಳೆ ಅದು ಬಿದ್ದು ಹೋಗಿತ್ತು. ಗಸ್ತಿನಲ್ಲಿದ್ದ ಕಾನ್‌ಸ್ಟೆಬಲ್‌ಗಳಾದ ಮಾದಪ್ಪ ಹಾಗೂ ಯಲ್ಲಾಲಿಂಗ ಅವರಿಗೆ ಪರ್ಸ್ ಸಿಕ್ಕಿತ್ತು. ಅದರಲ್ಲಿದ್ದ ಗುರುತಿನ ಚೀಟಿಯ ಆಧಾರದಲ್ಲಿ ವಾರಸುದಾರರನ್ನು ಪತ್ತೆಹಚ್ಚಿ ಅವರಿಗೆ ಹಣದ ಸಮೇತ ಪರ್ಸ್ ಹಿಂತಿರುಗಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಹಿಳೆ ಕೊಲೆ: ಮುಖ್ಯ ಆರೋಪಿ ಬಂಧನ

ಬೆಂಗಳೂರು: ಕಟ್ಟಿಗೇನಹಳ್ಳಿಯಲ್ಲಿ ಇದೇ 20 ರಂದು ಮಹಿಳೆಯೊಬ್ಬರನ್ನು ಕೊಲೆ ಮಾಡಿ ಚಿನ್ನದ ಆಭರಣಗಳನ್ನು ದೋಚಿ ಪರಾರಿಯಾಗಿದ್ದ ಪ್ರಕರಣದ ಪ್ರಮುಖ ಆರೋಪಿ ಸಲೀಂನನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ ₹3 ಲಕ್ಷ ಮೌಲ್ಯದ ಆಭರಣಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಯಿಂದ ಆಭರಣಗಳನ್ನು ಸ್ವೀಕರಿಸಿದ್ದ ಬವರಲಾಲ್ ಮತ್ತು ಕೈಲಾಶ್ ಎಂಬುವರನ್ನೂ ಬಂಧಿಸಲಾಗಿದೆ.

ಅಪಘಾತ: ಯುವಕ ಸಾವು

ಬೈಕ್ ಹಾಗೂ ಟಾಟಾ ಏಸ್ ಡಿಕ್ಕಿಯಾಗಿದ್ದರಿಂದ ಬೈಕ್‌ನಲ್ಲಿದ್ದ ಯುವಕ ಮೃತಪಟ್ಟಿದ್ದಾನೆ. ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಮಿತ್ (24) ಮೃತ ಯುವಕ. ಈತ ಅಸ್ಸಾಂ ಮೂಲದವನು. ರಾತ್ರಿ 12 ಗಂಟೆ ಸುಮಾರಿಗೆ ವರ್ತೂರು ಮುಖ್ಯರಸ್ತೆಯಲ್ಲಿ ವೇಗವಾಗಿ ಬಂದ ಟಾಟಾ ಏಸ್ ಡಿಕ್ಕಿ ಹೊಡೆದಿದ್ದರಿಂದ ಬೈಕ್‌ನಲ್ಲಿದ್ದ ಅಮಿತ್ ಗಾಯಗೊಂಡು ಅಸುನೀಗಿದ್ದಾನೆ.

CONNECT

ಬೆಂಗಳೂರಿನ ಜಯನಗರದಲ್ಲಿ ಮಾರಾಟ

ಕಾಂಚೀಪುರಂ

ಎ.ಜಿ. ಬಾಬು ಸಾಹ್

ರೇಷ್ಮೆ ಸೀರೆ ವ್ಯಾಪಾರಿಗಳು

ಶ್ರೀನಿವಾಸ ಸಾಗರ ಕಲ್ಯಾಣ ಮಹಲ್

ನಂ. 264, ಮರಿಯಪ್ಪ ರಸ್ತೆ, 2ನೇ ಬ್ಲಾಕ್, ಜಯನಗರ, ಅಶೋಕ ಪಿಲ್ಲರ್ ಹತ್ತಿರ, ಬೆಂಗಳೂರು–560011, ಮೊ. : 6385697571

ದಿನಾಂಕ: 28,29,30 ಮತ್ತು 31ನೇ ಜನವರಿ 2022

ಕೊನೆಯ ದಿನ ಸಂಜೆ 5–00 ಗಂಟೆಗೆ ಮುಕ್ತಾಯ

ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ

ಯಾವುದೇ ವಿನಿಮಯವಿಲ್ಲ, ಹಿಂತಿರುಗಿಸುವುದಿಲ್ಲ

ಮಾಸ್ಕ್ ಕಡ್ಡಾಯ

ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ

At a time only 50 persons are allowed

ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ

ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ ಎ.ಜಿ. ಬಾಬು ಸಾಹ್ YouTube

ಹೊಸ ಮಾರಾಟ ಮತ್ತು ಮಾಹಿತಿಗಾಗಿ ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENTS And Finance Available On Low Interest Against Properties, Land& Buildings, Finance Sites, Flats, Converted and Agriculture Lands. Also Introducing Luxury Cars Finance @ Very Low Interest Call: 7411265189

WANTED INVESTER We Are Manufacturer, Pure Silk Sarees, Invester Get Good Profit in-our Business, 7899356649

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Part-Time Jobs

WORK FROM HOME, Earn 30- 50K more per month. Qualification: PUC and above. Malleshwaram. 7899493370

PERSONAL

Change of Name

I, BASHA SAHEB. S. S/o. Late. Buden Sab R/a #290, 3rd Ward, Gillinagar, Arsikere, Davangere, Harapanahalli- 583125 Declare That BASHA SAHEB. S., S. BASHA SAHEB and BHASHASAB all Names are One And The Same Person, Henceforth, Known as BASHA SAHEB. S. Only, Further Declare That, My Father's Correct Name is BUDEN SAB in Some Documents Mentioned as BUDENASAB and BHUDEN SAHEB. S. vide Affidavit Dated: 25.01.2022 Before Notary Harisha. G. Bangalore.

I, MRS.T. Anandamma Date of Birth is 8 -12-1953 Spouse of Ex-Hav.Tallapaka. Krishnamoorthy 6318432F Resident of Flat #202, 2nd Floor, Akanksha Appartment, Sharadambhanagara, Jalahalli Village have changed my name from Smt Anandamma, Date of Birth 12-12-1953 to T.Anandamma vide affidavit dated 25/01/2022 before notary Lakshminarayana, Bangalore

GUDDI DAVI M/o 14857585P- Hav/Clk (SD)- ALOK KUMAR R/a Baripura, Sanpher, Ajeetmal, Auraiya, UP changed name from GUDDI DAVI to GUDDI DEVI notary Meer Hassan, Bangalore.

I, VIDYA Virupakshappa Pattanashetti Residing at No.515/1E, Sangameshwara Nilaya, 1st 'C' Main Road, Hampinagar, 2nd Stage, Vijayanagar, Bangalore - 560104 Post Marriage have Changed My Name to Vidya Shantibhushan Mulimani vide affidavit dated 24.01.2022 before Notary G.S.Susheela, Bangalore.

DEVENDRI CHOUDHARY W/o JC673877F- Sub/Clk (SD)- BRIJVIR SINGH R/a Anagada, Kursanda, Sadabad, Mathura, UP changed name from DEVENDRI CHOUDHARY to DEVENDRI DEVI notary Meer Hassan, Bangalore.

ASTHA KUMARI D/o JC-674067L- Nb/Sub- BHOOP NARAYAN KUSHWAHA R/a 122, Avas Vikas Colony, Gorakhpur, UP changed name from ASTHA KUMARI to ASTHA notary KV Mani, Bangalore.

RINCY VIPIN W/o 14833156P- Sep/MT- VIPIN KUMAR V R/a Lekshmi Bhavan, Payipad, Alappuzha, Kerala changed name from RINCY VIPIN to RINCY MATHEW notary KV Mani, Bangalore.

REENA W/O JC-674962W- Nb/Sub- RAVINDRA SINGH R/a 348/3B, Anoopnagar, Fazalpur, Rohta Road, Meerut, UP changed name from REENA to REENA DEVI notary KV Mani, Bangalore.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

DH DECCAN HERALD

SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER

BOOK YOUR CLASSIFIEDS ADS ONLINE WWW.DHCLASSIFIEDS.COM

ಪ್ರಜಾವಾಣಿ ಕ್ಲಾಸಿಫೈಡ್ಸ್

FOR MORE INFORMATION CONTACT 9880856233 | 9886213331 Email: santhoshkumar@deccanherald.co.in



ಮಾರಪ್ಪನಪಾಳ್ಯ ವಾರ್ಡ್‌ನಲ್ಲಿ ರಾಜಕಾಲುವೆ ಮೇಲೆ ಈ ಹಿಂದೆ ಅಳವಡಿಸಿದ್ದ ಟೈಲ್‌ಗಳನ್ನು ಕಿತ್ತು ಪಕ್ಕದಲ್ಲಿ ರಾಶಿಹಾಕಿರುವುದು (ಮೊದಲ ಚಿತ್ರ), ಹಿಂದಿನ ಕಾಂಕ್ರೀಟ್ ಸ್ಲ್ಯಾಬ್ ಕಿತ್ತು ಹೊಸತಾಗಿ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ (ಮಧ್ಯದ ಚಿತ್ರ), ರಾಜಕಾಲುವೆ ಮೇಲೆ ಮೂರು ವರ್ಷಗಳ ಹಿಂದೆ ನಿರ್ಮಿಸಿದ್ದ ಬಯಲು ವ್ಯಾಯಾಮಶಾಲೆಯ ಪರಿಕರಗಳು. ರಾಜಕಾಲುವೆ ಕಾಂಕ್ರೀಟೀಕರಣಕ್ಕೆ ಇವುಗಳನ್ನು ಕಿತ್ತು ಹಾಕಲು ಸಿದ್ಧತೆ ನಡೆದಿದೆ –ಪ್ರಜಾವಾಣಿ ಚಿತ್ರಗಳು

ಮಾರಪ್ಪನಪಾಳ್ಯ ವಾರ್ಡ್‌ನ ರಾಜಕಾಲುವೆ ದುರಸ್ತಿ ಕಾಮಗಾರಿ • ಸಮನ್ವಯ ಕೊರತೆಯಿಂದ ಜನರ ತೆರಿಗೆ ಹಣ ಪೋಲು

3 ವರ್ಷದ ಹಿಂದಿನ ಸ್ಲ್ಯಾಬ್ ಕಿತ್ತು ಮತ್ತೆ ಕಾಂಕ್ರೀಟ್

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಮಾರಪ್ಪನಪಾಳ್ಯ ವಾರ್ಡ್‌ನಲ್ಲಿ ಸುಮಾರು 300 ಮೀ ಉದ್ದದ ರಾಜಕಾಲುವೆಗೆ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಈ ಕಾಮಗಾರಿಯ ಬಗ್ಗೆ ಸ್ಥಳೀಯರು ಸಂಭ್ರಮ ಪಡುವ ಬದಲು ಅಚ್ಚರಿ ವ್ಯಕ್ತಪಡಿಸುತ್ತಾರೆ!

ಮೂರು ವರ್ಷಗಳ ಹಿಂದಷ್ಟೇ ಈ ರಾಜಕಾಲುವೆಗೆ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸಿ ಅಭಿವೃದ್ಧಿಪಡಿಸಲಾಗಿತ್ತು. ಚೆನ್ನಾಗಿದ್ದ ಕಾಂಕ್ರೀಟ್ ಸ್ಲ್ಯಾಬ್ ಅನ್ನು ಕಿತ್ತು ಮತ್ತೆ ಅದೇ ಜಾಗದಲ್ಲಿ ಮತ್ತೆ ಕಾಂಕ್ರೀಟ್ ಅಳವಡಿಸುತ್ತಿರುವುದರ ಮರ್ಮ ಏನೆಂದೇ ತಿಳಿಯುತ್ತಿಲ್ಲ ಎನ್ನುತ್ತಾರೆ ಸ್ಥಳೀಯರು.

‘ಇಲ್ಲಿನ ರಾಜಕಾಲುವೆಗೆ ಮೂರು ವರ್ಷಗಳ ಹಿಂದಷ್ಟೇ ಕಾಂಕ್ರೀಟ್ ಸ್ಲಾಬ್ ನಿರ್ಮಿಸಿ ಮುಚ್ಚಲಾಗಿತ್ತು. ಅದರ ಮೇಲೆಯೇ ಟೈಲ್ಸ್ ಅಳವಡಿಸಿ ವ್ಯಾಯಾಮದ ಪರಿಕರಗಳನ್ನು ಹಾಗೂ ಆಸನಗಳನ್ನು ಅಳವಡಿಸಲಾಗಿತ್ತು. ಈಗ ಅವುಗಳೆಲ್ಲವನ್ನೂ ಕಿತ್ತು ಮತ್ತೆ ಹೊಸತಾಗಿ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸಲಾಗುತ್ತಿದೆ’ ಎಂದು ಸ್ಥಳೀಯ ನಿವಾಸಿ ರಾಮಕೃಷ್ಣ ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ಪಶ್ಚಿಮ ವಲಯದ ರಾಜಕಾಲುವೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ‘ರಾಜಕಾಲುವೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಬಿಬಿಎಂಪಿಗೆ ಬಿಡುಗಡೆಯಾದ ಅನುದಾನದಲ್ಲಿ ಮಾರಪ್ಪನಪಾಳ್ಯ ವಾರ್ಡ್‌ನಲ್ಲೂ ಕಾಮಗಾರಿ ಕೈಗೆತ್ತಿಕೊಂಡಿದ್ದೇವೆ. ಇಲ್ಲಿನ ರಾಜಕಾಲುವೆಯ ತಡೆಗೋಡೆಯನ್ನು ಕಲ್ಲಿನಿಂದ ಕಟ್ಟಲಾಗಿತ್ತು. ಅದು ಶಿಥಿಲಗೊಂಡಿದ್ದರಿಂದ ಸಂಪೂರ್ಣ ಕಾಂಕ್ರೀಟ್‌ನ ತಡೆಗೋಡೆ ನಿರ್ಮಿಸಿ, ಅದರ ಮೇಲೆ ಸ್ಲ್ಯಾಬ್ ನಿರ್ಮಿಸಲಾಗುತ್ತಿದೆ’ ಎಂದರು

‘ಈ ಕಾಮಗಾರಿಗೆ ಈ ವಾರ್ಡ್‌ನಲ್ಲಿ ನಿರ್ದಿಷ್ಟವಾಗಿ ಎಷ್ಟು ಅನುದಾನ ಬಳಸಲಾಗುತ್ತಿದೆ ಎಂದು ಈಗಲೇ ತಿಳಿಸಲಾಗದು. ಕಾಮಗಾರಿಯ ಬಿಲ್ಲಿಂಗ್ ಪೂರ್ಣಗೊಂಡ ಬಳಿಕ ಈ ಬಗ್ಗೆ ಮಾಹಿತಿ ನೀಡಬಹುದು’ ಎಂದರು.

ಇಲ್ಲಿನ ರಾಜಕಾಲುವೆಗೆ ಮೂರು ವರ್ಷಗಳ ಹಿಂದಷ್ಟೇ ಕಾಂಕ್ರೀಟ್ ಸ್ಲ್ಯಾಬ್ ಹಾಕಿ ಅದರ ಮೇಲೆ ಬಯಲು ವ್ಯಾಯಾಮದ ಪರಿಕರಗಳನ್ನು ಅಳವಡಿಸಿದ್ದ ಬಗ್ಗೆ ಪ್ರಶ್ನಿಸಿದಾಗ, ‘ನಾವು ಈ ವಾರ್ಡ್‌ಗೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಗಮನಕ್ಕೆ ತಂದೇ ಕಾಮಗಾರಿ ಕೈಗೆತ್ತಿಕೊಳ್ಳುತ್ತಿದ್ದೇವೆ’ ಎಂದರು.

ಕಾಮಗಾರಿಯ ಕುರಿತು ಪ್ರತಿಕ್ರಿಯಿಸಿದ ವಾರ್ಡ್‌ನ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ‘ಈಗ ಕಾಂಕ್ರೀಟೀಕರಣ ಕಾಮಗಾರಿ ಕೈಗೆತ್ತಿಕೊಂಡಿರುವುದು ರಾಜಕಾಲುವೆ ವಿಭಾಗದವರು. ಇಲ್ಲಿ ಕೆಲ ವರ್ಷಗಳ ಹಿಂದೆ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸಿ ವ್ಯಾಯಾಮ ಪರಿಕರಗಳನ್ನು ಅಳವಡಿಸಿದ್ದು ನಿಜ. ಹೊಸ ಕಾಮಗಾರಿ ಸಲುವಾಗಿ ವ್ಯಾಯಾಮ ಪರಿಕರಗಳನ್ನು ಹಾಗೂ ಟೈಲ್ಸ್‌ಗಳನ್ನು ಕಿತ್ತಿದ್ದೇವೆ. ಅವುಗಳನ್ನು ಅದೇ ಸ್ಥಳದಲ್ಲಿ ಮತ್ತೆ ಅಳವಡಿಸಲಾಗುವುದು’ ಎಂದರು.

‘ಮೂರು ವರ್ಷಗಳ ಹಿಂದಷ್ಟೇ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕಿತ್ತು ಹಾಕುವುದನ್ನು ನೋಡುವಾಗ ನಮ್ಮ ಕರುಳು ಕೂಡ ಕಿತ್ತು ಬರುತ್ತದೆ. ಸಾರ್ವಜನಿಕರ ತೆರಿಗೆ ಹಣವನ್ನು ಈ ರೀತಿ ದುರ್ಬಳಕೆ ಮಾಡುವುದನ್ನು ಎಳ್ಳಷ್ಟೂ ಸಹಿಸಲಾಗದು’ ಎಂದು ಸ್ಥಳೀಯ ನಿವಾಸಿ ಶ್ರೀಕಾಂತ್ ಎಸ್. ಚನ್ನಾಳ ಬೇಸರ ವ್ಯಕ್ತಪಡಿಸಿದರು.

‘ಬಿಬಿಎಂಪಿಯ ಎರಡು ವಿಭಾಗಗಳ ನಡುವೆ ಸಮನ್ವಯದ ಕೊರತೆಗೆ ಈ ಕಾಮಗಾರಿ ಅತ್ಯುತ್ತಮ ಉದಾಹರಣೆ. ಇಲ್ಲಿನ ರಾಜಕಾಲುವೆಯ ತಡೆಗೋಡೆ ಹಾಗೂ ಸ್ಲ್ಯಾಬ್ ಗಟ್ಟಿಯಾಗಿಯೇ ಇತ್ತು. ಒಂದು ವೇಳೆ ತಡೆಗೋಡೆ ಗಟ್ಟಿ ಇಲ್ಲ ಎಂದಾದರೆ ಮೂರು ವರ್ಷ ಹಿಂದೆ ಅದರ ಮೇಲೆ ಸ್ಲ್ಯಾಬ್ ನಿರ್ಮಿಸಿದ್ದು ಏಕೆ? ಟೈಲ್ಸ್ ಅಳವಡಿಸಿ, ಬಯಲು ವ್ಯಾಯಾಮ ಪರಿಕರಗಳನ್ನು ಅಳವಡಿಸಿದ್ದಾದರೂ ಏಕೆ. ಸ್ಲ್ಯಾಬ್ ಕಿತ್ತು ಹಾಕಿದ್ದರಿಂದ ಉಂಟಾದ ನಷ್ಟಕ್ಕೆ ಯಾರು ಹೊಣೆ. ಅವುಗಳನ್ನು ಕಿತ್ತುಹಾಕಲು, ಮತ್ತೆ ಅಳವಡಿಸಲು ತಗಲುವ ವೆಚ್ಚ ಭರಿಸುವವರು ಯಾರು’ ಎಂದು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಇಂಡಿಯಾ) ಸಂಸ್ಥೆಯ (ಎಸಿಸಿಇಐ) ಬೆಂಗಳೂರು ಕೇಂದ್ರದ ಚೇರ್‌ಮನ್ ಕೂಡ ಆಗಿರುವ ಶ್ರೀಕಾಂತ್ ಪ್ರಶ್ನಿಸಿದರು.

ಈ ಹಿಂದೆ ವ್ಯಾಯಾಮ ಪರಿಕರಗಳನ್ನು ಸ್ಥಾಪಿಸಿದ್ದ ಜಾಗದಲ್ಲಿದ್ದ ಟೈಲ್ಸ್‌ಗಳನ್ನು ಕಿತ್ತು ರಾಜಕಾಲುವೆ ಪಕ್ಕದಲ್ಲೇ ರಾಶಿ ಹಾಕಲಾಗಿದೆ. ಅವುಗಳನ್ನೂ ಯಾರು ಎತ್ತಿಕೊಂಡು ಹೋದರೂ ಕೇಳುವವರಿಲ್ಲ. ಕೆಲವು ವ್ಯಾಯಾಮ ಪರಿಕರಗಳು ಈಗಲೂ ಅಲ್ಲೇ ಇವೆ. ‘ಅವುಗಳನ್ನೂ ಕಿತ್ತು, ಆ ಜಾಗದಲ್ಲಿ ಇನ್ನಷ್ಟೇ ಕಾಮಗಾರಿ ನಡೆಸಬೇಕಿದೆ’ ಎಂದು ಸ್ಥಳೀಯರು ತಿಳಿಸಿದರು.

ಚೆನ್ನಾಗಿದ್ದ ಕಾಂಕ್ರೀಟ್ ಸ್ಲ್ಯಾಬ್ ಕಿತ್ತು ಮತ್ತೆ ಅದೇ ಜಾಗದಲ್ಲಿ ಹೊಸತಾಗಿ ಕಾಂಕ್ರೀಟ್ ಸ್ಲ್ಯಾಬ್ ನಿರ್ಮಿಸುತ್ತಿರುವ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಸಾರ್ವಜನಿಕರ ತೆರಿಗೆ ಹಣದ ಪ್ರತಿ ಪೈಸೆ ಸದ್ವಿನಿಯೋಗ ಆಗಬೇಕು

ಶ್ರೀಕಾಂತ ಎಸ್.ಚನ್ನಾಳ, ಎಸಿಸಿಇಐ, ಬೆಂಗಳೂರು ಕೇಂದ್ರದ ಚೇರ್‌ಮನ್

ಜನರ ತೆರಿಗೆ ಹಣವನ್ನು ಎಷ್ಟು ಸುಲಭವಾಗಿ ಲೂಟಿ ಹೊಡೆಯಬಹುದು ಎಂಬುದಕ್ಕೆ ಇದು ಉತ್ತಮ ಉದಾಹರಣೆ. ಇದನ್ನು ನೋಡುವಾಗ ದುಃಖವಾಗುತ್ತದೆ

ಸುಬ್ರಹ್ಮಣ್ಯ ಬಿ.ಎಸ್., ಸ್ಥಳೀಯ ನಿವಾಸಿ

ಸ್ಥಳದಲ್ಲಿ ಇಲ್ಲ ಕಾಮಗಾರಿ ವಿವರ

ಯಾವುದೇ ಕಾಮಗಾರಿ ನಡೆಸುವಾಗಲೂ ಅದರ ಸಂಪೂರ್ಣ ವಿವರಗಳಿರುವ ಫಲಕವನ್ನು ಸ್ಥಳದಲ್ಲಿ ಅಳವಡಿಸಬೇಕು. ಕಾಮಗಾರಿಯ ಅಂದಾಜು ವೆಚ್ಚ, ಕೆಲಸ ಪೂರ್ಣಗೊಳಿಸಬೇಕಾದ ಅವಧಿ, ಗುತ್ತಿಗೆದಾರರ ವಿವರಗಳು ಅದರಲ್ಲಿರಬೇಕು. ಆದರೆ, ಈ ರಾಜಕಾಲುವೆಯ ಕಾಮಗಾರಿ ನಡೆಯುವ ಸ್ಥಳದಲ್ಲಿ ಅಂತಹ ಯಾವುದೇ ಫಲಕಗಳನ್ನು ಅಳವಡಿಸಿಲ್ಲ.

ಕಿರಿದಾಗಲಿದೆ ರಾಜಕಾಲುವೆ

‘ಈಗ ಕಾಂಕ್ರೀಟ್ ತಡೆಗೋಡೆಯನ್ನು ರಾಜಕಾಲುವೆ ಒಳಗೇ ನಿರ್ಮಿಸಲಾಗುತ್ತದೆ. ಇದರಿಂದ ಕಾಲುವೆಯ ಅಗಲ ಸುಮಾರು ಒಂದೂವರೆ ಅಡಿಗಳಷ್ಟು ಕಿರಿದಾಗುತ್ತದೆ. ಖಂಡಿತಾ ಇದು ಭವಿಷ್ಯದಲ್ಲಿ ಮತ್ತಷ್ಟು ಸಮಸ್ಯೆಗೆ ಕಾರಣವಾಗಲಿದೆ. ಅಷ್ಟಕ್ಕೂ ರಾಜಕಾಲುವೆಗಳನ್ನು ಕಾಂಕ್ರೀಟ್ ಸ್ಲ್ಯಾಬ್‌ನಿಂದ ಮುಚ್ಚುವುದೇ ಅಕ್ರಮ’ ಎಂದು ದೂರುತ್ತಾರೆ ಸ್ಥಳೀಯರು.

ವಂಚನೆ: ‘ಸಿಬಿಐ’ ನಕಲಿ ಅಧಿಕಾರಿ ಬಂಧನ

ಬೆಂಗಳೂರು: ತಾನು ಸಿಬಿಐ ಅಧಿಕಾರಿ. ನಿಮಗೆ ಮೈಸೂರಿನಲ್ಲಿ ಪೊಲೀಸ್ ಕೆಲಸ ಕೊಡಿಸುತ್ತೇನೆ ಎಂದು ಯುವಕರನ್ನು ನಂಬಿಸಿ ಅವರಿಂದ ಒಟ್ಟು ₹13.4 ಲಕ್ಷ ಹಣ ಪಡೆದು ವಂಚಿಸಿರುವ ಮಹಿಳೆ ಹಾಗೂ ಆಕೆಯ ಪತಿಯ ವಿರುದ್ಧ ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಶಾಂಪುರ ಮುಖ್ಯರಸ್ತೆಯ ನಿವಾಸಿ ಎಂ.ಎಸ್.ನವೀನ್ ಕುಮಾರ್ ನೀಡಿರುವ ದೂರಿನ ಆಧಾರದಲ್ಲಿ ಕೀರ್ತನಾ ಹಾಗೂ ಆಕೆಯ ಪತಿ ಸುನೀಲ್ ಕುಮಾರ್ ಎಂಬುವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೈಸೂರಿನಲ್ಲಿ ಪೊಲೀಸ್ ಕೆಲಸ ಕೊಡಿಸುವ ಭರವಸೆ ನೀಡಿದ್ದರಿಂದ ನವೀನ್ ಹಾಗೂ ಅವರ ಸಹೋದರ ಸಂಬಂಧಿ ವಿಜಯ್‌ಕುಮಾರ್ ಅವರು ಆರೋಪಿಗಳಿಗೆ 2020ರ ಅಕ್ಟೋಬರ್‌ನಿಂದ 2022ರ ಜನವರಿ ಅವಧಿಯಲ್ಲಿ ಒಟ್ಟು ₹13.4 ಲಕ್ಷ ಹಣ ನೀಡಿದ್ದಾರೆ’.

‘ತನ್ನ ತಾಯಿಯ ಗೆಳತಿಯಿಂದ ಆರೋಪಿತರ ಪರಿಚಯವಾಗಿತ್ತು. ತಾನು ಸರ್ಕಾರಿ ಕೆಲಸಕ್ಕಾಗಿ ಅರ್ಜಿ ಹಾಕುತ್ತಿದ್ದ ವಿಷಯ ಆರೋಪಿಗಳಿಗೆ ಗೊತ್ತಾಗಿತ್ತು. ನನ್ನನ್ನು ಭೇಟಿಯಾಗಿದ್ದ ಕೀರ್ತನಾ ತಾನು ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಳು. ಆಕೆ ಪೊಲೀಸ್ ದಿರಿಸಿನಲ್ಲಿ ಇದ್ದಿದ್ದನ್ನು ಕಂಡು ಆಕೆಯ ಮಾತು ನಂಬಿದ್ದೆ. ಎಂದು ದೂರಿನಲ್ಲಿ ನವೀನ್ ಉಲ್ಲೇಖಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೆಲಸ ಕೊಡಿಸುವುದಾಗಿ ನಂಬಿಸಿದ್ದ ಕೀರ್ತನಾ, ತಲಾ ₹3 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದಳು. ಕೆಲ ದಿನಗಳ ನಂತರ ಕಾನ್‌ಸ್ಟೆಬಲ್ ಬದಲು ಹೆಡ್ ಕಾನ್‌ಸ್ಟೆಬಲ್ ಕೆಲಸ ಕೊಡಿಸುವುದಾಗಿ ಹೇಳಿದ್ದ ಆಕೆ ಮತ್ತಷ್ಟು ಹಣಕ್ಕೆ ಬೇಡಿಕೆ ಇಟ್ಟಿದ್ದಳು’ ಎಂದೂ ದೂರಿನಲ್ಲಿ ವಿವರಿಸಲಾಗಿದೆ. ‘ನನಗೆ ಮೈಸೂರಿನ ಕೃಷ್ಣರಾಜಪುರ ಠಾಣೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಕೆಲಸ ಆಗಿದೆ ಎಂದು ತಿಳಿಸಿದ್ದ ಕೀರ್ತನಾ, ಮೈಸೂರು ನಗರ ಪೊಲೀಸ್ ಕಮಿಷನರ್ ಅವರ ಸಹಿ ಇದ್ದ ಆದೇಶ ಪತ್ರ ನೀಡಿದ್ದಳು. 2021ರ ಜುಲೈನಲ್ಲಿ ಕರ್ತವ್ಯಕ್ಕೆ ದಾಖಲಾಗಲು ಠಾಣೆಗೆ ಹೋದಾಗ ಅದು ನಕಲಿ ಆದೇಶ ಪತ್ರ ಎಂದು ತಿಳಿಯಿತು ಎಂದೂ ದೂರಿನಲ್ಲಿ ಹೇಳಲಾಗಿದೆ’ ಎಂದು ಪೊಲೀಸರು ವಿವರಿಸಿದ್ದಾರೆ.

ವಿಶೇಷ ಬಹುಮಾನ

ಆಂಧ್ರಪ್ರದೇಶದಲ್ಲಿ ಗಣರಾಜ್ಯೋತ್ಸವದ ದಿನ ನಡೆದ ಪಥಸಂಚಲನದಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ಮೀಸಲು ಪೊಲೀಸ್ ಪಡೆಯ ಮಹಿಳಾ ಪೊಲೀಸರು ವಿಶೇಷ ಬಹುಮಾನ ಜಯಿಸಿದ್ದಾರೆ. ರಾಜ್ಯದ ಪೊಲೀಸರು ಆಂಧ್ರಪ್ರದೇಶದ ಹಿರಿಯ ಅಧಿಕಾರಿಗಳಿಂದ ಫಲಕ ಹಾಗೂ ₹10 ಸಾವಿರ ನಗದು ಸ್ವೀಕರಿಸಿದರು.

ಸಂಕ್ಷಿಪ್ತ ಸುದ್ದಿ

ಸರಣಿ ಕಳವು: ಮೂವರ ಬಂಧನ

ಬೆಂಗಳೂರು: ಒಬ್ಬಂಟಿಯಾಗಿ ಸಾಗುವ ಪಾದಚಾರಿಗಳನ್ನು ಮಾರಕಾಸ್ತ್ರಗಳಿಂದ ಬೆದರಿಸಿ ನಗದು ಹಾಗೂ ಮೊಬೈಲ್ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಜೆ.ಪಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಘವೇಂದ್ರ ಯಾನೆ ರಾಘು (19), ಆರ್.ಭಾನುಪ್ರಕಾಶ್ (20) ಹಾಗೂ ಯಾಸೀಂ ಖಾನ್ (19) ಬಂಧಿತರು. ಮೂವರು ಬಾಲಕರೂ ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಇವರಿಂದ ವಿವಿಧ ಕಂಪನಿಯ 23 ಬೈಕ್ ಹಾಗೂ ಸ್ಕೂಟರ್, 1 ಆಟೊ, 1 ಕೆಟಿಎಂ ಡ್ಯೂಕ್ ಬೈಕ್ ಹಾಗೂ 12 ಮೊಬೈಲ್ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹37.5 ಲಕ್ಷ ಎಂದು ಅಂದಾಜಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೆಲ ದಿನಗಳ ಹಿಂದೆ 6 ಮಂದಿ ದುಷ್ಕರ್ಮಿಗಳು ಒಟ್ಟು ಬೈಕ್‌ನಲ್ಲಿ ನಗರದ ವಿವಿಧೆಡೆ ಸುತ್ತಾಡಿ, ಒಂಟಿಯಾಗಿ ಹೋಗುವ ನಾಗರಿಕರನ್ನು ಅಡ್ಡಗಟ್ಟಿ ಅವರಿಂದ ನಗದು, ಮೊಬೈಲ್‌ಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಪುಟ್ಟೇನಹಳ್ಳಿ ಹಾಗೂ ಜೆ.ಪಿ. ನಗರ ಠಾಣಾ ವ್ಯಾಪ್ತಿಗಳಲ್ಲೂ ಕಳವು ನಡೆದಿತ್ತು. ಈ ಕುರಿತು ತನಿಖೆ ನಡೆಸಲಾಗುತ್ತಿತ್ತು.. ವೀಲಿಂಗ್ ಮಾಡುವುದಕ್ಕೆ ಬೈಕ್‌ಗಳನ್ನು ಕದಿಯುತ್ತಿದ್ದುದಾಗಿಯೂ ಆರೋಪಿಗಳು ತಿಳಿಸಿದ್ದಾರೆ. ಕದ್ದ ಮೊಬೈಲ್‌ಗಳನ್ನು ಮಾರಾಟ ಮಾಡಿ ಹಣ ಗಳಿಸುತ್ತಿದ್ದರು ಎಂಬುದೂ ಗೊತ್ತಾಗಿದೆ’ ಎಂದು ಹೇಳಿದ್ದಾರೆ.

ಬುಲೆಟ್ ಬೈಕ್‌ನಿಂದ ಬಿದ್ದು ಸವಾರ ಸಾವು

ಬೆಂಗಳೂರು: ಬುಲೆಟ್ ಬೈಕ್‌ವೊಂದು ನಿಯಂತ್ರಣ ತಪ್ಪಿ ರಸ್ತೆಗೆ ಉರುಳಿದ್ದರಿಂದ ಚಾಲಕ ಮೃತಪಟ್ಟಿದ್ದಾನೆ. ಯಲಹಂಕ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

‘ಸಂದೀಪ್ (26) ಮೃತ ಯುವಕ. ಈತ ಸಂಭ್ರಮ್ ಕಾಲೇಜು ಸಮೀಪ ವಾಸವಿದ್ದ, ವಿದ್ಯಾರಣ್ಯಪುರದ ಸಪ್ತಗಿರಿ ಕಾಲೇಜಿನ 4ನೇ ಕ್ರಾಸ್ ಬಳಿ ಬುಲೆಟ್‌ನಲ್ಲಿ ಸಾಗುತ್ತಿದ್ದಾಗ ತಿರುವು ಪಡೆಯುವ ವೇಳೆ ಬೈಕ್ ನಿಯಂತ್ರಣ ತಪ್ಪಿ ರಸ್ತೆಗೆ ಉರುಳಿತ್ತು. ಸಂದೀಪ್ ಹೆಲ್ಮೆಟ್ ಧರಿಸಿರಲಿಲ್ಲ. ಹೀಗಾಗಿ ಆತನ ತಲೆಗೆ ಬಲವಾದ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ’ ಎಂದು ಹೇಳಿದ್ದಾರೆ.

ಸೂರ್ಯನಮಸ್ಕಾರ ಬಹಿಷ್ಕಾರ

ಬೆಂಗಳೂರು: ಗಣರಾಜ್ಯೋತ್ಸವದ ದಿನ ಕಾಲೇಜುಗಳಲ್ಲಿ ಸೂರ್ಯ ನಮಸ್ಕಾರ ಕಾರ್ಯಕ್ರಮ ಕಡ್ಡಾಯಗೊಳಿಸಿ ಯುಜಿಸಿ ಹೊರಡಿಸಿದ್ದ ಆದೇಶಕ್ಕೆ ವಿರೋಧ ವ್ಯಕ್ತಪಡಿಸಿರುವ ಕ್ಯಾಂಪಸ್ ಫ್ರಂಟ್, ರಾಜ್ಯದಾದ್ಯಂತ ಕಾಲೇಜುಗಳ ಎದುರು ಬುಧವಾರ ಭಿತ್ತಿಪತ್ರ ಪ್ರದರ್ಶಿಸಿ ಸೂರ್ಯ ನಮಸ್ಕಾರ ಬಹಿಷ್ಕರಿಸಿತು.

‘ರಾಜ್ಯ ಸರ್ಕಾರವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಹೆಸರಿನಲ್ಲಿ ಸೂರ್ಯ ನಮಸ್ಕಾರ ಕಾರ್ಯಕ್ರಮದ ಮೂಲಕ ಮತೀಯ ಸಿದ್ಧಾಂತ ಜಾರಿಗೊಳಿಸಲು ಮುಂದಾಗಿದೆ’ ಎಂದೂ ಕ್ಯಾಂಪಸ್ ಫ್ರಂಟ್ ದೂರಿದೆ.

ವ್ಯಕ್ತಿಯ ಕೊಂದು ಕೆರೆಗೆ ಎಸೆದಿದ್ದವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಬಳಿ ಇರುವ ಚಿನ್ನ ಪಡೆದು ಅದಕ್ಕೆ ಬದಲಾಗಿ ಹಣ ನೀಡುವಂತೆ ಚಿನ್ನದ ಕಂಪನಿ ಉದ್ಯೋಗಿಯೊಬ್ಬರನ್ನು ಮನೆಗೆ ಕರೆಸಿಕೊಂಡು ಬಳಿಕ ಅವರನ್ನು ಕೊಲೆ ಮಾಡಿ ಮೂಟೆಯೊಳಗೆ ಶವ ಇಟ್ಟು ಕೆರೆಗೆ ಎಸೆದಿದ್ದ ಇಬ್ಬರು ಆರೋಪಿಗಳನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಅರಕೆರೆ ಹೋಬಳಿಯ ಮೆಸನಹಳ್ಳಿ ಗ್ರಾಮದ ಮಂಜುನಾಥ್ ಯಾನೆ ಮಂಜ (28), ಉತ್ತರಿದುರ್ಗ ಹೋಬಳಿಯ ಉತ್ತರಿ ಗ್ರಾಮದ ಮುನಿರಾಜು ಯಾನೆ ರಾಜ (24) ಬಂಧಿತರು.

‘ಬನಶಂಕರಿ 2ನೇ ಹಂತದ ಸೆರಬಂಡೆಪಾಳ್ಯ 3ನೇ ಮುಖ್ಯರಸ್ತೆಯ ನಿವಾಸಿ ದಿವಾಕರ್ (29) ಮೃತ ವ್ಯಕ್ತಿ. ಇವರು ಎಸ್.ಎಸ್.ಆರ್.ಗೋಲ್ಡ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಹಣದ ಅವಶ್ಯಕತೆ ಇದ್ದಿದ್ದರಿಂದ ಆರೋಪಿಗಳು ಗೂಗಲ್‌ನಲ್ಲಿ ಹುಡುಕಿ ಎಸ್.ಎಸ್.ಆರ್.ಗೋಲ್ಡ್ ಕಂಪನಿಯ ದೂರವಾಣಿ ಸಂಖ್ಯೆ ಪಡೆದುಕೊಂಡಿದ್ದರು. ಆ ಸಂಖ್ಯೆಗೆ ಕರೆಮಾಡಿದಾಗ ಸಿಬ್ಬಂದಿಯೊಬ್ಬರು ಆರೋಪಿಗಳಿಗೆ ದಿವಾಕರ್ ಅವರ ಮೊಬೈಲ್ ಸಂಖ್ಯೆ ನೀಡಿದ್ದರು. ಇದೇ 19ರಂದು ದಿವಾಕರ್‌ಗೆ ಕರೆಮಾಡಿದ್ದ ಆರೋಪಿಗಳು ತಮ್ಮ ಬಳಿ 65 ರಿಂದ 70 ಗ್ರಾಂ ಚಿನ್ನವಿದೆ. ಹಣದ ಅವಶ್ಯಕತೆ ಇರುವುದರಿಂದ ಅದನ್ನು ಅಡವಿಡಲು ನಿರ್ಧರಿಸಿದ್ದೇವೆ. ನೀವು ಮನೆಗೆ ಬಂದು ಅದನ್ನು ಪಡೆದುಕೊಳ್ಳಿ ಎಂದಿದ್ದರು. ಅವರ ಮಾತು ನಂಬಿದ್ದ ದಿವಾಕರ್ ಇದೇ 20ರಂದು ತನ್ನ ಪತ್ನಿಯನ್ನು ಜೆ.ಪಿ.ನಗರ 6ನೇ ಹಂತದಲ್ಲಿರುವ ಆದಿತ್ಯ ಗ್ಲೋಬಲ್ ಕಚೇರಿ ಬಳಿ ಬಿಟ್ಟು, ಬೈಕ್‌ನಲ್ಲಿ ಸುಂಕದಕಟ್ಟೆಗೆ ಹೋಗಿದ್ದರು’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ದಿವಾಕರ್ ಮನೆಯೊಳಗೆ ಹೋಗುತ್ತಿದ್ದಂತೆ ಆರೋಪಿಗಳು ಹಾಗೂ ಅವರ ಜೊತೆ ಮನೆಯಲ್ಲಿದ್ದ ರಕ್ಷಿತಾ ಎಂಬಾಕೆ ಕತ್ತು ಹಿಸುಕಿ ಕೊಲೆ ಮಾಡಿ ₹5 ಲಕ್ಷ ಹಣ ಕಿತ್ತುಕೊಂಡಿದ್ದಾರೆ. ನಂತರ ಪ್ಲಾಸ್ಟಿಕ್ ಚೀಲದಲ್ಲಿ ಮೃತದೇಹ ತುಂಬಿದ್ದಾರೆ. ಬೈಕ್ ಹಾಗೂ ಮೃತದೇಹವನ್ನು ಮಾಗಡಿ ರಸ್ತೆಯಲ್ಲಿರುವ ಹೊನ್ನಾಪುರ ಕೆರೆಯಲ್ಲಿ ಬಿಸಾಕಿದ್ದಾರೆ. ಈ ವಿಷಯವನ್ನು ವಿಚಾರಣೆ ವೇಳೆ ತಿಳಿಸಿದ್ದಾರೆ. ಐಷಾರಾಮಿ ಬದುಕು ನಡೆಸಲು ಆರೋಪಿಗಳಿಗೆ ಹಣದ ಅವಶ್ಯಕತೆ ಇತ್ತು. ಹೀಗಾಗಿಯೇ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾರೆ’ ಎಂದು ಪೊಲೀಸರು ವಿವರಿಸಿದ್ದಾರೆ.

ಮೂಟೆಯಲ್ಲಿದ್ದ ಶವವನ್ನು ವ್ಯಕ್ತಿಯೊಬ್ಬರು ಕೆರೆಯಿಂದ ಹೊರ ತೆಗೆಯುತ್ತಿರುವುದು

ಮೊಬೈಲ್ ಕರೆ ನೀಡಿತು ಸುಳಿವು

‘ದಿವಾಕರ್ ಅವರ ಮೊಬೈಲ್ ಕರೆಗಳ ಮಾಹಿತಿ ಕಲೆಹಾಕಿ ಪರಿಶೀಲಿಸಲಾಗಿತ್ತು. ಇದೇ 29ರಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ಸುಂಕದಕಟ್ಟೆ ಬಳಿ ಅವರ ಮೊಬೈಲ್ ಸ್ವಿಚ್ ಆಫ್ ಆಗಿರುವುದು ತನಿಖೆಯಿಂದ ಗೊತ್ತಾಗಿತ್ತು. ಬಂಧಿತ ಆರೋಪಿಗಳು ದಿವಾಕರ್‌ಗೆ ಹಲವು ಬಾರಿ ಕರೆ ಮಾಡಿ ಮಾತನಾಡಿದ್ದರು. ಹೀಗಾಗಿ ಅವರನ್ನು ಠಾಣೆಗೆ ಕರೆತಂದು ವಿಚಾರಿಸಿದಾಗ ಕೊಲೆ ಮಾಡಿರುವ ವಿಷಯ ಒಪ್ಪಿಕೊಂಡಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ಮೃತದೇಹವನ್ನು ಕೆರೆಗೆ ಬಿಸಾಡಲು ತೀರ್ಮಾನಿಸಿದ್ದ ಆರೋಪಿಗಳು ದಿವಾಕರ್ ಅವರ ಬೈಕ್‌ನಲ್ಲೇ ಶವವನ್ನು ಕೆರೆಗೆ ಸಾಗಿಸಿದ್ದರು. ಕೆಲ ದಿನಗಳ ನಂತರ ಶವ ತೇಲಬಹುದು. ಹಾಗೇನಾದರು ಆದರೆ ತಾವು ಪೊಲೀಸರ ಕೈಗೆ ಸಿಕ್ಕಿಹಾಕಿಕೊಳ್ಳುತ್ತೇವೆ ಎಂದು ಹೆದರಿ ಶವ ತುಂಬಿದ್ದ ಮೂಟೆಗೆ ಕಲ್ಲು ಕಟ್ಟಿ ಕೆರೆಗೆ ಬಿಸಾಕಿದ್ದರು’ ಎಂದು ತಿಳಿಸಿದ್ದಾರೆ.

‘ಅಪರಾಧ ಕಾಯ್ದೆಗಳಲ್ಲಿ ಬದಲಾವಣೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಕಾನೂನುಗಳು ಅದರಲ್ಲೂ ಅಪರಾಧ ಕಾಯ್ದೆಗಳು ವಸಾಹತುಶಾಹಿ ವ್ಯವಸ್ಥೆಯಿಂದ ಮುಕ್ತಗೊಳ್ಳಬೇಕಿದೆ. ಬ್ರಿಟಿಷ್ ಪದ್ಧತಿಯಿಂದ ಹೊರಬರಬೇಕಾದ ಅಗತ್ಯವಿದೆ’ ಎಂದು ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಸಂಸದ ತೇಜಸ್ವಿ ಸೂರ್ಯ ಪ್ರತಿಪಾದಿಸಿದರು.

ಪಕ್ಷದ ಕಾನೂನು ಪ್ರಕೋಷ್ಠ ಬುಧವಾರ ಆಯೋಜಿಸಿದ್ದ ‘ಭಾರತೀಯ ಕಾನೂನುಗಳ ಸುಧಾರಣೆ ಮತ್ತು ಸಲಹೆ ಸಂಗ್ರಹ ಅಭಿಯಾನ’ಕ್ಕೆ ಚಾಲನೆ ಅವರು ಮಾತನಾಡಿದರು.

‘ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಪರಾಧ ಕಾಯ್ದೆಗಳಲ್ಲಿ ಬದಲಾವಣೆ ತರಲು ಬಯಸಿ ಎಲ್ಲ ಭಾಗಿದಾರರಿಗೆ ಪತ್ರ ಬರೆದಿದ್ದಾರೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು, ಕಾನೂನು ವಿಶ್ವವಿದ್ಯಾಲಯಗಳ ಕುಲಪತಿಗಳು, ಕಾನೂನು ಕಾಲೇಜುಗಳ ಪ್ರಾಂಶುಪಾಲರು, ಹಿರಿಯ ವಕೀಲರಿಂದ ಲಿಖಿತ ಸಲಹೆ, ಅಭಿಪ್ರಾಯ ಕೋರಲಾಗಿದೆ. ಅವುಗಳನ್ನು ಕ್ರೋಡೀಕರಿಸಿ ಸಲ್ಲಿಸುವ ಜವಾಬ್ದಾರಿ ಸಂಸದರಿಗೆ ನೀಡಿದ್ದಾರೆ’ ಎಂದರು.

‘ವಕೀಲ ವೃತ್ತಿಯಲ್ಲಿ ಪರಿಣತಿಗೆ ಹಾಗೂ ಸಂಪರ್ಕಕ್ಕೆ ಬೆಂಗಳೂರಿನಲ್ಲಿ ಸುಸಜ್ಜಿತ ಕಟ್ಟಡ ನಿರ್ಮಿಸಲು ಸಂಸದರ ವಿವೇಚನಾ ನಿಧಿಯಿಂದ ₹ 3 ಕೋಟಿವರೆಗೆ ನೆರವು ನೀಡುತ್ತೇನೆ. ಬಿಬಿಎಂಪಿಯಿಂದ ನಿವೇಶನ ಪಡೆದು, ಪಕ್ಷದ ಕಾನೂನು ಪ್ರಕೋಷ್ಠವು ವಿಸ್ತೃತ ಯೋಜನಾ ವರದಿ ಸಲ್ಲಿಸಬೇಕು’ ಎಂದು ಅವರು ಸಲಹೆ ನೀಡಿದರು.

ಅಭಿಯಾನಕ್ಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಚಾಲನೆ ನೀಡಿದರು.

‘ಅರ್ಹತೆ, ಪ್ರತಿಭೆ, ಸಾಮರ್ಥ್ಯ, ಅನುಭವ ಇತ್ಯಾದಿಗಳ ಮಾನದಂಡದ ಆಧಾರದಲ್ಲಿ ನ್ಯಾಯಾಧೀಶರ ನೇಮಕ ಆಗಬೇಕು’ ಎಂದು ವಕೀಲ ಗಂಗಾಧರ ಗುರುಮಠ ಹೇಳಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ಯೋಗೇಂದ್ರ ಹೊಡಾಘಟ್ಟ, ಸಹ ಸಂಚಾಲಕ ವಿನೋದ್ ಪಾಟೀಲ್ ಇದ್ದರು.

ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಸಂಸದ ತೇಜಸ್ವಿ ಸೂರ್ಯ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರು ವಿವೇಕ್ ಸುಬ್ಬಾರೆಡ್ಡಿ, ಯೋಗೇಂದ್ರ ಹೂಡಘಟ್ಟ, ಸಹ ಸಂಚಾಲಕರಾದ ವಿನೋದ್ ಎಸ್. ಪಾಟೀಲ್ ಅವರು ಡಾ ಬಿ.ಆರ್. ಅಂಬೇಡ್ಕರ್, ಪಂಡಿತ್ ದೀನ್ ದಯಾಳ್ ಉಪಾಧ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ವಿಧಾನಸಭಾ ಚುನಾವಣೆ: ಬಿಜೆಪಿ ಅಭ್ಯರ್ಥಿ ಕುರಿತು ಹೆಚ್ಚಿದ ಕುತೂಹಲ

ಅಯೋಧ್ಯೆಗೆ ಪವನ್ ಪಾಂಡೆ ಎಸ್‌ಪಿ ಅಭ್ಯರ್ಥಿ

ಲಖನೌ (ಪಿಟಿಐ): ಕುತೂಹಲ ಮೂಡಿಸಿರುವ ಅಯೋಧ್ಯೆ ಕ್ಷೇತ್ರಕ್ಕೆ ಸಮಾಜವಾದಿ ಪಕ್ಷವು (ಎಸ್‌ಪಿ) ಮಂಗಳವಾರ ತನ್ನ ಅಭ್ಯರ್ಥಿಯನ್ನು ಘೋಷಿಸಿದ್ದು ಅಖಿಲೇಶ್ ಯಾದವ್ ಸರ್ಕಾರದಲ್ಲಿ ಹಿಂದೆ ಸಚಿವರಾಗಿದ್ದ ಪವನ್ ಪಾಂಡೆ ಅವರಿಗೆ ಟಿಕೆಟ್ ನೀಡಿದೆ.

ತೇಜ್ ನಾರಾಯಣ್ ಪಾಂಡೆ ಅಲಿಯಾಸ್ ಪವನ್ ಪಾಂಡೆ ಅವರು 2012ರ ಉತ್ತರ ಪ್ರದೇಶ ಚುನಾವಣೆಯಲ್ಲಿ ಅಯೋಧ್ಯೆಯಿಂದ ಸ್ಪರ್ಧಿಸಿ ಗೆದ್ದಿದ್ದರು. ಆದರೆ 2017ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೇದ್ ಪ್ರಕಾಶ್ ಗುಪ್ತಾ ಅವರ ಎದುರು ಸೋತಿದ್ದರು. ಆದರೆ, ಈ ಬಾರಿಯೂ ಪಾಂಡೆ ಅವರನ್ನೇ ಅಯೋಧ್ಯೆಯಿಂದ ಕಣಕ್ಕಿಳಿಸಲು ಎಸ್‌ಪಿ ನಿರ್ಧರಿಸಿದೆ.

ಬಿಜೆಪಿ ತೊರೆದು ಎಸ್‌ಪಿ ಸೇರಿರುವ ಮಾಧುರಿ ವರ್ಮಾ ಅವರನ್ನು ನನ್ಪಾರಾ ಕ್ಷೇತ್ರದಿಂದ ಕಣಕ್ಕಿಳಿಸಲು ಎಸ್‌ಪಿ ನಿರ್ಧರಿಸಿದೆ.

ಎಸ್‌ಪಿ ಅಭ್ಯರ್ಥಿ ಘೋಷಣೆ ಮಾಡಿದ ಬಳಿಕ, ಯಾವ ಅಭ್ಯರ್ಥಿಯನ್ನು ಬಿಜೆಪಿ ಕಣಕ್ಕಿಳಿಸಲಿದೆ ಎಂಬ ಕುತೂಹಲ ಹೆಚ್ಚಾಗಿದೆ. ಬಹುಜನ ಸಮಾಜ ಪಕ್ಷ ಮತ್ತು ಕಾಂಗ್ರೆಸ್ ಕೂಡ ಅಯೋಧ್ಯೆಗೆ ತಮ್ಮ ಅಭ್ಯರ್ಥಿಗಳನ್ನು ಘೋಷಿಸಿಲ್ಲ. ಹಾಲಿ ಶಾಸಕ ವೇದ್ ಪ್ರಕಾಶ್ ಗುಪ್ತಾ ಅವರನ್ನೇ ಈ ಬಾರಿಯೂ ಬಿಜೆಪಿ ಕಣಕ್ಕಿಳಿಸಲಿದೆಯೇ ಎಂಬ ಪ್ರಶ್ನೆ ಬೆಂಬಲಿಗರಲ್ಲಿ ಮನೆಮಾಡಿದೆ.

ವೇದ್ ಪ್ರಕಾಶ್ ವಿರುದ್ಧ ಅಲೆ: ಕ್ಷೇತ್ರದ ಜನರಿಗೆ ವೇದ್ ಪ್ರಕಾಶ್ ಕುರಿತು ಉತ್ತಮ ಅಭಿಪ್ರಾಯವಿಲ್ಲ ಎಂದು ಹೇಳಲಾಗಿದೆ.

'ವೇದ್ ಪ್ರಕಾಶ್ ಅವರ ಕುರಿತು ಮತದಾರರು ಅಸಮಾಧಾನ ಹೊಂದಿದ್ದಾರೆ. ಬಿಜೆಪಿ ಅಭ್ಯರ್ಥಿಯನ್ನು ಬದಲಿಸಿದರೆ ಪಕ್ಷಕ್ಕೆ ಅನುಕೂಲವಾಗಲಿದೆ' ಎಂದು ಪಕ್ಷದ ಮುಖಂಡರೊಬ್ಬರು ಹೇಳಿದ್ದಾರೆ.

ಶಾಸಕ ವೇದ್ ಪ್ರಕಾಶ್ ವ್ಯಾಪಾರಿ ಸಮುದಾಯದವರೇ ಆಗಿದ್ದರೂ ವ್ಯಾಪಾರಿ ಸಮುದಾಯದ ಪರ ಸರ್ಕಾರದ ಎದುರು ಧ್ವನಿ ಎತ್ತುವಲ್ಲಿ ಸೋತಿದ್ದಾರೆ ಎಂದು ಮತ್ತೊಬ್ಬ ವ್ಯಾಪಾರಿ ಹೇಳಿದ್ದಾರೆ. ಇನ್ನೂ ಹಲವರು ಬಿಜೆಪಿ ಸರ್ಕಾರದ ಅಭಿವೃದ್ಧಿ ಕೆಲಸಗಳನ್ನು ಸ್ವಾಗತಿಸಿದ್ದಾರೆ.

1991ರಿಂದ 2007ರವರೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಅಯೋಧ್ಯೆ ಕ್ಷೇತ್ರದಿಂದ ಬಿಜೆಪಿಯ ಈಗಿನ ಸಂಸದ ಲುಲ್ಲಾ ಸಿಂಗ್ ಗೆದ್ದಿದ್ದರು. 2012ರ ಚುನಾವಣೆಯಲ್ಲಿ ಎಸ್‌ಪಿ ಅಭ್ಯರ್ಥಿ ಪವನ್ ಪಾಂಡೆ ಎದುರು ಸೋತಿದ್ದರು.

ಫೆ.27ರಂದು ಅಯೋಧ್ಯೆಗೆ ಚುನಾವಣೆ ನಡೆಯಲಿದೆ. ಅಯೋಧ್ಯೆ ಕ್ಷೇತ್ರದಲ್ಲಿ ಶೇ 13–15ರಷ್ಟು ಬ್ರಾಹ್ಮಣ, ಯಾದವ ಮತದಾರರು ಮತ್ತು ಶೇ 18–20ರಷ್ಟು ಮುಸ್ಲಿಂ ಮತದಾರರಿದ್ದಾರೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಯೋಧ್ಯೆಯಿಂದ ಸ್ಪರ್ಧಿಸಲಿದ್ದಾರೆ ಎಂಬ ನಿರೀಕ್ಷೆ ಇತ್ತು. ಆದರೆ ಅವರು ಗೋರಖಪುರ ನಗರ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಪಕ್ಷ ಘೋಷಿಸಿದೆ.

ಪಂಜಾಬ್‌ನ ಶಿರೋಮಣಿ ಅಕಾಲಿ ದಳದ ನಾಯಕ ಬಿಕ್ರಮ್ ಸಿಂಗ್ ಮಾಜಿಥಿಯಾ ಚಂಡೀಗಡದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದರು –ಪಿಟಿಐ ಚಿತ್ರ

3 ನಿಮಿಷದಲ್ಲಿ ಅಖಿಲೇಶ್ ಮನವೊಲಿಸಿದ ಅಭ್ಯರ್ಥಿ ರೂಪಾಲಿ

ಆಗ್ರಾ (ಪಿಟಿಐ): ಸಮಾಜವಾದಿ ಪಕ್ಷದಿಂದ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡುವಂತೆ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರನ್ನು ಮೂರೇ ನಿಮಿಷಗಳಲ್ಲಿ ಮನವೊಲಿಸುವಲ್ಲಿ ರೂಪಾಲಿ ದೀಕ್ಷಿತ್ ಯಶಸ್ವಿಯಾಗಿದ್ದಾರೆ.

ಈ ಕುರಿತು ರೂಪಾಲಿ ಅವರೇ ಹೇಳಿಕೊಂಡಿದ್ದಾರೆ. ತನ್ನ ತಂದೆ ಮತ್ತು ಠಾಕೂರ್ ಸಮುದಾಯವನ್ನು ಅವಮಾನಿಸಿದ ಬಿಜೆಪಿ ಅಭ್ಯರ್ಥಿ ಚೋಟೆಲಾಲ್ ಸಿಂಗ್ ವಿರುದ್ಧ ಸೇಡು ತೀರಿಸಿಕೊಳ್ಳುವ ಸಲುವಾಗಿ ತಾವು ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದಾಗಿ ರೂಪಾಲಿ ಹೇಳಿದ್ದಾರೆ.

'ನಾನು ಅಖಿಲೇಶ್‌ರನ್ನು ಭೇಟಿ ಆದೆ. ಬಿಜೆಪಿ ಅಭ್ಯರ್ಥಿ ವಿರುದ್ಧ ಸೇಡು ತೀರಿಸಿಕೊಳ್ಳುವ ಸಲುವಾಗಿ ನಾನು ಕಣಕ್ಕಿಳಿಯಬೇಕಿದೆ. ನಾನು ಚುನಾವಣೆಯಲ್ಲಿ ಖಂಡಿತ ಗೆಲ್ಲುತ್ತೇನೆ ಎಂಬ ಭರವಸೆ ನೀಡಿದೆ. ಅಖಿಲೇಶ್ ಅವರು ನನಗೆ ಟಿಕೆಟ್ ನೀಡಿದರು' ಎಂದು ರೂಪಾಲಿ ಹೇಳಿದ್ದಾರೆ.

ರೂಪಾಲಿಗೆ ಟಿಕೆಟ್ ನೀಡುವ ಸಲುವಾಗಿ, ಈ ಮೊದಲು ಟಿಕೆಟ್ ನೀಡಿದ್ದ ಅಭ್ಯರ್ಥಿಗೆ ಕೊಕ್ ನೀಡಲಾಗಿದೆ ಎನ್ನಲಾಗಿದೆ.

ರೂಪಾಲಿ ಅವರು ಕಾನೂನು ಪದವೀಧರರು. ಬ್ರಿಟನ್‌ನ ಎರಡು ವಿಶ್ವವಿದ್ಯಾಲಯಗಳಿಂದ ಎಂಬಿಎ ಮತ್ತು ಎಂಎ ಪದವಿ ಪಡೆದಿದ್ದಾರೆ. ಮೂರು ವರ್ಷಗಳ ಕಾಲ ದುಬೈನ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದರು. ಎಸ್‌ಪಿ ಸೇರುವ ಮೊದಲು ಅವರು ಬಿಜೆಪಿಯಲ್ಲಿ ಇದ್ದರು.

ಪ್ರಜಾಮತ ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್
ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿರಿ
ಪ್ರಜಾವಾಣಿ ಪಾಡ್‌ಕಾಸ್ಟ್
ಪ್ರತಿ ರಾತ್ರಿ 9.00 ಗಂಟೆಗೆ
prajavani.net/podcast

ಪ್ರಜಾ ಮತ
ಜನತಂತ್ರದ ಹಬ್ಬ 2022

ಪಂಜಾಬ್: ಕಾಂಗ್ರೆಸ್‌ನಿಂದ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ

ನವದೆಹಲಿ (ಪಿಟಿಐ): ಪಂಜಾಬ್ ವಿಧಾನಸಭೆ ಚುನಾವಣೆಗಾಗಿ 23 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಕಾಂಗ್ರೆಸ್ ಮಂಗಳವಾರ ಬಿಡುಗಡೆ ಮಾಡಿದೆ.

ಕೆಲ ಮಾಜಿ ಶಾಸಕರೂ ಕೂಡ ಈ ಬಾರಿ ಕಣಕ್ಕಿಳಿಯಲಿದ್ದಾರೆ. ಪಂಜಾಬ್ ಮಾಜಿ ಮುಖ್ಯಮಂತ್ರಿ ಹರ್‌ಚರಣ್ ಸಿಂಗ್ ಬ್ರಾರ್ ಅವರ ಸೊಸೆ ಕರಣ್ ಬ್ರಾರ್ ಅವರು ಮುಕ್ತ್‌ಸರ್ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ.

ಕಳೆದ ಚುನಾವಣೆಯಲ್ಲಿ ಬಟಾಲ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದ ಪಂಜಾಬ್ ಮಾಜಿ ಸಚಿವ ಅಶ್ವಾನಿ ಶೇಕ್ರಿ ಅವರು ಈ ಬಾರಿಯೂ ಅದೇ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಮಾಜಿ ಶಾಸಕಿ ಹರ್‌ಚಂದ್ ಕೌರ್ ಅವರು ಮೀಸಲು ಕ್ಷೇತ್ರವಾದ ಮೆಹಲ್ ಕಲನ್‌ನಿಂದ ಕಣಕ್ಕಿಳಿಯಲಿದ್ದಾರೆ.

ಗುರು ಹರ್ ಸಾಹೈ ಕ್ಷೇತ್ರದ ಶಾಸಕ ಗುರ್‌ಜೀತ್ ಸಿಂಗ್ ಸೋಧಿ ಅವರು ಬಿಜೆಪಿಗೆ ಸೇರಿದ ಕಾರಣ ಆ ಕ್ಷೇತ್ರದಿಂದ ವಿಜಯ್ ಕಾರ್ಲಾ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಆಮ್ ಆದ್ಮಿ ಪಕ್ಷ ತೊರೆದು ಕಾಂಗ್ರೆಸ್ ಸೇರಿರುವ ಆಶು ಬಂಗಾರ್ ಅವರನ್ನು ಫಿರೋಜ್‌ಪುರ್ ಗ್ರಾಮೀಣ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಚುನಾವಣಾ ಕಣದಲ್ಲಿ..

- ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರ ವಿರುದ್ಧ ಶಿರೋಮಣಿ ಅಕಾಲಿದಳದ ಅಭ್ಯರ್ಥಿಯನ್ನು ಪ್ರಕಟಿಸಲಾಗಿದೆ. ಸಿಧು ಸ್ಪರ್ಧಿಸಿರುವ ಅಮೃತಸರ ಪೂರ್ವ ವಿಧಾನಸಭಾ ಕ್ಷೇತ್ರದಲ್ಲಿ, ಅಕಾಲಿದಳ ಮುಖ್ಯಸ್ಥ ಸುಖ್‌ಬೀರ್ ಸಿಂಗ್ ಬಾದಲ್ ಅವರ ಸಂಬಂಧಿ ಬಿಕ್ರಮ್ ಸಿಂಗ್ ಮಜಿಥಿಯಾ ಅವರು ಸ್ಪರ್ಧೆ ಒಡ್ಡಲಿದ್ದಾರೆ. ಪಕ್ಷದ ನೇತಾರ ಪ್ರಕಾಶ್ ಸಿಂಗ್ ಬಾದಲ್ ಅವರು ಲಂಬಿ ಕ್ಷೇತ್ರದಿಂದ ಸ್ಪರ್ಧೆ ಮಾಡಲಿದ್ದಾರೆ.
- ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಹೊಸ್ತಿಲಲ್ಲಿ ಆರ್‌ಪಿಎನ್ ಸಿಂಗ್ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿರುವುದನ್ನು ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರು ಟೀಕಿಸಿದ್ದಾರೆ. ಕಾಂಗ್ರೆಸ್ ಮುಖಂಡರು ಬಿಜೆಪಿ ಸೇರುತ್ತಿರುವ ಈ ಬೆಳವಣಿಗೆಯನ್ನು 'ಕಾಂಗ್ರೆಸ್‌ಯುಕ್ತ ಬಿಜೆಪಿ' ಎಂದು ಅವರು ಕರೆದಿದ್ದಾರೆ. 'ಕಾಂಗ್ರೆಸ್ ಮುಕ್ತ ಭಾರತ' ಎಂಬ ಬಿಜೆಪಿಯ ಜನಪ್ರಿಯ ಘೋಷಣೆಯನ್ನು ಬಳಸಿಕೊಂಡು ಅವರು 'ಕಾಂಗ್ರೆಸ್‌ಯುಕ್ತ ಬಿಜೆಪಿ' ಎಂದು ಮೂದಲಿಸಿದ್ದಾರೆ.
- ಗೋವಾ ವಿಧಾನಸಭಾ ಚುನಾವಣೆಗೆ ಬಿಜೆಪಿ ತನ್ನ ಎರಡನೇ ಪಟ್ಟಿಯನ್ನು ಬುಧವಾರ ಪ್ರಕಟಿಸಿದೆ. ಕೇಂದ್ರ ಸಚಿವ ಶ್ರೀಪಾದ ನಾಯಕ್ ಅವರ ಪುತ್ರ ಟಿಕೆಟ್ ಪಡೆಯುವಲ್ಲಿ ವಿಫಲರಾಗಿದ್ದಾರೆ. ವಿಧಾನಸಭಾ ಸ್ಪೀಕರ್ ರಾಜೇಶ್ ಪಟ್ನೇಕರ್ ಅವರು ತಮ್ಮ ಕ್ಷೇತ್ರವಾದ ಬಿಚೋಲಿಮ್‌ನಿಂದ ಸ್ಪರ್ಧಿಸಲಿದ್ದಾರೆ. ಬಿಜೆಪಿ ಈ ಹಿಂದೆ ಪ್ರಕಟಿಸಿದ್ದ ಮೊದಲ ಪಟ್ಟಿಯಲ್ಲಿ ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಅವರ ಪುತ್ರ ಉತ್ಪಲ್ ಅವರು ಟಿಕೆಟ್‌ನಿಂದ ವಂಚಿತರಾಗಿದ್ದರು.

ಕನ್ನಡದ ಪ್ರತಿಭೆ, ಸದ್ಯ ತಮಿಳುನಾಡಿನಲ್ಲಿ ವಾಸ

ಪದ್ಮಶ್ರೀಗೆ ಭಾಜನರಾದ ಬಾಳೇಶ ಭಜಂತ್ರಿ

ಪ್ರಜಾವಾಣಿ ವಾರ್ತೆ

ಎಂ.ಕೆ. ಹುಬ್ಬಳ್ಳಿ (ಬೆಳಗಾವಿ ಜಿಲ್ಲೆ): ಶಹನಾಯಿ ವಾದನ ಮತ್ತು ಗಾಯನದ ಮೂಲಕ ದೇಶ-ವಿದೇಶಗಳಲ್ಲಿ ಕೀರ್ತಿ ಗಳಿಸಿ, 2022ನೇ ಸಾಲಿನ 'ಪದ್ಮಶ್ರೀ' ಪುರಸ್ಕಾರಕ್ಕೆ ಭಾಜನವಾಗಿರುವ ಪಂಡಿತ್ ಬಾಳಪ್ಪ (ಬಾಳೇಶ) ಸಣ್ಣಭರಮಪ್ಪ ಭಜಂತ್ರಿ ಮೂಲತಃ ಬೆಳಗಾವಿ ಜಿಲ್ಲೆ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಎಂ.ಕೆ. ಹುಬ್ಬಳ್ಳಿ ಪಟ್ಟಣದವರು. 40 ವರ್ಷಗಳಿಂದ ಅವರು ತಮಿಳುನಾಡಿನ ಚನ್ನೈನಲ್ಲಿ ನೆಲೆಸಿದ್ದಾರೆ.

ಎಂ.ಕೆ.ಹುಬ್ಬಳ್ಳಿಯ ಸಣ್ಣಭರಮಪ್ಪ-ಯಲ್ಲಮ್ಮ ದಂಪತಿ ಪುತ್ರ. ಕಿತ್ತೂರು ನಾಡಿನ ಹೆಸರು ಬೆಳಗಿಸಿದ ಅವರ ಸಾಧನೆಗೆ ಇಲ್ಲಿನ ಜನರು ಹೆಮ್ಮೆ ವ್ಯಕ್ತಪಡಿಸುತ್ತಿದ್ದಾರೆ. 64 ವರ್ಷದ ಬಾಳಪ್ಪ ಬಡ ಕುಟುಂಬದಲ್ಲಿ ಜನಿಸಿ, ಹೆಚ್ಚಿನ ಸಾಧನೆಗಾಗಿ ತಮಿಳುನಾಡಿಗೆ ತೆರಳಿದರು. ಮೂವರು ಪುತ್ರರು ಸೇರಿದಂತೆ ಕುಟುಂಬದವರೆಲ್ಲ ಸಂಗೀತ ಕ್ಷೇತ್ರದಲ್ಲೇ ತೊಡಗಿಸಿಕೊಂಡಿರುವುದು ವಿಶೇಷ.

ಬಾಳೇಶ ಭಜಂತ್ರಿ

ತಂದೆ ಸಣ್ಣಭರಮಪ್ಪ ಹಾಗೂ ದೊಡ್ಡಪ್ಪ ದೊಡ್ಡಭರಮಣ್ಣ ಅವರಿಂದ ಸಂಗೀತದ ಸೆಳೆತಕ್ಕೆ ಒಳಗಾದ ಬಾಳಪ್ಪ ಅವರು, ಡಿ.ಪಿ. ಹಿರೇಮಠ, ಕೋದಂಡ ಸಾಳವಂಕಿ ಗುರು, ಪಂಡಿತ್ ಪುಟ್ಟರಾಜ ಗವಾಯಿ ಹಾಗೂ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರ ಬಳಿ ಅಭ್ಯಾಸ ಮಾಡಿದ್ದಾರೆ.

ಐದು ದಶಕಗಳಿಂದ 50ಸಾವಿರಕ್ಕೂ ಹೆಚ್ಚು ಹಾಡುಗಳಿಗೆ ಶಹನಾಯಿ ಸಂಯೋಜನೆ ನೀಡಿದ್ದಾರೆ. ಕನ್ನಡ, ಹಿಂದಿ, ತಮಿಳು, ಮಲಯಾಳಂ, ತೆಲುಗು ಸೇರಿದಂತೆ ಹಲವು ಭಾಷೆಗಳ ಹಾಡುಗಳಿಗೆ ಶಹನಾಯಿ ದನಿಗೂಡಿಸಿದ್ದಾರೆ. ಸಂಗೀತ ನಿರ್ದೇಶಕರಾದ ಹಂಸಲೇಖ, ರಾಜನ್ ನಾಗೇಂದ್ರ, ಇಳಯರಾಜ, ಎ.ಆರ್. ರೆಹಮಾನ್ ಸೇರಿ ಹಲವರಿಗೆ ಶಹನಾಯಿ ವಾದನ ಮೂಲಕ ಸಾಥ್ ನೀಡಿದ್ದಾರೆ.

'ಗ್ರಾಮೀಣ ಪ್ರದೇಶದಲ್ಲಿ ಬೆಳೆದ ನನಗೆ ಸಂಗೀತ ಶಾರದೆ ಆಶೀರ್ವದಿಸಿದ್ದಾಳೆ. ನನಗೆ ಪದ್ಮಶ್ರೀ ಪುರಸ್ಕಾರ ಸಿಗುವ ನಿರೀಕ್ಷೆ ಇರಲಿಲ್ಲ. ಸಾಧನೆ ಗುರುತಿಸಿ ಸರ್ಕಾರ ಪುರಸ್ಕಾರ ಕೊಟ್ಟಿದ್ದು ಖುಷಿ ನೀಡಿದೆ' ಎಂದು ಬಾಳೇಶ ಪ್ರತಿಕ್ರಿಯಿಸಿದರು. 'ಶಹನಾಯಿ ವಾದಕರೊಬ್ಬರಿಗೆ ದಕ್ಷಿಣ ಭಾರತದಲ್ಲಿ ಇದೇ ಮೊದಲ ಬಾರಿಗೆ ಪದ್ಮಶ್ರೀ ಸಿಕ್ಕಿರುವುದು ಹೆಗ್ಗಳಿಕೆ' ಎಂದು ಪುತ್ರ ಕೃಷ್ಣ ಭಜಂತ್ರಿ ಹೇಳಿದರು. 'ಬಾಳಪ್ಪ ಅವರು ನಮ್ಮೂರಿನ ಕೀರ್ತಿಯನ್ನು ದೇಶ-ವಿದೇಶದ ಮಟ್ಟದಲ್ಲಿ ಬೆಳಗಿಸಿ, ಅತ್ಯುನ್ನತ ನಾಗರಿಕ ಪುರಸ್ಕಾರಕ್ಕೆ ಭಾಜನವಾಗಿರುವುದು ಹೆಮ್ಮೆಯ ಸಂಗತಿ' ಎಂದು ನಿವಾಸಿ ಚನ್ನಪ್ಪ ಮುತ್ನಾಳ ಹರ್ಷ ವ್ಯಕ್ತಪಡಿಸಿದರು.

ಗಾಂಧೀಜಿ, ಅಂಬೇಡ್ಕರ್ ಭಾವಚಿತ್ರ ಇಡದ ಶಾಲೆ ವಿರುದ್ಧ ಪ್ರಕರಣ

ದೇವದುರ್ಗ (ರಾಯಚೂರು ಜಿಲ್ಲೆ): ಇಲ್ಲಿಯ ವಾಗ್ದೇವಿ ಪ್ರಾಥಮಿಕ ಮತ್ತು ಪ್ರೌಢಶಾಲೆ (ಅನುದಾನ ರಹಿತ)ಯಲ್ಲಿ ಮಹಾತ್ಮ ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳ ಬದಲು ಭಾರತ ಮಾತೆಯ ಭಾವಚಿತ್ರ ಇಟ್ಟು ಗಣರಾಜ್ಯೋತ್ಸವ ಆಚರಿಸಲಾಗಿದೆ.

ಈ ಕುರಿತು ಪ್ರಗತಿಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ್ದು, ಶಾಲೆಯವರ ವಿರುದ್ಧ ದೇವದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶಾಲೆಯ ಮುಖ್ಯೋಪಾಧ್ಯಾಯರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು ಎಂದು ಡಿಡಿಪಿಐ ಅವರಿಗೆ ಪತ್ರ ಬರೆಯಲಾಗುವುದು. ಸರ್ಕಾರದ ಆದೇಶದ ಜತೆಗೆ ನಾನೂ ಸಹ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಭಾವಚಿತ್ರ ಇಡುವುದು ಕಡ್ಡಾಯ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದೇನೆ. ಅದನ್ನು ಗಾಳಿಗೆ ತೂರಿ ರಾಷ್ಟ್ರ ನಾಯಕರುಗಳಿಗೆ ಅಪಮಾನ ಮಾಡಿರುವುದು ಸಾಬೀತಾಗಿದೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಇಂದಿರಾ ತಿಳಿಸಿದ್ದಾರೆ.

ರಾಯಚೂರು ಜಿಲ್ಲಾ ಕೋರ್ಟ್ ಸಂಕೀರಣದಲ್ಲ ಪ್ರಧಾನ, ಸೆಷನ್ಸ್ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರು ಗಣರಾಜ್ಯೋತ್ಸವ ನಿಮಿತ್ತ ಧ್ವಜಾರೋಹಣ ನೆರವೇರಿಸುವ ಪೂರ್ವ ಮಹಾತ್ಮ ಗಾಂಧೀಜಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು

ಅಂಬೇಡ್ಕರ್ ಭಾವಚಿತ್ರ ಎತ್ತಿಟ್ಟು ಧ್ವಜಾರೋಹಣ

ರಾಯಚೂರು: ಇಲ್ಲಿನ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಸ್ತಂಭದ ಬಳಿ ಇರಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನು ಅಲ್ಲಿಂದ ತೆಗೆಸಿ, ಧ್ವಜಾರೋಹಣ ನೆರವೇರಿಸಿದ ವಿಡಿಯೊ ವೈರಲ್ ಆಗಿದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರು ಧ್ವಜಾರೋಹಣ ನೆರವೇರಿಸಿದರು. ಅಂಬೇಡ್ಕರ್ ಅವರ ಭಾವಚಿತ್ರವನ್ನು ಅಲ್ಲಿಂದ ತೆಗೆಸಿದ್ದಕ್ಕೆ ಕೆಲ ವಕೀಲರು ಆಕ್ರೋಶ ವ್ಯಕ್ತಪಡಿಸಿರುವುದು ಹಾಗೂ ಈ ಸಂಬಂಧ ಕೆಲಕಾಲ ಸ್ಥಳದಲ್ಲಿ ವಾಗ್ವಾದ ನಡೆದಿರುವುದು ವಿಡಿಯೊದಲ್ಲಿದೆ. ಈ ಬಗ್ಗೆ ಯಾರೂ ಬಹಿರಂಗ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ.

ಈ ಘಟನೆಯನ್ನು ಹಲವಾರು ಮಂದಿ ಸಾಮಾಜಿಕ ಜಾಲತಾಣಗಳಲ್ಲಿ ಟೀಕಿಸಿದ್ದಾರೆ.

ಕ್ರಿಯಾ ಯೋಜನೆ ತಯಾರಿ ಕಾರ್ಯಕ್ಕೆ ಚಾಲನೆ

ದಾಬಸ್ ಪೇಟೆ: ಕೇಂದ್ರ ಭೂ ಸಂಪನ್ಮೂಲ ಇಲಾಖೆ ಸಹಯೋಗದಲ್ಲಿ 'ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ'ಯ (ಜಲಾನಯನ ಯೋಜನೆ 2.0) ಅಡಿಯಲ್ಲಿ ಕ್ರಿಯಾ ಯೋಜನೆ ತಯಾರಿಸುವ ತಯಾರಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

ಯೋಜನೆಗೆ ನೆಲಮಂಗಲ ತಾಲೂಕಿನ ಮಣ್ಣೆ, ಮರಳಕುಂಟೆ ಮತ್ತು ಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಜ.20 ರಿಂದ 31ರವರೆಗೆ, ಈ ಭಾಗದ ರೈತರ ಸಹಭಾಗಿತ್ವದಲ್ಲಿ ಕ್ರಿಯಾಯೋಜನೆ ಮತ್ತು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲಾಗುತ್ತದೆ.

ಮಣ್ಣೆ ಪಂಚಾಯಿತಿಗೆ ಬರುವ ಹಳ್ಳಿಗಳಾದ ಮಣ್ಣೆ, ಅಪ್ಪಗೊಂಡನಹಳ್ಳಿ. ಮರಳಕುಂಟೆ ಪಂಚಾಯಿತಿಯ ಬೆಣಚನಹಳ್ಳಿ, ಮರಳಕುಂಟೆ, ಕುಂಟ ಬೊಮ್ಮನಹಳ್ಳಿ, ದಾಸೇನಹಳ್ಳಿ, ಹುಲ್ಲರಿವೆ, ಚಿಕ್ಕಣ್ಣನಹಳ್ಳಿ, ಮದಗ, ಬರಗೂರು, ಗಿರಿಯಪ್ಪನಹಳ್ಳಿ, ಚಿಕ್ಕನಹಳ್ಳಿ ಹಾಗೂ ಕೊಡಿಗೆಹಳ್ಳಿ ಪಂಚಾಯಿತಿ ವ್ಯಾಪ್ತಿಯ ಕರಿಮಾರನಹಳ್ಳಿ, ಗೊರಘಟ್ಟ, ಸೋಮಸಾಗರ, ಕೆ.ವೆಂಕಟಪುರ, ಜಕ್ಕಸಂದ್ರ, ಜೆ.ಜೆ. ಕೃಷ್ಣರಾಜಪುರ, ಓಬಳಾಪುರ, ಹಾದಿಹೊಸಹಳ್ಳಿ ಮಣ್ಣಿನ ಹಳ್ಳಿ, ಸಿರಿಗೋನಹಳ್ಳಿ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ರೈತರ ಪ್ರತಿ ಸರ್ವೆ ನಂಬರ್‌ನಲ್ಲಿ ಮಣ್ಣಿನ ಬದು ನಿರ್ಮಾಣಕ್ಕೆ, ತೋಟಗಾರಿಕೆ ಸಸ್ಯಗಳು ಹಾಗೂ ಅರಣ್ಯ ಸಸಿ ಬೆಳೆಸಲು ಮತ್ತು ಮೇವು ಅಭಿವೃದ್ಧಿಗೆ, ಚೆಕ್ ಡ್ಯಾಂ, ನಾಲಾ ಬದು ಸಸ್ಯ ತಡೆ, ಕಲ್ಲಿನಕೋಟೆ ನಿರ್ಮಾಣಕ್ಕೆ ಅವಕಾಶಗಳಿವೆ. ಪ್ರತಿಯೊಬ್ಬ ರೈತರು ಕ್ರಿಯಾಯೋಜನೆಯಲ್ಲಿ ಸರ್ವೆ ಮಾಡಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಕೃಷಿ ಇಲಾಖೆ ಉಪನಿರ್ದೇಶಕರಾದ ವಿನುತಾ ಎಂ.ಸಿ ತಿಳಿಸಿದ್ದಾರೆ.

ಯೋಜನೆಯು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕೇವಲ ನೆಲಮಂಗಲ ತಾಲ್ಲೂಕಿನಲ್ಲಿ ಮಾತ್ರ ಅನುಮೋದನೆಯಾಗಿದೆ ಎಂದರು.

ಜನವರಿ ಅಂತ್ಯದೊಳಗೆ ಡಿಪಿಆರ್ ತಯಾರಿಸಬೇಕು. ಯೋಜನೆಯನ್ನು ಮಾರ್ಗಸೂಚಿಗಳ ಪ್ರಕಾರ ತಯಾರಿಸಬೇಕು. ತಡ ಮಾಡದೆಯೇ ಜಿಲ್ಲಾಡಳಿತಕ್ಕೆ ಸಲ್ಲಿಸಿ ಅನುಮೋದನೆ ಪಡೆಯಬೇಕು ಎಂದು ಶಾಸಕ ಕೆ.ಶ್ರೀನಿವಾಸಮೂರ್ತಿ ಸೂಚಿಸಿದರು.

ಗೊರಘಟ್ಟ ಗ್ರಾಮದಲ್ಲಿ ಅಂಜನಮೂರ್ತಿ ಮತ್ತು ಮರಳಕುಂಟೆ ಗ್ರಾಮದ ಅಶ್ವಥ್ ರಾಜು, ನಾಗಭೂಷಣ್ ಅವರ ಜಮೀನಿನಲ್ಲಿ ಕ್ರಿಯಾಯೋಜನೆಗೆ ನೆಲಮಂಗಲ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ರಾಘವೇಂದ್ರ.ಪಿ ಚಾಲನೆ ನೀಡಿದರು.

ಕೋವಿಡ್‌ನಿಂದಾಗಿ ನಡೆಯದ ಸಾಂಸ್ಕೃತಿಕ ಕಾರ್ಯಕ್ರಮ

ನಗರದ ವಿವಿಧೆಡೆ ಗಣರಾಜ್ಯೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ಆತಂಕದ ನಡುವೆಯೂ 73ನೇ ಗಣರಾಜ್ಯೋತ್ಸವವನ್ನು ನಗರದಲ್ಲಿ ಸಡಗರದಿಂದ ಆಚರಿಸಲಾಯಿತು.

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಬಿಬಿಎಂಪಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ಮತ್ತು ಪಥ ಸಂಚಲನಕ್ಕೆ ಸೀಮಿತವಾಯಿತು. ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸ್ತಬ್ಧ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ಇರಲಿಲ್ಲ.

ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ, ಲಾಲ್ ಬಾಗ್ ನಡಿಗೆದಾರರ ಒಕ್ಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಕೆಎಸ್‌ಆರ್‌ಟಿಸಿ ಸೇರಿ ಹಲವೆಡೆ ಗಣರಾಜ್ಯೋತ್ಸವ ಆಚರಿಸಲಾಯಿತು.

ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದಿಂದ ಕಬನ್ ಪಾರ್ಕ್‌ನಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ 2022ನೇ ಸಾಲಿನ ಸಂಘದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅರ್ಷದ್, ಸಂಘದ ಅಧ್ಯಕ್ಷ ಎಸ್. ಉಮೇಶ್, ನಟಿ ಸೋನಿಕಾ ಗೌಡ, ಐಎಎಸ್ ಅಧಿಕಾರಿ ರಾಜೇಂದರ್‌ಕುಮಾರ್ ಕಟಾರಿಯಾ ಇದ್ದರು.

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರು ಧ್ವಜಾರೋಹಣ ನೆರವೇರಿಸಿದರು.

ಅಪಘಾತ ರಹಿತ ಚಾಲನೆ ಮಾಡಿದ ಕೆಎಸ್‌ಆರ್‌ಟಿಸಿ ಚಾಲಕರನ್ನು ಗಣರಾಜ್ಯೋತ್ಸವದ ಅಂಗವಾಗಿ ಸನ್ಮಾನಿಸಲಾಯಿತು. ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ.ಕಳಸದ ಹಾಗೂ ಅಧಿಕಾರಿಗಳು ಹಾಜರಿದ್ದರು

ಬೆಂ.ವಿ.ವಿಯಲ್ಲಿ ಗಣರಾಜ್ಯೋತ್ಸವ

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಧ್ವಜಾರೋಹಣ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಡಾ. ಬಿ.ಆರ್. ಅಂಬೇಡ್ಕರ್, ಮಹಾತ್ಮಾ ಗಾಂಧೀಜಿ, ಜವಹರಲಾಲ್ ನೆಹರು ಸೇರಿ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಂವಿಧಾನ ರಚನೆ ಸಮಿತಿ ಸದಸ್ಯರ ಕೊಡುಗೆ ಅಪಾರ' ಎಂದು ಬಣ್ಣಿಸಿದರು.

ಗಣರಾಜ್ಯೋತ್ಸವ ವೈಮಾನಿಕ ಪ್ರದರ್ಶನದಲ್ಲಿ 'ರೇವಾ' ವಿದ್ಯಾರ್ಥಿ

ಬೆಂಗಳೂರು: ದೆಹಲಿಯಲ್ಲಿ ಬುಧವಾರ (ಜ.26) ನಡೆದ ಗಣರಾಜ್ಯೋತ್ಸವ ವಿಶೇಷ ವೈಮಾನಿಕ ಪ್ರದರ್ಶನದಲ್ಲಿ ರೇವಾ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ ಕೆ.ನಿತೀಶ್ ಕುಮಾರ್ ಭಾಗವಹಿಸಿದ್ದರು.

ನಿತೀಶ್ ಕುಮಾರ

ಈ ಪ್ರದರ್ಶನದಲ್ಲಿ ಭಾರತೀಯ ವಾಯುಸೇನೆಯ ಯುದ್ಧ ವಿಮಾನಗಳು '75' ಸಂಖ್ಯೆಯನ್ನು ಆಕಾಶದಲ್ಲಿ ಮೂಡಿಸಿದ್ದವು. ಇದೇ ತಂಡದಲ್ಲಿ ನಿತೀಶ್ ಕುಮಾರ್ ಸಹ ವಿಮಾನವೊಂದರ ಪೈಲಟ್ ಆಗಿದ್ದರು. ನಿತೀಶ್ 2016ರಲ್ಲಿ ರೇವಾ ಸಂಸ್ಥೆಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಮುಗಿಸಿದ್ದರು. ರೇವಾ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಾದ ಸ್ಕ್ವಾಡ್ರನ್ ಲೀಡರ್ ನೇಹಾ ಯಾದವ್, ಕುಟ್ಟಪ್ಪ ಅವರೂ ಕಳೆದ ವರ್ಷದ ಗಣರಾಜ್ಯೋತ್ಸವ ವೈಮಾನಿಕ ಪ್ರದರ್ಶನದಲ್ಲಿ ಭಾಗವಹಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

ರೇವಾ ವಿಶ್ವವಿದ್ಯಾಲಯದ ಕುಲಪತಿ ಪಿ.ಶ್ಯಾಮರಾಜು,'ನಮ್ಮ ಸಂಸ್ಥೆಗೆ ಇದು ಅತ್ಯಂತ ಹೆಮ್ಮೆಯ ಕ್ಷಣ. ಹಳೆಯ ವಿದ್ಯಾರ್ಥಿಗಳು ಈಗಿನ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾರೆ' ಎಂದು ತಿಳಿಸಿದ್ದಾರೆ.

'ಮೂಲ ಸಂವಿಧಾನ ಜಾರಿಗೆ ತನ್ನಿ'

ಕೆ.ಆರ್.ಪುರ: ಡಾ. ಬಿ.ಆರ್. ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದಲ್ಲಿ ಯಾವುದೇ ತಿದ್ದುಪಡಿ ಮಾಡದೆ ಮೂಲ ಸಂವಿಧಾನವನ್ನು ಜಾರಿಗೆ ತರಬೇಕು ಎಂದು ಕರ್ನಾಟಕ ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಬಿ.ಚನ್ನಕೃಷ್ಣಪ್ಪ ಒತ್ತಾಯಿಸಿದರು.

ಟೀನ್ ಫ್ಯಾಕ್ಟರಿ ಬಳಿಯ ಕರ್ನಾಟಕ ಸಮತ ಸೈನಿಕ ದಳದ ಕಚೇರಿಯಲ್ಲಿ ಆಯೋಜಿಸಿದ್ದ 'ಸಂವಿಧಾನ ಜಾರಿಗೆ ಬಂದ ದಿನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂವಿಧಾನ ರಚನೆ ಮಾಡಿ 73 ವರ್ಷಗಳು ಕಳೆದಿವೆ. ಸರ್ಕಾರಗಳು ಸಂವಿಧಾನವನ್ನ ತಮಗೆ ಇಷ್ಟ ಬಂದಂತೆ ತಿದ್ದುಪಡಿ ಮಾಡಿಕೊಂಡು ಆಡಳಿತವನ್ನು ನಡೆಸುತ್ತಿವೆ. ಮೂಲ ಸಂವಿಧಾನ ಜಾರಿಗೆ ಬಂದಿದ್ದರೆ 10 ವರ್ಷಗಳಲ್ಲಿ ಭಾರತವು ಅಮೆರಿಕದಂತೆ ಅಭಿವೃದ್ಧಿ ಯಾಗುತ್ತಿತ್ತು ಎಂದು ಹೇಳಿದರು.

'ಪಿಆರ್‌ಆರ್ ಯೋಜನೆಗೆ ಶೀಘ್ರ ಅನುಮೋದನೆ'

ಬೆಂಗಳೂರು: 'ನಗರದ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ (ಪಿಆರ್‌ಆರ್) ಸರ್ಕಾರ ಶೀಘ್ರವೇ ಅನುಮೋದನೆ ನೀಡಲಿದೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ' ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ತಿಳಿಸಿದರು.

ಗಣರಾಜ್ಯೋತ್ಸವದ ಅಂಗವಾಗಿ ಬಿಡಿಎ ಕೇಂದ್ರ ಕಚೇರಿ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಬುಧವಾರ ಮಾತನಾಡಿದರು.

'ಕೆಲವು ಕೆಟ್ಟ ಸಿಬ್ಬಂದಿಯ ಕೆಲಸಗಳಿಂದಾಗಿ ಬಿಡಿಎಗೆ ಕೆಟ್ಟ ಹೆಸರು ಬರುವಂತಾಗಿದೆ. ಇದರ ಹೊರತಾಗಿಯೂ ಪ್ರಾಧಿಕಾರವು ಉತ್ತಮ ರೀತಿಯಲ್ಲಿ ಜನಪರವಾದ ಕೆಲಸಗಳನ್ನು ಮಾಡಿಕೊಂಡು ಬರುತ್ತಿದೆ. ಜನರಿಗೆ ಮತ್ತಷ್ಟು ಹತ್ತಿರವಾಗುವಂತಹ ಕೆಲಸಗಳನ್ನು ಮಾಡಬೇಕೆಂದು ಮುಖ್ಯಮಂತ್ರಿಯವರು ಸೂಚಿಸಿದ್ದಾರೆ' ಎಂದರು.

ಬಿಡಿಎ ಆಯುಕ್ತ ಎಂ.ಬಿ.ರಾಜೇಶ್ ಗೌಡ, ಕಾರ್ಯದರ್ಶಿ ಆನಂದ್ ಮತ್ತು ಸಿಬ್ಬಂದಿ ಭಾಗವಹಿಸಿದರು.

ಮಾರಿಕಾಂಬೆ ಜಾತ್ರೆ ಪ್ರಕ್ರಿಯೆಗೆ ಚಾಲನೆ

ಶಿರಸಿ: ದಕ್ಷಿಣ ಭಾರತದ ಪ್ರಸಿದ್ಧ ಜಾತ್ರೆಗಳಲ್ಲಿ ಒಂದೆನಿಸಿರುವ ಇಲ್ಲಿನ ಮಾರಿಕಾಂಬಾ ದೇವಿ ಜಾತ್ರೆಯ ಪೂರ್ವ ಸಿದ್ಧತಾ ಧಾರ್ಮಿಕ ಕಾರ್ಯಕ್ರಮಗಳಿಗೆ ಬುಧವಾರ ಚಾಲನೆ ನೀಡಲಾಯಿತು.

'ಅಂಗವಿಕಲರ ಹೆಸರಲ್ಲಿ ಎನ್‌ಜಿಒಗಳಿಂದ ಲೂಟಿ'

ಬೆಂಗಳೂರು: 'ಅಂಗವಿಕಲ ಮಕ್ಕಳ ಶಿಶು ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ವಿಶೇಷ ಶಾಲೆಗಳನ್ನು ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ) ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಸುಳ್ಳು ವಿವರ ಸಲ್ಲಿಸಿ, ಹಣ ಲೂಟಿ ಮಾಡುತ್ತಿವೆ' ಎಂದು 'ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ' ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ಆರೋಪಿಸಿದ್ದಾರೆ.

'ವಿಶೇಷ ಶಾಲೆಗಳಲ್ಲಿರುವ ಮಕ್ಕಳ ಸಂಖ್ಯೆ ಕಡಿಮೆಯಿದ್ದರೂ, ಇಲಾಖೆಗೆ ಹೆಚ್ಚಿನ ಸಂಖ್ಯೆಯನ್ನು ತೋರಿಸಲಾಗುತ್ತಿದೆ. ಇಲಾಖೆಯ ಉಪನಿರ್ದೇಶಕರು ಹಾಗೂ ಅಂಗವಿಕಲ ಕಲ್ಯಾಣಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡದೆ, ಮಕ್ಕಳ ಮತ್ತು ಸಿಬ್ಬಂದಿ ಸಂಖ್ಯೆ, ಕಲಿಕಾ ಪ್ರಗತಿಗಳನ್ನು ಪರಿಶೀಲಿಸದೆ ವರದಿಗೆ ಸಹಿ ಹಾಕಿ, ಹಣ ಬಿಡುಗಡೆಗೆ ಶಿಫಾರಸು ಮಾಡುತ್ತಿದ್ದಾರೆ' ಎಂದು ಅವರು ದೂರಿದ್ದಾರೆ.

'ತ್ರೈಮಾಸಿಕ ಕಂತುಗಳನ್ನು ಬಿಡುಗಡೆಯಾಗುವ ಹಣದಲ್ಲಿ ಶೇ 20ರಷ್ಟು ಪಾಲನ್ನು ಇಲಾಖೆ ಅಧಿಕಾರಿಗಳು ಹಾಗೂ ಬಿಲ್ ಮಾಡುವ ಕಂಪ್ಯೂಟರ್ ಆಪರೇಟರ್‌ಗಳಿಗೆ ಎನ್‌ಜಿಒಗಳು ನೀಡುತ್ತಿವೆ. ಕೋವಿಡ್ ಕಾರಣದಿಂದ ಈ ಶಾಲೆಗಳನ್ನು ಸದ್ಯ ಮುಚ್ಚಲಾಗಿದೆ. ಮಾರ್ಚ್ ತಿಂಗಳ ಕೊನೆಯಲ್ಲಿ ಬಿಡುಗಡೆಯಾಬೇಕಿದ್ದ ಅನುದಾನಕ್ಕೆ ಈಗಲೇ ಶಿಫಾರಸು ಮಾಡಿ ಹಣ ಪಡೆದುಕೊಂಡಿವೆ. ಯೋಜನೆಗೆ ಅರ್ಜಿ ಸಲ್ಲಿಸಿರುವ ಎನ್‌ಜಿಒಗಳ ಪೈಕಿ ಕೆಲವೇ ಸಂಸ್ಥೆಗಳಿಗೆ ಮುಂಚಿತವಾಗಿ ಹಣ ಬಿಡುಗಡೆಯಾಗಿದೆ. ಈ ಅಕ್ರಮದಲ್ಲಿ ಇಲಾಖೆ ಅಧಿಕಾರಿಗಳು ಶಾಮೀಲಾಗಿದ್ದಾರೆ' ಎಂದಿದ್ದಾರೆ.

'ವಿಶೇಷ ಶಾಲೆಗಳಿಗೆ ದಾನಿಗಳು ನೀಡಿದ ಹಣ ಮತ್ತು ವಸ್ತುಗಳಿಗೆ ಸಂಬಂಧಿಸಿದ ಲೆಕ್ಕ ಇರುವುದಿಲ್ಲ. ಇಲ್ಲಿ ಕಾರ್ಯನಿರ್ವಹಿಸುವ ಬೋಧಕ, ಬೋಧಕೇತರ ಸಿಬ್ಬಂದಿಗೆ ನಿಗದಿಗಿಂತ ಕಡಿಮೆ ಸಂಬಳ ನೀಡಲಾಗುತ್ತಿದೆ. ಅಂಗವಿಕಲರ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಕೊನೆಯೇ ಇಲ್ಲ' ಎಂದಿದ್ದಾರೆ.

ಬಿಬಿಎಂಪಿ: ಇನ್ನಷ್ಟು ಪರಿಣಾಮಕಾರಿ ಕ್ರಮಕ್ಕೆ ಸೂಚನೆ

₹ 200 ಕೋಟಿ ಹೆಚ್ಚು ತೆರಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 2020–21ನೇ ಸಾಲಿಗಿಂತ ಈ ವರ್ಷ (2021–22) ಇದುವರೆಗೆ ₹ 201.92 ಕೋಟಿಗಳಷ್ಟು ಹೆಚ್ಚು ಆಸ್ತಿ ತೆರಿಗೆ ಸಂಗ್ರಹಿಸಿದೆ.

ಕಳೆದ ವರ್ಷ ಈ ವೇಳೆಗೆ (ಜ.25ರವರೆಗೆ) ₹ 2,465.85 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿತ್ತು. ಈ ಸಾಲಿನಲ್ಲಿ ಇದುವರೆಗೆ ₹ 2,667.77 ಕೋಟಿ ತೆರಿಗೆ ಸಂಗ್ರಹವಾಗಿದೆ.

'ಬಿಎಂಪಿಯು ಆಸ್ತಿ ತೆರಿಗೆ ಸಂಗ್ರಹ ಗುರಿಯನ್ನು ಸಮರ್ಥವಾಗಿ ಸಾಧಿಸಬೇಕು. ಅದಕ್ಕಾಗಿ, ಎಲ್ಲ ವಲಯಗಳಲ್ಲೂ ಕಂದಾಯ ಅಧಿಕಾರಿಗಳು ಸುಧಾರಿತ ತಂತ್ರಜ್ಞಾನದ ಸಹಾಯ ಪಡೆದುಕೊಂಡು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹಣೆಯ ಪ್ರಗತಿ ಪರಿಶೀಲನೆ ಸಲುವಾಗಿ ಬುಧವಾರ ವರ್ಚುವಲ್ ರೂಪದಲ್ಲಿ ನಡೆದ ಸಭೆಯಲ್ಲಿ ಅವರು ತೆರಿಗೆ ವಸೂಲಾತಿ ಚುರುಕುಗೊಳಿಸುವ ಕುರಿತು ಸಲಹೆ ಸೂಚನೆ ನೀಡಿದರು.

'ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ನೋಟಿಸ್ ನೀಡಿ, ವಸೂಲಿಗೆ ಕ್ರಮ ವಹಿಸಬೇಕು. ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದ ಆಸ್ತಿಗಳನ್ನು ಪತ್ತೆ ಮಾಡಿ, ಅವುಗಳನ್ನೂ ತೆರಿಗೆ ವ್ಯಾಪ್ತಿಗೆ ತರಬೇಕು' ಎಂದು ನಿರ್ದೇಶನ ನೀಡಿದರು.

ಪಾಲಿಕೆಗೆ ಹೆಚ್ಚು ಮೊತ್ತ ಬಾಕಿ ಉಳಿಸಿಕೊಂಡಿರುವವರ ಪಟ್ಟಿ ಸಿದ್ಧಪಡಿಸಿ, ಅದರ ಅನುಸಾರ ವಸೂಲಾತಿಗೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಬಿಬಿಎಂಪಿಯು ₹ 4,000 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದೆ. ಇದುವರೆಗೆ ₹ 2,667.77 ಕೋಟಿ ತೆರಿಗೆ ಸಂಗ್ರಹವಾಗಿದೆ.

ಸಭೆಯಲ್ಲಿ ವಿಶೇಷ ಆಯುಕ್ತ (ಕಂದಾಯ) ಡಾ. ದೀಪಕ್ ಆರ್.ಎಲ್, ಕಂದಾಯ ವಿಭಾಗದ ಜಂಟಿ ಆಯುಕ್ತರು ಹಾಗೂ ಎಲ್ಲಾ ವಲಯಗಳ ವಲಯ ಆಯುಕ್ತರು, ಜಂಟಿ ಆಯುಕ್ತರು, ಕಂದಾಯ ಉಪ ಆಯುಕ್ತರು, ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು ಭಾಗವಹಿಸಿದರು.

ವಲಯವಾರು ಆಸ್ತಿ ತೆರಿಗೆ ಸಂಗ್ರಹದ ವಿವರ (₹ ಕೋಟಿಗಳಲ್ಲಿ)

(ಕಳೆದ ವರ್ಷ ಹಾಗೂ ಈ ವರ್ಷದ ಮಾಹಿತಿ)

ವಲಯ	2021ರ ಜ.25ರ ವರೆಗೆ	2022ರ ಜ.25ರ ವರೆಗೆ
ಯಲಹಂಕ	205.77	265.98
ಮಹದೇವಪುರ	688.41	683.07
ದಾಸರಹಳ್ಳಿ	67.45	73.78
ಆರ್.ಆರ್. ನಗರ	161.64	182.00
ಬೊಮ್ಮನಹಳ್ಳಿ	249.61	285.04
ಪಶ್ಚಿಮ	256.33	272.11
ದಕ್ಷಿಣ	369.57	398.54
ಪೂರ್ವ	467.06	507.26

ಹಾಪ್‌ಕಾಮ್ಸ್: ₹25 ಕೋಟಿ ನೆರವಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ನಷ್ಟಕ್ಕೆ ಸಿಲುಕಿರುವ ಹಾಪ್‌ಕಾಮ್ಸ್‌ಗೆ ಸರ್ಕಾರ ಈ ಬಜೆಟ್‌ನಲ್ಲಿ ₹25 ಕೋಟಿ ಆರ್ಥಿಕ ನೆರವು ಘೋಷಿಸಬೇಕು' ಎಂದು ಬೆಂಗಳೂರು ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ದೇವರಾಜ್ ಮನವಿ ಮಾಡಿದರು.

ಹಾಪ್‌ಕಾಮ್ಸ್ ವತಿಯಿಂದ ಗಣರಾಜ್ಯೋತ್ಸವ ದಿನದ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಸಂಸ್ಥೆಯ ಮಾರಾಟಗಾರರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೋವಿಡ್ ಜೊತೆಗೆ ಇತ್ತೀಚಿನ ದಿನಗಳಲ್ಲಿ ಖಾಸಗಿ ಸಂಸ್ಥೆಗಳ ಪೈಪೋಟಿ, ಹಣ್ಣು–ತರಕಾರಿ ಸರಬರಾಜು ಕುಂಠಿತ ಸೇರಿದಂತೆ ಹಲವು ಕಾರಣದಿಂದ ಹಾಪ್‌ಕಾಮ್ಸ್ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ' ಎಂದರು.

'ಸರ್ಕಾರ ಹಾಲಿಗೆ ನೀಡುವಂತೆ ಹಾಪ್‌ಕಾಮ್ಸ್‌ನ ತರಕಾರಿಗಳಿಗೂ ಬೆಂಬಲ ಬೆಲೆ ನೀಡಿದರೆ, ಉತ್ಪನ್ನಗಳನ್ನು ಇನ್ನೂ ಕಡಿಮೆ ದರದಲ್ಲಿ ಗ್ರಾಹಕರಿಗೆ ನೀಡಬಹುದು. ಇದರಿಂದ ಸಂಸ್ಥೆಯೂ ಅಭಿವೃದ್ಧಿ ಹೊಂದುತ್ತದೆ' ಎಂದು ಹೇಳಿದರು.

'ಹಾಪ್‌ಕಾಮ್ಸ್‌ನ ನಿವೃತ್ತ ನೌಕರರಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಪ್ರತ್ಯೇಕ ನಿಧಿ ಇಲ್ಲ. ನಿವೃತ್ತ ನೌಕರರ ಸಂಖ್ಯೆ ಹೆಚ್ಚಾಗುತ್ತಿದ್ದು, ಸದ್ಯ 120 ನಿವೃತ್ತ ನೌಕರರಿಗೆ ₹3.5 ಕೋಟಿ ಪಾವತಿಸಬೇಕಾಗಿದೆ. ಬಜೆಟ್‌ನಲ್ಲಿ ಆರ್ಥಿಕ ನೆರವು ನೀಡುವ ಮೂಲಕ ಹಾಪ್‌ಕಾಮ್ಸ್ ಅನ್ನು ಉಳಿಸಬೇಕಾಗಿದೆ' ಎಂದು ಮನವಿ ಮಾಡಿದರು.

ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್. ಮಿರ್ಜಿ,'ಸಂಸ್ಥೆಯ ವ್ಯಾಪಾರಾಭಿವೃದ್ಧಿಗೆ ಕಾರಣರಾದ 20 ಮಾರಾಟಗಾರರನ್ನು ಗುರುತಿಸಿ, ಅವರನ್ನು ಸನ್ಮಾನಿಸಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಇವರು ತಮ್ಮ ಮಳಿಗೆಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು, ವ್ಯಾಪಾರ ವೃದ್ಧಿಸಿದ್ದಾರೆ' ಎಂದರು.

ಸಂಸ್ಥೆಯ ನಿರ್ದೇಶಕರಾದ ಎ.ಎಸ್.ಚಂದ್ರೇಗೌಡ, ನಾರಾಯಣಪ್ಪ ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುವ ಮಾರಾಟಗಾರರಿಗೆ ಪ್ರಶಂಸಾ ಪತ್ರ ನೀಡಿ ಸನ್ಮಾನಿಸಲಾಯಿತು. ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ದೇವರಾಜ್ ಇದ್ದಾರೆ.

ಸ್ಪರ್ಧಾ ವಾಣಿ

ಸಹಾಯಕ ಪ್ರಾಧ್ಯಾಪಕರ ಹುದ್ದೆ ಹಾಗೂ ಕೆಎಸ್‌ಆರ್‌ಪಿ–ಐಆರ್‌ಬಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ

ಸಾಮಾನ್ಯ ಜ್ಞಾನ

ಭಾಗ 6

ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್-ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹುದ್ದೆಗಳು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು ಶೀಘ್ರದಲ್ಲೇ ನಡೆಯಲಿವೆ. ಎರಡೂ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ದಾವೋಸ್ ಶೃಂಗ ಸಭೆಯ ಮೊದಲ ದಿನ ಆಕ್ಸ್‌ಫಾಮ್ (Oxfam Report) ಬಿಡುಗಡೆ ಮಾಡಿದ್ದ 'ಅಸಮಾನತೆ ಕೊಲ್ಲುತ್ತದೆ' (Inequality Kills) ವರದಿಯಲ್ಲಿ ಉಲ್ಲೇಖಿಸಿರುವಂತೆ, ಕೋವಿಡ್ -19 ಕಾರಣದಿಂದಾಗಿ ವಿಶ್ವದಲ್ಲಿ ಎಷ್ಟು ಮಂದಿ ಬಡತನಕ್ಕೆ ಒಳಗಾಗಿದ್ದಾರೆ?

ಎ) 16 ಕೋಟಿ ಬಿ) 25 ಕೋಟಿ ಸಿ) 45 ಕೋಟಿ ಡಿ) 5 ಕೋಟಿ

ಉತ್ತರ: ಎ

2) ಹಲ್ಮಿಡಿ ಶಾಸನಕ್ಕಿಂತ ಪುರಾತನವಾದ ಕನ್ನಡದ ತಾಮ್ರ ಪತ್ರವೊಂದು ಸಿಕ್ಕಿದೆ. ಹಾಗಾದರೆ ಅದು ಎಲ್ಲಿ ಸಿಕ್ಕಿದೆ?

ಎ) ಕೋಲಾರದ ಮುಡಿಯನೂರು
ಬಿ) ಮಂಡ್ಯದ ಮದ್ದೂರು
ಸಿ) ಶಿವಮೊಗ್ಗದ ಶಿಕಾರಿಪುರ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

3) ಭಾರತದ ಅರಣ್ಯ ಪ್ರದೇಶದ ಕುರಿತು ಇತ್ತೀಚೆಗೆ ಪ್ರಕಟವಾಗಿರುವ 'ಇಂಡಿಯಾ ಫಾರೆಸ್ಟ್ ರಿಪೋರ್ಟ್-2021' ಪ್ರಕಾರ, 2019ಕ್ಕೆ ಹೋಲಿಸಿದರೆ, ಕರ್ನಾಟಕದಲ್ಲಿ ಬೆಳಗಾವಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಗರಿಷ್ಠ ಪ್ರಮಾಣದ ಅರಣ್ಯ ಪ್ರದೇಶ ವೃದ್ಧಿಯಾಗಿದೆ. ಹಾಗಾದರೆ, ಅಷ್ಟೇ ಗರಿಷ್ಠ ಪ್ರಮಾಣದಲ್ಲಿ ಅರಣ್ಯ ಪ್ರದೇಶ ಕುಗ್ಗಿರುವ ಜಿಲ್ಲೆ ಎಂದರೆ...................................

ಎ) ಉಡುಪಿ ಬಿ) ಬೀದರ್
ಸಿ) ಶಿವಮೊಗ್ಗ ಡಿ) ದಾವಣಗೆರೆ

ಉತ್ತರ: ಎ

4) ಏಷ್ಯಾದ ಮೊದಲ ಮೆಕ್ಕೆಜೋಳ ತಳಿ ಅಭಿವೃದ್ಧಿ ಕೇಂದ್ರ ಎಲ್ಲಿ ಆರಂಭವಾಗಲಿದೆ?

ಎ) ಕುಣಿಗಲ್ ಬಿ) ಚನ್ನಗಿರಿ
ಸಿ) ಕಲಘಟಗಿ ಡಿ) ರಾಮನಗರ

ಉತ್ತರ: ಎ

5) 'ಸೆಕೆಂಡರಿ ಅಗ್ರಿಕಲ್ಚರ್' ನಿರ್ದೇಶನಾಲಯ ಎಲ್ಲಿ ಸ್ಥಾಪನೆಯಾಗಲಿದೆ?

ಎ) ಕರ್ನಾಟಕ ಬಿ) ದೆಹಲಿ
ಸಿ) ಬಿಹಾರ್ ಡಿ) ಗೋವಾ

ಉತ್ತರ: ಎ

6) ಇಂಡೋನೇಷ್ಯಾ ತನ್ನ ರಾಜಧಾನಿ ಜಕಾರ್ತಾದ ಬದಲು ನುಸಂತಾರಕ್ಕೆ ಬದಲಾಯಿಸಲು ಹೊರಟಿದೆ. ಇದಕ್ಕೆ ಕಾರಣವೇನು?

ಎ) ಜಾಗತಿಕ ತಾಪಮಾನದ ಕಾರಣ 2050ರ ಹೊತ್ತಿಗೆ ಸಮುದ್ರದ ನೀರು ಉಕ್ಕಿ ಜಕಾರ್ತಾದ ಬಹುಭಾಗ ನೀರಿನಲ್ಲಿ ಮುಳುಗಲಿದೆ.
ಬಿ) ಟೊಂಗಾದಲ್ಲಿ ಆದ ಸುನಾಮಿ ಪರಿಣಾಮ ಜಕಾರ್ತಾದ ಮೇಲೂ ಆಗಿದ್ದು, ಭವಿಷ್ಯದಲ್ಲಾಗುವ ಅನಾಹುತ ತಪ್ಪಿಸಲು ಈ ನಿರ್ಣಯ ತೆಗೆದುಕೊಳ್ಳಲಾಗಿದೆ.
ಸಿ) ಇಂಡೋನೇಷ್ಯಾ ತನ್ನ ರಾಜಧಾನಿ ಜಕಾರ್ತಾವು ಶತ್ರು ರಾಷ್ಟ್ರಗಳ ದಾಳಿಗೆ ಒಳಗಾಗುವ ಸಾಧ್ಯತೆ ಹೆಚ್ಚಿದ್ದು ನೈಸರ್ಗಿಕವಾಗಿ ನುಸಂತಾರ ಹೆಚ್ಚು ಸುರಕ್ಷಿತವಾಗಿದೆ.
ಡಿ) ಮೇಲಿನ ಯಾವುದೂ ಕಾರಣವಲ್ಲ.

ಉತ್ತರ: ಎ

7) ಹೆನ್ಲಿ ಪಾಸ್‌ಪೋರ್ಟ್ ಸೂಚ್ಯಂಕದ ಪ್ರಕಾರ ಕಳೆದ ವರ್ಷ 58 ದೇಶಗಳಿಗೆ ಭಾರತೀಯ ಪ್ರಜೆಗಳು ವೀಸಾ ಇಲ್ಲದೇ ಪ್ರಯಾಣ ಮಾಡಲು ಸಾಧ್ಯವಿತ್ತು. ಈಗ ಅದು 60 ರಾಷ್ಟ್ರಗಳಿಗೆ ವಿಸ್ತರಣೆಯಾಗಿದೆ. ಹಾಗಾದರೆ ಇತ್ತೀಚೆಗೆ ವಿಸಾ ಇಲ್ಲದೇ ಪ್ರಯಾಣ ಮಾಡಲು ಅವಕಾಶ ಮಾಡಿಕೊಟ್ಟ ದೇಶಗಳನ್ನು ತಿಳಿಸಿ.

ಎ) ಒಮನ್ ಮತ್ತು ಅರ್ಮೇನಿಯಾ
ಬಿ) ಜಪಾನ್ ಮತ್ತು ಜರ್ಮನಿ
ಸಿ) ಚೀನಾ ಮತ್ತು ಪಾಕಿಸ್ತಾನ
ಡಿ) ಫಿಜಿ ಮತ್ತು ಟೊಂಗಾ

ಉತ್ತರ: ಎ

8) ಈ ಕೆಳಗೆ ನೀಡಿರುವ ಹೆಸರುಗಳಲ್ಲಿ ಯಾರು ಇಂಗಾಲದ ಡೈ ಆಕ್ಸೈಡ್‌ನಿಂದ ಟೈಲ್ಸ್ ತಯಾರಿಸಿ ಸಾಧನೆ ಮಾಡಿದ್ದಾರೆ?

ಎ) ಸಿದ್ದಾಂತ್ ಪೂಜಾರ್ ಬಿ) ಮಂಜುಳಾ ಗುರುಸ್ವಾಮಿ
ಸಿ) ತೇಜಸ್ ಸಿದ್ನಾಳ ಡಿ) ರಾಘವೇಂದ್ರ ಆಚಾರಿ

ಉತ್ತರ: ಸಿ

9) ನಮ್ಮ ದೇಶದ ಮೊದಲ ಪ್ಯಾರಾ ಬ್ಯಾಡ್ಮಿಂಟನ್ ಅಕಾಡೆಮಿ ಎಲ್ಲಿ ಆರಂಭವಾಗಿದೆ?

ಎ) ಪಟ್ನಾ ಬಿ) ಬೆಂಗಳೂರು ಸಿ) ಲಖನೌ ಡಿ) ವಿಜಯವಾಡ

ಉತ್ತರ: ಸಿ

10) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಜನವರಿ 23ನೇ ದಿನ ನೇತಾಜಿ ಸುಭಾಷ್‌ಚಂದ್ರ ಬೋಸ್ ಜನ್ಮದಿನ.
2) ಜನವರಿ 23 ಅನ್ನು 'ಪರಾಕ್ರಮ ದಿನ'ಎಂದು ಕೇಂದ್ರ ಸರ್ಕಾರ ಆಚರಿಸುತ್ತದೆ
3) ನೇತಾಜಿ ಸುಭಾಷ್‌ಚಂದ್ರ ಬೋಸ್ ಗೌರವಾರ್ಥ ಈ ಬಾರಿಯಿಂದ ಗಣರಾಜ್ಯೋತ್ಸವ ಆಚರಣೆ ಜನವರಿ 24ರ ಬದಲು ಜನವರಿ 23 ರಿಂದ ಆರಂಭ ಮಾಡಲಾಗಿದೆ.

ಮೇಲಿನ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ.

ಎ) ಹೇಳಿಕೆ 1, 2 ಮತ್ತು 3 ಹೇಳಿಕೆಗಳು ಸರಿಯಾಗಿವೆ.
ಬಿ) ಹೇಳಿಕೆ 1 ಮತ್ತು 2 ಮಾತ್ರ ಸರಿಯಾಗಿವೆ.
ಸಿ) ಹೇಳಿಕೆ 1 ಮತ್ತು 3 ಮಾತ್ರ ಸರಿಯಾಗಿವೆ
ಡಿ) ಯಾವ ಹೇಳಿಕೆಯೂ ಸರಿಯಾಗಿಲ್ಲ

ಉತ್ತರ: ಎ

11) ಇತ್ತೀಚೆಗೆ ನಿಧನರಾದ ಪಂಡಿತ್ ಬಿರ್ಜು ಮಹಾರಾಜ್ ಯಾವ ನೃತ್ಯ ಪ್ರಕಾರದಲ್ಲಿ ಖ್ಯಾತಿ ಪಡೆದವರು?

ಎ) ಭರತ ನಾಟ್ಯ
ಬಿ) ಯಕ್ಷಗಾನ
ಸಿ) ಮೋಹಿನಿ ಅಟ್ಟಂ
ಡಿ) ಕಥಕ್

ಉತ್ತರ: ಡಿ

ನಿಮಗಿದು ಗೊತ್ತೆ?

ಸೆರೆಮನೆ

ಕಾನೂನು ಮತ್ತು ಶಿಸ್ತನ್ನು ಉಲ್ಲಂಘಿಸಿದ ವ್ಯಕ್ತಿಗಳನ್ನು ಬಂಧನದಲ್ಲಿಡುವ ಸ್ಥಳಕ್ಕೆ ಸೆರೆಮನೆ ಅಥವಾ ಜೈಲು ಎಂದು ಕರೆಯಲಾಗುವುದು. ಪ್ರಾಚೀನ ಕಾಲದಲ್ಲಿ ಹಮ್ಮುರಬಿ ಕೋಡ್, ಭಾರತದ ಮನುಧರ್ಮ ಶಾಸ್ತ್ರಗಳು ಅಪರಾಧಿಗಳು, ಶಿಕ್ಷೆಯ ಬಗ್ಗೆ ಉಲ್ಲೇಖಿಸಿದ್ದವು. ರೋಮನ್ನರು ಅಪರಾಧಿಗಳನ್ನು ಶಿಕ್ಷಿಸಲು ಜೈಲುಗಳನ್ನು ಬಳಸಿದರು.

19ನೇ ಶತಮಾನಕ್ಕಿಂತ ಮೊದಲು ವಿರೋಧಿಗಳು ಮತ್ತು ಪ್ರಭಾವಶಾಲಿ ವ್ಯಕ್ತಿಗಳ ವಿರುದ್ಧ ಪ್ರತಿಕಾರ ತೀರಿಸಿಕೊಳ್ಳಲು ಅವರನ್ನು ಸೆರೆಮನೆಗಳಲ್ಲಿ ಇಡಲಾಗುತ್ತಿತ್ತು. ಕಾನೂನು ಮತ್ತು ಶಿಸ್ತು ಉಲ್ಲಂಘಿಸಿದವರಿಗೆ ಕಾರಾಗೃಹ ಶಿಕ್ಷೆ ನೀಡುವ ಪದ್ಧತಿ 19ನೇ ಶತಮಾನದಲ್ಲಿ ಜಾರಿಗೆ ಬಂತು. ಅಂದ ಹಾಗೆ, ವಿಶ್ವದ ಮೊಟ್ಟ ಮೊದಲ ಜೈಲು 1403 ರಲ್ಲಿ ಇಂಗ್ಲೆಂಡಿನಲ್ಲಿ ಆರಂಭವಾಯಿತು. ಆಗ ಅದು ಅಲ್ಲಿನ ದೊರೆಯ ನಿಯಂತ್ರಣದಲ್ಲಿತ್ತು. ಜೈಲು ಶಿಕ್ಷೆ ವಿಧಿಸಿದ ನಂತರವೂ ಅಪರಾಧಿಗಳ ಸಂಖ್ಯೆ ಕಡಿಮೆಯಾಗಲಿಲ್ಲ ಎಂಬುದನ್ನು ಅರಿತ ನಂತರ, ಕೆಲವು ಘೋರ ಅಪರಾಧವೆಸಗಿದವರಿಗೆ ಮರಣದಂಡನೆ ವಿಧಿಸುವ ಕ್ರಮವೂ ಆರಂಭವಾಯಿತು.

1550ರ ನಂತರ ಇಂಗ್ಲೆಂಡ್ ಮತ್ತು ಯೂರೋಪ್‌ನಲ್ಲಿ ಅಪರಾಧಿಗಳನ್ನು ಬಂಧಿಸಲು ಸೆರೆಮನೆಗಳನ್ನು ನಿರ್ಮಿಸಲಾಯಿತು. ಇವುಗಳಲ್ಲಿ ಹೆಚ್ಚಿನ ಜೈಲುಗಳು ಬಹಳ ಕೊಳಕಾಗಿರುತ್ತಿದ್ದವು. ಗಾಳಿ ಬೆಳಕು ಇಲ್ಲದ, ಚಿಕ್ಕಕೋಣೆಗಳು. ಕೈದಿಗಳಿಗೆ ಉತ್ತಮ ಊಟ ಸಿಗುತ್ತಿರಲಿಲ್ಲ. ಅವರನ್ನು ಕೆಟ್ಟದಾಗಿ ನೋಡಿಕೊಳ್ಳಲಾಗುತ್ತಿತ್ತು. 18ನೇ ಶತಮಾನದ ಅಂತ್ಯದಲ್ಲಿ ಜೈಲುಗಳ ಸ್ಥಿತಿ ಉತ್ತಮಪಡಿಸುವ ಒತ್ತಾಯ ಕೇಳಿ ಬಂತು. ಅಲ್ಲಿಂದ ಜೈಲುಗಳ ಸ್ವರೂಪ ಕ್ರಮೇಣ ಬದಲಾಗುತ್ತಾ ಬಂದಿತು. ಇಂದಿನ ಜೈಲುಗಳಲ್ಲಿ ಕೆಲವು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಅವರಿಗೆ ನಾನಾ ಬಗೆಯ ಉದ್ಯೋಗ, ವೈದ್ಯಕೀಯ ಹಾಗೂ ಮನರಂಜನೆಯಂತಹ ಸೌಲಭ್ಯಗಳನ್ನು ನೀಡುವ ಮೂಲಕ ಅವರನ್ನು ಸನ್ಮಾರ್ಗಕ್ಕೆ ತರಲು ಪ್ರಯತ್ನಿಸಲಾಗುತ್ತದೆ. ಅಂದ ಹಾಗೆ, ರಷ್ಯಾದಲ್ಲಿರುವ ಖಾರ್‌ಖೋವ್ ಜೈಲು ವಿಶ್ವದ ಅತಿದೊಡ್ಡ ಜೈಲುಗಳಲ್ಲಿ ಒಂದು.

12) ಯಾವ ಗ್ರಾಮವನ್ನು ದೇಶದ ಮೊದಲ 'ಸಿಂಥೆಟಿಕ್ ಪ್ಯಾಡ್ ಮುಕ್ತ ಗ್ರಾಮ' ಎಂದು ಘೋಷಿಸಲಾಗಿದೆ?

ಎ) ಕರ್ನಾಟಕದ ಹನೇಹಳ್ಳಿ ಬಿ) ಕೇರಳದ ಕುಂಬಳಂಗಿ
ಸಿ) ತಮಿಳುನಾಡಿನ ಗೊಗ್ಗೈಪಟ್ಟಿ ಡಿ) ಆಂಧ್ರಪ್ರದೇಶದ ಆನಂದಪುರಂ

ಉತ್ತರ: ಬಿ

13) ಕಾಶಿ ಕಾರಿಡಾರ್ ಮಾದರಿಯಲ್ಲಿ ರಥ ಬೀದಿಯನ್ನು ಅಭಿವೃದ್ಧಿ ಮಾಡಲು ಈ ಕೆಳಗಿನ ಯಾವ ಕ್ಷೇತ್ರವನ್ನು ಆರಿಸಿಕೊಳ್ಳಲಾಗಿದೆ?

ಎ) ಗೋಕರ್ಣದ ರಥ ಬೀದಿ ಬಿ) ಮುರಡೇಶ್ವರದ ಸಮುದ್ರತೀರ
ಸಿ) ಕುಕ್ಕೆ ಸುಬ್ರಮಣ್ಯ ರಥ ಬೀದಿ ಡಿ) ನಂಜನಗೂಡಿನ ರಥ ಬೀದಿ.

ಉತ್ತರ: ಸಿ

14) ಈ ಕೆಳಗಿನ ಯಾವ ರಾಜ್ಯದಲ್ಲಿ ಪುರುಷರಿಗಿಂತ ಮಹಿಳಾ ಮತದಾರರೇ ಹೆಚ್ಚಿದ್ದಾರೆ?

ಎ) ಕರ್ನಾಟಕ ಬಿ) ಮಿಜೋರಾಮ್
ಸಿ) ಬಿಹಾರ್ ಡಿ) ಪಂಜಾಬ್

ಉತ್ತರ:ಬಿ

15) ಈ ಬಾರಿಯ ದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ದಕ್ಷಿಣ ಭಾರತದಿಂದ ಆಯ್ಕೆಗೊಂಡ ಏಕೈಕ ಸ್ತಬ್ಧಚಿತ್ರ ಯಾವ ರಾಜ್ಯಕ್ಕೆ ಸೇರಿದ್ದಾಗಿದೆ?

ಎ) ಕರ್ನಾಟಕ ಬಿ) ತೆಲಂಗಾಣ
ಸಿ) ತಮಿಳುನಾಡು ಡಿ) ಕೇರಳ

ಉತ್ತರ: ಎ

16) ....ಗ್ರಾಮಕ್ಕೆ "ರಕ್ತದಾನಿಗಳ ತವರೂರು" ಎಂದು ಗೂಗಲ್ ಪ್ರಶಂಸೆ ಮಾಡಿದೆ

ಎ) ಅಕ್ಕಿ ಆಲೂರು ಬಿ) ನಾಡು ಮಾಸ್ಕೇರಿ
ಸಿ) ಗಾಣಗಾಪುರ ಡಿ) ಚಂದ್ರಗುತ್ತಿ

ಉತ್ತರ: ಎ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನಲ್

ಪ್ರಜಾವಾಣಿ ಉದ್ಯೋಗ ವಾರ್ತೆ

ಡಿಆರ್‌ಡಿಒದಲ್ಲಿ ಹುದ್ದೆಗಳು

ಭಾರತ ಸರ್ಕಾರದ ರಕ್ಷಣಾ ಸಂಶೋಧನಾ ಹಾಗೂ ಅಭಿವೃದ್ಧಿ ಸಂಸ್ಥೆಯಲ್ಲಿ(ಡಿಆರ್‌ಡಿಒ) ಖಾಲಿ ಇರುವ 150 ಅಪ್ರೆಂಟಿಸ್ ಹುದ್ದೆಗಳ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

- ಒಟ್ಟು ಹುದ್ದೆಗಳ ಸಂಖ್ಯೆ: 150
- ವಿದ್ಯಾರ್ಹತೆ: ಹತ್ತನೇ ತರಗತಿ ಅಥವಾ ತತ್ಸಮಾನ ಅಥವಾ ಐಟಿಐ, ಪಿಯುಸಿ, ಡಿಪ್ಲೊಮಾ, ಪದವಿ(ವಿಜ್ಞಾನ) ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದು.
- ವಯೋಮಿತಿ: ಕನಿಷ್ಠ 18 ವರ್ಷಗಳು, ಗರಿಷ್ಠ 30 ವರ್ಷಗಳು
- ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ₹100, ಎಸ್‌ಸಿ, ಎಸ್‌ಟಿ, ಮಾಜಿ ಸೈನಿಕ, ಅಂಗವಿಕಲ, ಮಹಿಳಾ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಿಂದ ವಿನಾಯಿತಿ ಇರುತ್ತದೆ.
- ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಫೆಬ್ರುವರಿ 07, 2022
- ಹೆಚ್ಚಿನ ಮಾಹಿತಿಗೆ: www.drdo.gov.in

ಇಂಡಿಯನ್ ಆಯಿಲ್‌ನಲ್ಲಿ ಅಪ್ರೆಂಟಿಸ್ ಹುದ್ದೆಗಳು

ಇಂಡಿಯನ್ ಆಯಿಲ್ ಕಾರ್ಪೊರೇಶನ್ ಲಿಮಿಟೆಡ್‌ನಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

- ಟ್ರೇಡ್ ಅಪ್ರೆಂಟಿಸ್‌ಗಳ ಸಂಖ್ಯೆ: 626 ಹುದ್ದೆಗಳು
- ಟ್ರೇಡ್‌ಗಳು: ಫಿಟ್ಟರ್, ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್ಸ್, ಮೆಕಾನಿಕ್, ಇನ್‌ಸ್ಟ್ರುಮೆಂಟ್ ಮೆಕ್ಯಾನಿಕ್, ಮೆಕ್ಯಾನಿಸ್ಟ್ ಟ್ರೇಡ್
- ವಿದ್ಯಾರ್ಹತೆ: ಹುದ್ದೆಗಳಿಗೆ ಅನುಸಾರವಾಗಿ ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೋಮಾ, ಪದವಿ ಪೂರ್ಣಗೊಳಿಸಿರಬೇಕು.
- ವಯೋಮಿತಿ: ಡಿಸೆಂಬರ್ 2021ಕ್ಕೆ ಅನ್ವಯವಾಗುವಂತೆ ಕನಿಷ್ಠ 18, ಗರಿಷ್ಠ 24 ವರ್ಷ ವಯಸ್ಸಾಗಿರಬೇಕು.
- ನೇಮಕಾತಿ: ಕೌಶಲ ಅಥವಾ ಲಿಖಿತ ಪರೀಕ್ಷೆ ಮೂಲಕ ನೇಮಕಾತಿ ನಡೆಯಲಿದೆ.
- ಅರ್ಜಿ ಸಲ್ಲಿಸುವ ವಿಧಾನ: ಅಭ್ಯರ್ಥಿಗಳನ್ನು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು.
- ಅರ್ಜಿ ಸಲ್ಲಿಸಲು ಕೊನೆಯ ದಿನ: 31 ಜನವರಿ 2022
- ವೆಬ್‌ಸೈಟ್: https://www.ioclrecruit.com

ಬ್ಯಾಂಕ್ ಆಫ್ ಬರೋಡಾದಲ್ಲಿ ಹುದ್ದೆಗಳು

ಬ್ಯಾಂಕ್ ಆಫ್ ಬರೋಡಾದ ವಿವಿಧ ಪ್ರಾದೇಶಿಕ ಮತ್ತು ಶಾಖಾ ಕಚೇರಿಗಳಲ್ಲಿ ಖಾಲಿ ಇರುವ ವಿವಿಧ ಮ್ಯಾನೇಜ್‌ಮೆಂಟ್ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

- ವಿದ್ಯಾರ್ಹತೆ: ಹುದ್ದೆಗಳಿಗೆ ಸಂಬಂಧಿಸಿದಂತೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ/ಸ್ನಾತಕೋತ್ತರ ಪದವಿ ಪಡೆದಿರಬೇಕು.
- ವಯೋಮಿತಿ: ಕನಿಷ್ಠ 21 ವರ್ಷಗಳು, ಗರಿಷ್ಠ 35 ವರ್ಷ.
- ವಯೋಮಿತಿ ಸಡಿಲಿಕೆ: ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳು.
- ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 2022ರ ಫೆಬ್ರುವರಿ 01
- ವೆಬ್‌ಸೈಟ್: https://www.bankofbaroda.in

ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಬಿಆರ್‌ಪಿ. ಸಿಆರ್‌ಪಿ, ಬಿಆರ್‌ಸಿ, ಎಪಿಸಿ, ಎಸ್‌ಐ ಹುದ್ದೆಗಳಿಗಾಗಿ ನಡೆಯುತ್ತಿರುವ ಪರೀಕ್ಷಾ ಸಿದ್ಧತೆ ಕುರಿತು ಟಿ.ಆರ್.ಎಸ್. ಶ್ರೀನಿವಾಸ್ ಅವರು ಬರೆದಿರುವ 'ನಿರ್ದಿಷ್ಟಪಡಿಸಿದ ಹುದ್ದೆಗಳಿಗಾಗಿ ಪರೀಕ್ಷಾ ಸಿದ್ಧತೆ' ಲೇಖನಕ್ಕಾಗಿ ಈ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3Ax209T

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Supplementary Reading

Narayanpur Incident



Picture Credit: Karnataka Govt. 10th Class English Text book

English

1. Why had the students been marching? How was it an unusual march?

A teacher was arrested during Quit India Movement in a small town Narayanpur. The teacher's wife, Mohan, Babu, Manju, and their friends were marching to give a notice to the collector about their protest against the British rule. It was unusual because they were marching silently without any slogans, shouts, just the shuffle of feetand a low murmur from the crowd.

2. What had the police expected about the way of protest? Why did the student leaders manage the protest peacefully?

The police expected a violent protest against British shouting like, 'British Quit India'. The angry people might destroy the public property and disturb the peace of people. This made the police could arrest, beat up and jail them. But the intention of the student leaders was completely different. They planned for a silent march instead. They had to awaken the people by distributing the copies of Gandhiji's speech etc. So, they managed to protest against British rule silently and non-violently.

3. What was there in the mysterious parcel? What suspicion did the police have about that?

There was a cyclostyling machine in the mysterious parcel. The police suspected that Mohan and his family might be making copies of the Mahatma Gandhiji's speech and were being distributed. They wanted to know where that machine was, and who were the people doing all these things.

ಎಸ್ಸೆಸ್ಸೆಲ್ಸಿ

4. How does the inspector help Mohan and his family?

The inspector Patil told Amma that her husband and he were classmates and he was far above him. He was a scholar and he always helped him. The inspector knew that the police may come at any moment and check their house. So all the family members surrendered the things to Patil .If they had not surrendered the parcel they would have been arrested. Thus the inspector helped Mohan and his family

5. How did the writer impress upon you through 'Narayanpur Incident'? OR What can we learn from the lesson 'Narayanpur Incident'?

Narayanpur Incident impressed us to cultivate the qualities of freedom fighters like patriotism, justice, virtuousness, peace, fraternity, and the presence of mind. We should always respect the sacrifice of our freedom fighters who fought for the motherland. We learnt the way of protest against injustice. The protest should also be peaceful without damaging the public property.

Annappa Shetty MA,M.Ed,
SRP in English,Hassan

ಮಾತೃಕೆಗಳು

ಗಣಿತ

ಪಿಯುಸಿ

10) $p^2+q^2+r^2=1$, ಎಂಬ ಸಮೀಕರಣವನ್ನು p, q, r ಗಳು ತೃಪ್ತಿಪಡಿಸುತ್ತವೆಯಾದರೆ

$$A=\begin{bmatrix} 0 & r & q \\ -r & 0 & p \\ -q & -p & 0 \end{bmatrix}$$ ಎಂಬುದು

ಸಮೀಕರಣವಾದ $A^3+A=0$ ತೃಪ್ತಿಪಡಿಸಬಲ್ಲುದೆಂದು ತೋರಿಸಿ

ಪರಿಹಾರ:–

$$A^2=A.A=\begin{bmatrix} 0 & r & q \\ -r & 0 & p \\ -q & -p & 0 \end{bmatrix}\begin{bmatrix} 0 & r & q \\ -r & 0 & p \\ -q & -p & 0 \end{bmatrix}$$

$$=\begin{bmatrix} -r^2-q^2 & -pq & pr \\ -pq & -r^2-p^2 & -qr \\ pr & -qr & -q^2-p^2 \end{bmatrix}$$

$$\left(\begin{matrix} \text{as } p^2+q^2+r^2=1; -r^2-q^2=p^2-1; -r^2-p^2=q^2-1 \\ \text{and } -q^2-p^2=r^2-1 \end{matrix}\right)$$

$$A^3=\begin{bmatrix} p^2-1 & -pq & pr \\ -pq & q^2-1 & -qr \\ pr & -qr & r^2-1 \end{bmatrix}\begin{bmatrix} 0 & r & q \\ -r & 0 & p \\ -q & -p & 0 \end{bmatrix}$$

$$\begin{bmatrix} pqr-pqr & (p^2-1)r-p^2r & (p^2-1)q-p^2q \\ -r(q^2-1)+q^2r & -pqr+pqr & -p^2q+p(q^2-1) \\ qr^2-q(r^2-1) & pr^2-p(r^2-1) & pqr-pqr \end{bmatrix}$$

$$\Rightarrow \begin{bmatrix} 0 & -r & -q \\ r & 0 & -p \\ q & p & 0 \end{bmatrix} - \begin{bmatrix} 0 & r & q \\ -r & 0 & p \\ -q & -p & 0 \end{bmatrix} = -A$$

$$\Rightarrow \therefore A^3+A=0$$

11) $A=\begin{bmatrix} 1 & -1 \\ 2 & -1 \end{bmatrix}$, $B=\begin{bmatrix} a & -1 \\ b & -1 \end{bmatrix}$ ಮತ್ತು $(A+B)^2=A^2+B^2$ ಆದರೆ a ಮತ್ತು b ಕಂಡುಹಿಡಿಯಿರಿ

ಪರಿಹಾರ:– ದತ್ತ $(A+B)^2=A^2+B^2$

$$(A+B)(A+B)=A^2+B^2$$

$$\Rightarrow A(A+B)+B(A+B)=A^2+B^2$$

$$\Rightarrow AA+AB+BA+BB=A^2+B^2$$

$$\Rightarrow A^2+AB+BA+B^2=A^2+B^2$$

$$\Rightarrow AB+BA=0$$

$$\Rightarrow \begin{bmatrix} 1 & -1 \\ 2 & -1 \end{bmatrix}\begin{bmatrix} a & -1 \\ b & -1 \end{bmatrix} + \begin{bmatrix} a & -1 \\ b & -1 \end{bmatrix}\begin{bmatrix} 1 & -1 \\ 2 & -1 \end{bmatrix} = 0$$

$$\Rightarrow \begin{bmatrix} a-b & -1+1 \\ 2a-b & -2+1 \end{bmatrix} + \begin{bmatrix} a-2 & -a+1 \\ b-2 & -b+1 \end{bmatrix} = \begin{bmatrix} 0 & 0 \\ 0 & 0 \end{bmatrix}$$

$$\Rightarrow \begin{bmatrix} a-b+a-2 & 0-a+1 \\ 2a-b+b-2 & -1-b+1 \end{bmatrix} = \begin{bmatrix} 0 & 0 \\ 0 & 0 \end{bmatrix}$$

$$\Rightarrow \begin{bmatrix} 2a-b-2 & -a+1 \\ 2a-2 & -b \end{bmatrix} = \begin{bmatrix} 0 & 0 \\ 0 & 0 \end{bmatrix}$$

From (2) and (4), we get $a=1, b=0$

ಮಾತೃಕೆಗಳ ಸಂಕಲನದ ಗುಣಲಕ್ಷಣಗಳು :
(Properties of matrix addition)

ಮಾತೃಕೆಗಳ ಸಂಕಲನವು ಕೆಳಗಿನ ಗುಣಲಕ್ಷಣಗಳನ್ನು ಈಡೇರಿಸುತ್ತದೆ.

(i) **ಪರಿವರ್ತನೀಯ ನಿಯಮ** (Commutative Law)

$A=[a_{ij}]$ ಮತ್ತು $B=[b_{ij}]$ ಗಳು ಒಂದೇ ದರ್ಜೆಯ ಅಂದರೆ $m\times n$ ದರ್ಜೆಯ ಎರಡು ಮಾತೃಕೆಗಳಾಗಿರಲಿ, ಆಗ $A+B=B+A$ ಆಗಿರುತ್ತದೆ.

ಈಗ, $A+B=[a_{ij}]+[b_{ij}]=[a_{ij}+b_{ij}]$

$=[b_{ij}+a_{ij}]$ ಸಂಖ್ಯೆಗಳ ಸಂಕಲನವು ಪರಿವರ್ತನೀಯ

$=[b_{ij}+a_{ij}]=B+A$

(ii) **ಸಹವರ್ತನೀಯ ನಿಯಮ** (Associative Law)

$A=[a_{ij}]$, $B=[b_{ij}]$, ಮತ್ತು $C=[c_{ij}]$ ಗಳು ಒಂದೇ ದರ್ಜೆಯ ಅಂದರೆ $m\times n$ ದರ್ಜೆಯ ಯಾವುದೇ ಮೂರು ಮಾತೃಕೆಗಳಾಗಿದ್ದಲ್ಲಿ, $(A+B)+C=A+(B+C)$ ಆಗುತ್ತದೆ.

ಈಗ, $(A+B)+C=([a_{ij}]+[b_{ij}])+[c_{ij}]$

$=[a_{ij}+b_{ij}]+[c_{ij}]$

$=[(a_{ij}+b_{ij})+c_{ij}]$

$=[a_{ij}+(b_{ij}+c_{ij})]$

$=[a_{ij}]+[(b_{ij}+c_{ij})]$

$=[a_{ij}]+([b_{ij}]+[c_{ij}])$

$=A+(B+C)$

(iii) **ಸಂಕಲನದ ಕ್ರಿಯೆಯಲ್ಲಿ ಏಕದ ಅಸ್ತಿತ್ವ** (Existence of additive identity)

$A=[a_{ij}]$ ಯು $m\times n$ ದರ್ಜೆಯ ಮಾತೃಕೆಯಾಗಿರಲಿ ಮತ್ತು 'O' ಒಂದು $m\times n$ ಶೂನ್ಯ ಮಾತೃಕೆಯಾಗಿದ್ದಾಗ,

$A+O=O+A=A$ ಇನ್ನೊಂದು ರೀತಿಯಲ್ಲಿ 'O' ಇದು ಮಾತೃಕೆಗಳ ಸಂಕಲನದ ಸಂಕಲನೀಯ ಏಕದವಾಗಿರುತ್ತದೆ.

(iv) **ಸಂಕಲನೀಯ ವಿಲೋಮದ ಅಸ್ತಿತ್ವ** (The existence of additive inverse)

$A=[a_{ij}]$ ಯಾವದೋ ಒಂದು ಮಾತೃಕೆಯಾಗರಲಿ, ಆಗ $-A=[-a_{ij}]$ ಎಂಬ ಮತ್ತೊಂದು ಮಾತೃಕೆ ದೊರೆಯುತ್ತದೆ ಮತ್ತು $A+(-A)=(-A)+A=O$. ಆಗುತ್ತದೆ. ಆಗ $-A$ ಯನ್ನು, A ಮಾತೃಕೆಯ ಸಂಕಲನೀಯ ವಿಲೋಮ ಎನ್ನುವರು.

(ಮುಂದುವರಿಯುವುದು......)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರದ 'ಎಲೆಕ್ಟ್ರಿಕ್ ಚಾರ್ಜಸ್ ಅಂಡ್ ಫೀಲ್ಡ್ಸ್' ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://bit.ly/3IBRHnD

‘ಸುರಕ್ಷತಾ ಕ್ರಮದೊಂದಿಗೆ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ’

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ಕೋವಿಡ್ ಸುರಕ್ಷತಾ ಕ್ರಮದೊಂದಿಗೆ ನಡೆಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಇಲ್ಲಿ ಬುಧವಾರ ತಿಳಿಸಿದರು.

‘ವಿದ್ಯಾರ್ಥಿಗಳು ಆತಂಕ ಪಡದೆ, ಪರೀಕ್ಷೆ ಬರೆಯಲು ಸಿದ್ಧತೆ ಮಾಡಿಕೊಳ್ಳಬೇಕು. ಎಲ್ಲ ಸುರಕ್ಷತಾ ಕ್ರಮ ಕೈಗೊಳ್ಳಲಾಗುವುದು. ಮಾರ್ಚ್ 28ರಿಂದಲೇ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಆರಂಭಗೊಳ್ಳಲಿವೆ’ ಎಂದು ಹೇಳಿದರು.

‘ಬೆಂಗಳೂರಿನಲ್ಲಿ ಫೆಬ್ರುವರಿ ಮೊದಲ ವಾರದಿಂದ ಶಾಲೆ ಆರಂಭಿಸಲು ಚಿಂತಿಸಲಾಗಿದೆ. ಜ.28ರಂದು ನಡೆಯುವ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಹಿಜಾಬ್‌ಗೆ ಅನುಮತಿಗೆ ಕೋರಿ ಕರಾವಳಿಯಲ್ಲಿ ಕೆಲವು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಕ್ಕೆ ಸಂಬಂಧಿಸಿ ಸಮಿತಿಯನ್ನು ರಚಿಸಲಾಗಿದೆ.

ಬಿ.ಸಿ.ನಾಗೇಶ್

ಸಮಿತಿಯು ವರದಿ ಸಲ್ಲಿಸುವವರೆಗೂ ಖಾಸಗಿ ಹಾಗೂ ಸರ್ಕಾರಿ ಶಾಲೆಗಳ ಎಸ್‌ಡಿಎಂಸಿಯವರು ನಿಶ್ಚಯಿಸಿರುವ ಸಮವಸ್ತ್ರ ಧರಿಸಿಯೇ ಬರಬೇಕು. ಆರು ವಿದ್ಯಾರ್ಥಿಗಳು ಮಾತ್ರ ಹಿಜಾಬ್ ಧರಿಸಿಯೇ ಕಾಲೇಜಿಗೆ ಬರುತ್ತೇವೆ ಎಂದು ಹಠ ಮಾಡುತ್ತಿದ್ದಾರೆ. ಆ ಸಮುದಾಯದ ಉಳಿದ 90 ವಿದ್ಯಾರ್ಥಿಗಳು ಸಮವಸ್ತ್ರ ಧರಿಸಿಯೇ ಕಾಲೇಜಿಗೆ ಬಂದಿದ್ದಾರೆ’ ಎಂದು ಸ್ಪಷ್ಟನೆ ನೀಡಿದರು.

ಸಂದೇಶದ ವೇಳೆ ಎಡವಟ್ಟು: ಗಣರಾಜ್ಯೋತ್ಸವದ ಸಂದೇಶ ಓದುವ ವೇಳೆ ಸಚಿವರು, ‘ಕೊಡಗು’ ಜಿಲ್ಲೆಯನ್ನು ‘ಕೊರಕು ಜಿಲ್ಲೆ’ ಎಂದು, ‘ದುರಸ್ತಿ’ ಎಂಬುದನ್ನು ‘ದುಃಸ್ಥಿತಿ’ ಎಂದೂ, ‘ವಿತರಿಸಲಾಗಿದೆ’ ಎಂಬುದನ್ನು ‘ವಿಸ್ತರಿಸಲಾಗಿದೆ’ ಎಂದು ಓದಿದರು.

ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ ಅವರ ಹೆಸರು ಪ್ರಸ್ತಾಪಿಸುವಾಗಲೂ ‘ಮೀನಾ’ ಎಂದು ಹೇಳಿದರು.

12 ಜಿಲ್ಲೆಗಳಲ್ಲಿ ‘ಗ್ರಾಮ ಒನ್’

ಒಂದನೇ ಪುಟದಿಂದ

ಜಿಲ್ಲಾಧಿಕಾರಿಗಳಿಗೆ ಹೊಣೆಗಾರಿಕೆ: ‘ಈ ಯೋಜನೆಯಡಿ ಪ್ರಾಯೋಗಿಕ ಹಂತದಲ್ಲಿಯೇ ಆರು ಲಕ್ಷಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಿ ಸೇವೆಗಳನ್ನು ಪೂರೈಸಲಾಗಿದೆ. ತಹಶೀಲ್ದಾರರು, ಉಪ ಆಯುಕ್ತರ ಸಹಕಾರ ಬಹಳ ಮುಖ್ಯ. ಆನ್‌ಲೈನ್‌ನಲ್ಲಿ ಸ್ವೀಕೃತವಾಗುವ ಅರ್ಜಿಗಳಿಗೆ ಶೀಘ್ರ ಮಂಜೂರಾತಿ ನೀಡಿದಾಗ ಮಾತ್ರ ಸಂಬಂಧಪಟ್ಟ ಪ್ರಮಾಣಪತ್ರಗಳನ್ನು ಜನರಿಗೆ ಲಭ್ಯವಾಗಿಸಲು ಸಾಧ್ಯ. ಜನರಿಗೆ ಸೇವೆ ಒದಗಿಸುವ ಎಲ್ಲ ಹಂತದ ವ್ಯವಸ್ಥೆಯನ್ನು ತಾಲ್ಲೂಕು ಕಚೇರಿಯಲ್ಲಿ ಕಲ್ಪಿಸಿ, ಆನ್‌ಲೈನ್‌ನಲ್ಲಿಯೇ ಪರಿಹಾರ ಒದಗಿಸಬೇಕು. ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಹೊಣೆಯನ್ನು ಆಯಾ ಜಿಲ್ಲಾಧಿಕಾರಿಗಳು ವಹಿಸಬೇಕು’ ಎಂದು ಮುಖ್ಯಮಂತ್ರಿ ಸೂಚಿಸಿದರು.

ಹಾವೇರಿ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಯೋಜನೆಗೆ ಚಾಲನೆ ನೀಡಿದ ಸಂದರ್ಭದಲ್ಲಿ ಗ್ರಾಮಸ್ಥರಿಂದ ಅರ್ಜಿ ಸ್ವೀಕರಿಸಿ ಆಯುಷ್ಮಾನ್ ಭಾರತ, ಆರ್‌ಟಿಸಿ, ಸಂಧ್ಯಾ ಸುರಕ್ಷಾ ಕಾರ್ಡ್, ರಹವಾಸಿ ಪ್ರಮಾಣಪತ್ರ ಮುಂತಾದ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ತಕ್ಷಣವೇ ಪ್ರಮಾಣಪತ್ರ ವಿತರಿಸಲು ವ್ಯವಸ್ಥೆ ಮಾಡಿಕೊಂಡಿದ್ದ ಇ–ಆಡಳಿತ ಇಲಾಖೆಯ ಅಧಿಕಾರಿಗಳ ಕಾರ್ಯವೈಖರಿಯನ್ನು ಮುಖ್ಯಮಂತ್ರಿ ಶ್ಲಾಘಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೊಡ್ಡ ಸುಳ್ಳು ಹೇಳಿದ್ದಾರೆ: ಮುಖ್ಯಮಂತ್ರಿ ಬೊಮ್ಮಾಯಿ

ಪಕ್ಷಾಂತರ ಹೇಳಿಕೆ: ಬಿಜೆಪಿ–ಕಾಂಗ್ರೆಸ್ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕರು ಕಾಂಗ್ರೆಸ್ ಸೇರಲು ಸಜ್ಜಾಗಿದ್ದಾರೆ ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ ಉಭಯ ಪಕ್ಷಗಳ ಮುಖಂಡರ ನಡುವೆ ತೀವ್ರ ವಾಕ್ಸಮರಕ್ಕೆ ಎಡೆಮಾಡಿದೆ. ವಿಪಕ್ಷ ನಾಯಕರ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅವರ ಸಂಪುಟದ ಸದಸ್ಯರು, ಹೇಳಿಕೆಗೆ ಸಾಕ್ಷ್ಯ ಕೊಡುವಂತೆ ಸವಾಲು ಹಾಕಿದ್ದಾರೆ.

‘ಬಿಜೆಪಿ ಮತ್ತು ಜೆಡಿಎಸ್‌ನ ಹಲವು ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ’ ಎಂದು ಸಿದ್ದರಾಮಯ್ಯ ಹೇಳಿದ್ದರು. ‘ಇತರ ಪಕ್ಷಗಳ ಹಲವು ಶಾಸಕರು ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ. ಅವರ ಅರ್ಜಿಗಳು ನಮ್ಮ ಮುಂದಿವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡ ಹೇಳಿಕೆ ನೀಡಿದ್ದರು. ಆ ಬಳಿಕ ರಾಜ್ಯ ರಾಜಕೀಯ ವಲಯದಲ್ಲಿ ಪಕ್ಷಾಂತರ ವಿಷಯ ಭಾರಿ ಚರ್ಚೆಗೆ ಗ್ರಾಸವಾಗಿದೆ.

ದೊಡ್ಡ ಸುಳ್ಳು: ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಸಿದ್ದರಾಮಯ್ಯ ದೊಡ್ಡ ಸುಳ್ಳು ಹೇಳಿದ್ದಾರೆ. ಬಿಜೆಪಿಯಿಂದ ಯಾರು ಬರುತ್ತಾರೆ ಎಂಬ ಪ್ರಶ್ನೆಗೆ ಅವರ ಬಳಿ ಉತ್ತರವೇ ಇಲ್ಲ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಮಧ್ಯದಲ್ಲೇ ಆಂತರಿಕ ಪೈಪೋಟಿ ಇದೆ’ ಎಂದರು.

ಶಿವಕುಮಾರ್ ಸುದ್ದಿಗೋಷ್ಠಿ ನಡೆಸಿ ಬೇರೆ ಪಕ್ಷದ ಶಾಸಕರು ಕಾಂಗ್ರೆಸ್‌ಗೆ ಬರುತ್ತಾರೆ ಎನ್ನುತ್ತಾರೆ. ಸಿದ್ದರಾಮಯ್ಯ ಕೂಡ ಅಭದ್ರತೆಯಿಂದ ಅವರು ಬರುತ್ತಾರೆ, ಇವರು ಬರುತ್ತಾರೆ ಎನ್ನುತ್ತಾರೆ. ಇಬ್ಬರ ನಡುವಿನ ತಿಕ್ಕಾಟದಲ್ಲಿ ಕಾಂಗ್ರೆಸ್‌ನವರೇ ಪಕ್ಷ ಬಿಡುತ್ತಾರೆ. ಅಲ್ಲಿಗೆ ಯಾರೂ ಹೋಗುವುದಿಲ್ಲ ಎಂದು ಹೇಳಿದರು.

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ನೆಲೆ ಇಲ್ಲ. ಪಂಜಾಬ್‌ನಲ್ಲಿ ಅಧಿಕಾರ ಕಳೆದುಕೊಳ್ಳುತ್ತಿದೆ. ರಾಷ್ಟ್ರೀಯ ಮಟ್ಟದಲ್ಲಿ ಅಪ್ರಸ್ತುತವಾಗುತ್ತಿರುವ ಪಕ್ಷವನ್ನು ಯಾರು ಸೇರುತ್ತಾರೆ? ಅದರ ಪ್ರಭಾವ ರಾಜ್ಯದ ಕಾಂಗ್ರೆಸ್ ಮೇಲೂ ಆಗುತ್ತದೆ ಎಂದರು.

ತಮ್ಮ ಜತೆ ಕಾಂಗ್ರೆಸ್‌ನ 16 ಶಾಸಕರು ಸಂಪರ್ಕದಲ್ಲಿದ್ದಾರೆ ಎಂಬ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಅವರ ಜತೆ ಯಾರು ಸಂಪರ್ಕದಲ್ಲಿ ಎಂಬುದನ್ನು ಅವರನ್ನೇ ಕೇಳಬೇಕು. ನನ್ನ ಜತೆ ಕಾಂಗ್ರೆಸ್ ಶಾಸಕರು ಸಂಪರ್ಕದಲ್ಲಿದ್ದಾರೆ ಎಂಬುದು ಸುಳ್ಳು. ನಾನು ಜವಾಬ್ದಾರಿ ಸ್ಥಾನದಲ್ಲಿದ್ದೇನೆ. ಬೇರೆಯವರ ರೀತಿ ನಾನು ಸುಳ್ಳು ಹೇಳುವುದಿಲ್ಲ’ ಎಂದು ಹೇಳಿದರು.

‘ಕೈ’ಬಿಟ್ಟವರನ್ನು ಮತ್ತೆ ಸೇರಿಸಿಕೊಳ್ಳುವುದಿಲ್ಲ: ಸಿದ್ದರಾಮಯ್ಯ

ಬೆಂಗಳೂರು: ‘ಕಾಂಗ್ರೆಸ್ ಬಿಟ್ಟು ಹೋದವರನ್ನು ಸೇರಿಸಿಕೊಳ್ಳುತ್ತೇವೆ ಎಂದು ನಾನು ಹೇಳಿಲ್ಲ. ಆದರೆ, ನಮ್ಮ ಪಕ್ಷದ ಸಿದ್ಧಾಂತ ಒಪ್ಪಿ ಬಂದವರಿಗೆ ಸ್ವಾಗತ ಎಂದಿದ್ದೇನೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಬಿಜೆಪಿ ಶಾಸಕರು ತಮ್ಮ ಸಂಪರ್ಕದಲ್ಲಿದ್ದಾರೆಂಬ ವಿಚಾರದ ಕುರಿತು ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಬಿಟ್ಟು ಹೋದವರನ್ನು ಪಕ್ಷಕ್ಕೆ ಮತ್ತೆ ಸೇರಿಸಿಕೊಳ್ಳುವುದಿಲ್ಲವೆಂದು ಅಧಿವೇಶನದಲ್ಲಿಯೇ ನಾನು ಹೇಳಿದ್ದೇನೆ’ ಎಂದರು.

‘ಈ ವಿಚಾರವಾಗಿ ಯಾರ ಜೊತೆಗೂ ಮಾತನಾಡಿಲ್ಲ. ಅವರಾಗಿ ಬಂದರೆ ಮಾತ್ರ ಮಾತನಾಡುತ್ತೇನೆ. ಬೇರೆ ಪಕ್ಷಗಳಿಂದ ಸೇರುವವರು ನಾಳೆಯೇ ಬಂದು ಸೇರುತ್ತಾರೆ ಎಂದೂ ಹೇಳಿಲ್ಲ. ಚುನಾವಣೆ ಹತ್ತಿರ ಬಂದಾಗ ಕಾಂಗ್ರೆಸ್ ಸೇರುತ್ತಾರೆ’ ಎಂದರು.

ಸಮಯವೇ ಎಲ್ಲದಕ್ಕೂ ಉತ್ತರ ನೀಡಲಿದೆ- ಡಿಕೆಶಿ

ಬೆಂಗಳೂರು: ‘ಕೇಂದ್ರದಲ್ಲಿ ಮಾಜಿ ಸಚಿವರಾಗಿದ್ದ ಹಾಗೂ ಮುಖ್ಯಮಂತ್ರಿ ಆಗಲು ಬಯಸುತ್ತಿರುವವರು ಅವರ ಪಕ್ಷದವರು ಕಾಂಗ್ರೆಸ್ ಜತೆ ಸಂಪರ್ಕದಲ್ಲಿದ್ದಾರೆಂದು ಹೇಳಿರುವಾಗ ನಾನು ಏನನ್ನೂ ಹೇಳುವ ಅಗತ್ಯವಿಲ್ಲ. ಸಮಯವೇ ಎಲ್ಲದಕ್ಕೂ ಉತ್ತರ ನೀಡಲಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿಯ ವ್ಯವಹಾರದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ’ ಎಂದರು.

‘ಈಗಿನ ಸರ್ಕಾರದ ಆಡಳಿತದಲ್ಲಿ ರಾಜ್ಯ 20 ವರ್ಷ ಹಿಂದಕ್ಕೆ ಹೋಗಿದೆ. ಉತ್ತಮ ಆಡಳಿತ ನೀಡಲು ಅವರಿಂದ ಸಾಧ್ಯವಾಗಿಲ್ಲ. ರಾಜ್ಯದ ಜನರ ಹಿತದ ಬಗ್ಗೆ ನಾವು ಚಿಂತನೆ ನಡೆಸಿದ್ದು, ಜನರಿಗೆ ಬದಲಾವಣೆ ಹಾಗೂ ಉತ್ತಮ ಆಡಳಿತದ ಬಗ್ಗೆ ಅರಿವು ಮೂಡಿಸುವತ್ತ ಗಮನಹರಿಸುತ್ತಿದ್ದೇವೆ' ಎಂದರು.

ಪಕ್ಷಾಂತರ: ಸಚಿವರ ಪ್ರತಿಕ್ರಿಯೆಗಳು

ಹುಚ್ಚು ಹಿಡಿದವರು ಕಾಂಗ್ರೆಸ್ ಸೇರುತ್ತಾರೆ

‘ಹುಚ್ಚು ಹಿಡಿದವರು ಕಾಂಗ್ರೆಸ್‌ಗೆ ಹೋಗುತ್ತಾರೆ. ಬುದ್ಧಿ ನೆಟ್ಟಗೆ ಇರುವವರು ಯಾರೂ ಆ ಪಕ್ಷಕ್ಕೆ ಹೋಗುವುದಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಸದೃಢವಾಗಿದೆ. ಇಂತಹ ಸಮಯದಲ್ಲಿ ಯಾರೂ ಪಕ್ಷ ಬಿಡುವುದಿಲ್ಲ’

ಆರಗ ಜ್ಞಾನೇಂದ್ರ, ಗೃಹ ಸಚಿವ

ಗೆದ್ದಲು ಹಿಡಿದ ಮರ

ಕಾಂಗ್ರೆಸ್ ಈಗ ಗೆದ್ದಲು ಹಿಡಿದ ಮರ. ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅವರೇ ಕಾಂಗ್ರೆಸ್ ಅನ್ನು ಮುಗಿಸುತ್ತಾರೆ. ತಲೆಹರಟೆ ಮಾತನಾಡಿದರೆ ಶಿಸ್ತುಕ್ರಮ ಜರುಗಿಸುವುದಾಗಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಈಗಾಗಲೇ ಎಚ್ಚರಿಕೆ ನೀಡಿದ್ದಾರೆ’

ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಎಷ್ಟು ಶಾಸಕರನ್ನಾದರೂ ತರುತ್ತಾರೆ

ರಮೇಶ ಜಾರಕಿಹೊಳಿ ಹಿರಿಯ ರಾಜಕಾರಣಿ. ಮಾಜಿ ಸಚಿವ ಹಾಗೂ ಅನುಭವಿ. ಅವರ ಸಂಪರ್ಕದಲ್ಲಿ ಎಷ್ಟೋ ಶಾಸಕರು ಇರಬಹುದು. ಆದರೆ, ನನಗೆ ಮಾಹಿತಿ ಇಲ್ಲ. ಎಷ್ಟು ಶಾಸಕರನ್ನಾದರೂ ಬಿಜೆಪಿಗೆ ಕರೆತರುವ ಶಕ್ತಿ ರಮೇಶ ಅವರಿಗಿದೆ.

ಗೋವಿಂದ ಕಾರಜೋಳ, ಜಲ ಸಂಪನ್ಮೂಲ ಸಚಿವ

ಹಾವು ಬಿಡ್ತೇನೆ ಎಂಬ ಕತೆ

ಕಾಂಗ್ರೆಸ್‌ನವರಿಗೆ ಮಾಡಲು ಬೇರೆ ಏನೂ ಕೆಲಸ ಇಲ್ಲ. ಹಾವಿನ ಬುಟ್ಟಿ ಇಟ್ಟುಕೊಂಡು ಹಾವು ಬಿಡ್ತೇನೆ, ಹಾವು ಬಿಡ್ತೇನೆ ಎಂದು ಹೆದರಿಸುವಂತೆ ಮಾಡುತ್ತಿದ್ದಾರೆ. ಬುಟ್ಟಿ ತೆರೆದರೆ ತಾನೇ ಗೊತ್ತಾಗೋದು, ಬುಸ್ ಅನ್ನುತ್ತಾ? ಠುಸ್ ಅನ್ನುತ್ತಾ? ಅಂತ.

ಎಸ್‌.ಟಿ. ಸೋಮಶೇಖರ್, ಸಹಕಾರ ಸಚಿವ

ಅಭದ್ರತೆಯ ದ್ಯೋತಕ

ಪಕ್ಷ ಬಿಟ್ಟು ಹೋದವರನ್ನು ಮತ್ತೆ ಯಾವ ಕಾರಣಕ್ಕೂ ಹಿಂದಕ್ಕೆ ಕರೆಯುವುದಿಲ್ಲ ಎಂದು ಸಿದ್ದರಾಮಯ್ಯ ಎರಡು ವರ್ಷಗಳ ಹಿಂದೆ ಮೇಜು ಗುದ್ದಿ ಹೇಳಿದ್ದರು. ಈಗ ಅವರೇ ಪರೋಕ್ಷವಾಗಿ ಆಹ್ವಾನ ನೀಡುತ್ತಿದ್ದಾರೆ. ಪಕ್ಷ ಬಿಟ್ಟು ಹೋದವರ ಅನಿವಾರ್ಯ ಕಾಂಗ್ರೆಸ್‌ಗೆ ಇದೆ. ಇದು ಸಿದ್ದರಾಮಯ್ಯ ಅವರ ಅಭದ್ರತೆಯ ದ್ಯೋತಕ.

ಸಿ.ಸಿ. ಪಾಟೀಲ, ಲೋಕೋಪಯೋಗಿ ಸಚಿವ

ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ

‘ನಾವು ಯಾರೂ ಕಾಂಗ್ರೆಸ್ ನಾಯಕರ ಸಂಪರ್ಕದಲ್ಲಿ ಇಲ್ಲ. ನಾವು ಬಿ.ಎಸ್. ಯಡಿಯೂರಪ್ಪ ಅವರನ್ನು ಬಿಟ್ಟು ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ. ಮುಂದೆಯೂ ಬಿಜೆಪಿ ಸರ್ಕಾರವೇ ಅಧಿಕಾರಕ್ಕೆ ಬರಲಿದೆ. 17 ಜನರೂ ಬಿಜೆಪಿಯಲ್ಲೇ ಇರುತ್ತೇವೆ’

ಕೆ.ಸಿ. ನಾರಾಯಣ ಗೌಡ, ಕ್ರೀಡೆ ಮತ್ತು ಯುವ ಸಬಲೀಕರಣ ಸಚಿವ

ಶುದ್ಧ ಸುಳ್ಳುಗಾರರು

‘ಬಿಜೆಪಿ ಶಾಸಕರು ಯಾವ ಪಕ್ಷದವರ ಸಂಪರ್ಕದಲ್ಲೂ ಇಲ್ಲ. ಕಾಂಗ್ರೆಸ್‌ವರು ನಮ್ಮ ಸಂಪರ್ಕದಲ್ಲೂ ಇಲ್ಲ. ಬಿಜೆಪಿ ಶಾಸಕರು ಕಾಂಗ್ರೆಸ್ ನಾಯಕರ ಸಂಪರ್ಕದಲ್ಲಿದ್ದಾರೆ ಎಂಬುದು ಸುಳ್ಳು. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಶುದ್ಧ ಸುಳ್ಳುಗಾರರು’

ಪ್ರಭು ಚವಾಣ್, ಪಶುಸಂಗೋಪನಾ ಸಚಿವ

ಆತ್ಮಾವಲೋಕನ ಮಾಡಿಕೊಳ್ಳಲಿ

‘ಬೇರೆ ಪಕ್ಷದ ಶಾಸಕರು ಬಿಜೆಪಿಗೆ ಬಂದು ಜಾತ್ರೆ ಮಾಡಿಕೊಂಡು ಹೋಗುತ್ತಾರೆ ಎಂಬ ಹೇಳಿಕೆ ಸರಿಯಲ್ಲ. ಈ ರೀತಿ ಹೇಳಿಕೆ ನೀಡುವವರು ಎಲ್ಲೆಲ್ಲಿ ಹೋಗಿ ಬಂದಿದ್ದಾರೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಲಿ. ಯಾರಾದರೂ ಪಕ್ಷ ಬಿಟ್ಟು ಹೋಗುತ್ತೇವೆ ಎಂದು ಹೇಳಿದ್ದಾರಾ?’

ಮುರುಗೇಶ ಆರ್. ನಿರಾಣಿ, ಕೈಗಾರಿಕಾ ಸಚಿವ
(ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ)

ಪಟ್ಟಿ ಬಿಡುಗಡೆ ಮಾಡಲಿ

ವಿಶ್ವಾಸವೇ ಬೇರೆ, ರಾಜಕಾರಣವೇ ಬೇರೆ. ಬಿಜೆಪಿಯ ಯಾವ ಶಾಸಕರು ಕಾಂಗ್ರೆಸ್ ನಾಯಕರ ಸಂಪರ್ಕದಲ್ಲಿದ್ದಾರೆ ಎಂಬುದರ ಪಟ್ಟಿಯನ್ನು ಬಿಡುಗಡೆ ಮಾಡಲಿ. ಅವರ ಸಂಪರ್ಕದಲ್ಲಿ ಯಾರು ಇದ್ದಾರೊ? ಇಲ್ಲವೊ? ಗೊತ್ತಿಲ್ಲ. ಚುನಾವಣೆಗೆ ಇನ್ನೂ 15 ತಿಂಗಳು ಇರುವಾಗಲೇ ಈ ರೀತಿ ಮಾತನಾಡುತ್ತಿದ್ದಾರೆ.

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

‘ಕೋವಿಡ್ ತಗ್ಗಿಸುವಲ್ಲಿ ಸರ್ಕಾರ ಯಶಸ್ವಿ’

ಧ್ವಜಾರೋಹಣ ನೆರವೇರಿಸಿದ ರಾಜ್ಯಪಾಲ ಗೆಹಲೋತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣ ತಗ್ಗಿಸಲು ಹಗಲಿರುಳು ಶ್ರಮಿಸಿ ಯಶಸ್ವಿಯಾಗಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರವನ್ನು ಕೊಂಡಾಡಿದರು.

ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು,‘ ಸಾಂಕ್ರಾಮಿಕ ರೋಗದ ಈ ಬಿಕ್ಕಟ್ಟು ನಮ್ಮ ಸಾಮರ್ಥ್ಯ ವೃದ್ಧಿಸುವ ಮತ್ತು ಹೆಚ್ಚುವರಿ ಆರೋಗ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಳ್ಳಲು ಸಹಕಾರಿಯಾಗಿದೆ. ಆಮ್ಲಜನಕ ಸಿಲಿಂಡರ್ ಮತ್ತು ವೆಂಟಿಲೇಟರ್‌ಗಳ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಈ ಅವಕಾಶವನ್ನು ಬಳಕೆ ಮಾಡಿಕೊಳ್ಳಲಾಗಿದೆ’ ಎಂದರು.

ವೈದ್ಯಕೀಯ ಸಿಬ್ಬಂದಿ, ಪೊಲೀಸ್ ಸಿಬ್ಬಂದಿಯ ಶ್ರಮ ಮತ್ತು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡಿದ್ದರಿಂದ ರಾಜ್ಯದಲ್ಲಿ ಸಾವಿನ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿದರು.

ಕೋವಿಡ್ ಎರಡನೇ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ 11,82,307 ಲಕ್ಷ ಕಾರ್ಮಿಕರಿಗೆ ತಲಾ ₹2 ಸಾವಿರದಂತೆ ₹236.46 ಕೋಟಿ ಪಾವತಿಸಲಾಗಿದೆ. ಕಾರ್ಮಿಕ ಕಲ್ಯಾಣ ಮಂಡಳಿಯು 14,527 ಸಂಘಟಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ₹628.16 ಕೋಟಿ ವಿತರಿಸಲಾಗಿದೆ ಎಂದು ಹೇಳಿದರು.

ಜಲಾನಯನ ಅಭಿವೃದ್ಧಿಗೆ ಸರ್ಕಾರ ಗಮನ ಹರಿಸಿದೆ. ಮೊಬೈಲ್ ತಂತ್ರಜ್ಞಾನ ಆಧಾರಿತ ಬೆಳೆ ಸಮೀಕ್ಷೆಗೆ ಒತ್ತು ನೀಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿನ ರೈತರ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ರಾಜ್ಯ ಸರ್ಕಾರದಿಂದ 14 ಅಮೃತ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕರ್ನಾಟಕವು ಸಹಕಾರಿ ಕ್ಷೇತ್ರದಲ್ಲಿ ಹಾಲು ಉತ್ಪಾದನೆಯಲ್ಲಿ ಭಾರತದಲ್ಲಿಯೇ 2ನೇ ಸ್ಥಾನ, ಮೊಟ್ಟೆ ಉತ್ಪಾದನೆಯಲ್ಲಿ 6ನೇ ಸ್ಥಾನ ಹಾಗೂ ಮಾಂಸ ಉತ್ಪಾದನೆಯಲ್ಲಿ 10ನೇ ಸ್ಥಾನ ಪಡೆದುಕೊಂಡಿದೆ. ಬೆಂಗಳೂರು ಸ್ಮಾರ್ಟ್‌ಸಿಟಿ ಯೋಜನೆಯಡಿ 158.27 ಕಿಲೋ ಮೀಟರ್ ರಸ್ತೆಯನ್ನು ವೈಟ್ ಟಾಪಿಂಗ್ ಕಾಮಗಾರಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಪೈಕಿ 83.91 ಕಿ.ಮೀ ಕಾಮಗಾರಿ ಪೂರ್ಣಗೊಂಡಿದೆ ಎಂದು ಹೇಳಿದರು.

ಬೆಂಗಳೂರಿನ ಮಾಣೆಕ್ ಶಾ ಪರೇಡ್ ಮೈದಾನದಲ್ಲಿ ನಡೆದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಧ್ವಜಾರೋಹಣ ಮಾಡಿದ ನಂತರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪರಸ್ಪರ ಶುಭಾಶಯ ಕೋರಿದರು –ಪ್ರಜಾವಾಣಿ ಚಿತ್ರ

‘ಹಕ್ಕು, ಕರ್ತವ್ಯ ಜೊತೆಯಾಗಿ ಹೋಗಬೇಕು’

‘ಸಂವಿಧಾನದತ್ತವಾಗಿ ಲಭ್ಯವಾಗಿರುವ ಹಕ್ಕು ಮತ್ತು ಕರ್ತವ್ಯಗಳು ಜೊತೆ ಜೊತೆಯಾಗಿ ಹೋಗಬೇಕು. ಇಂದಿನ ಯುವ ಪೀಳಿಗೆಗೆ ನೆನಪು ಮಾಡಿಕೊಡುವ ದಿನವಿದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ನಮಗೆ ಬಹಳಷ್ಟು ಹಕ್ಕುಗಳನ್ನು ಸಂವಿಧಾನ ನೀಡಿದೆ. ಆ ಹಕ್ಕುಗಳನ್ನು ಪಡೆಯುವ ಅರ್ಹತೆ ಸಂಪಾದಿಸುವ ರೀತಿಯಲ್ಲಿ ಕರ್ತವ್ಯಗಳನ್ನು ನಾವು ನಿಭಾಯಿಸಬೇಕು. ಪ್ರತಿಯೊಂದು ರಾಜ್ಯವೂ ರಾಷ್ಟ್ರ ನಿರ್ಮಾಣದಲ್ಲಿ ಮುಂದಿರಬೇಕು. ಜನತೆಯೂ ರಾಷ್ಟ್ರ ನಿರ್ಮಾಣದತ್ತ ಗಮನ ಹರಿಸಬೇಕು. ದೇಶ ಮೊದಲು ಎನ್ನುವ ಭಾವನೆ ಇರಬೇಕು’ ಎಂದರು.

ನಾರಾಯಣ ಗುರುಗಳ ಸ್ತಬ್ಧಚಿತ್ರ ಮೆರವಣಿಗೆ

ಮಂಗಳೂರಿನಲ್ಲಿ ‘ಸ್ವಾಭಿಮಾನದ ನಡಿಗೆ’

ಪ್ರಜಾವಾಣಿ ವಾರ್ತೆ

ಮಂಗಳೂರು: ಗಣರಾಜ್ಯೋತ್ಸವ ಪರೇಡ್‌ನಲ್ಲಿ ನಾರಾಯಣ ಗುರುಗಳ ಸ್ತಬ್ಧಚಿತ್ರವನ್ನು ತಿರಸ್ಕರಿಸಿರುವ ಕೇಂದ್ರ ಸರ್ಕಾರದ ನಿಲುವು ಖಂಡಿಸಿ ಮಂಗಳೂರಿನಲ್ಲಿ ಬುಧವಾರ ವಿವಿಧ ಸಂಘಟನೆಗಳು, ಪಕ್ಷಗಳಿಂದ ಪ್ರತ್ಯೇಕವಾಗಿ ‘ಸ್ವಾಭಿಮಾನದ ನಡಿಗೆ’ಯನ್ನು ಹಮ್ಮಿಕೊಳ್ಳಲಾಯಿತು. ನಾರಾಯಣ ಗುರುಗಳ ಭಾವಚಿತ್ರವನ್ನು ಇಟ್ಟುಕೊಂಡು ನಗರದಲ್ಲಿ ಮೆರವಣಿಗೆ ನಡೆಸಲಾಯಿತು.

ಬಿಲ್ಲವ ಸಂಘಟನೆಗಳು ಮತ್ತು ಗುರುಗಳ ಅನುಯಾಯಿಗಳು ಹಮ್ಮಿಕೊಂಡಿರುವ ನಾರಾಯಣ ಗುರುವಿನ ಸ್ತಬ್ಧಚಿತ್ರದ ಮೆರವಣಿಗೆ ಮತ್ತು ಸ್ವಾಭಿಮಾನದ ನಡಿಗೆಗೆ ಕಂಕನಾಡಿ ಬ್ರಹ್ಮ ಬೈದರ್ಕಳ ಗರೋಡಿಯಲ್ಲಿ ಕೇಂದ್ರದ ಮಾಜಿ ಸಚಿವ ಬಿ.ಜನಾರ್ದನ ಪೂಜಾರಿ ಚಾಲನೆ ನೀಡಿದರು. ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ, ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ ಸಂಪನ್ನಗೊಂಡಿತು.

ತಾಲ್ಲೂಕು ಕೇಂದ್ರಗಳಿಂದ ಬಂದಿದ್ದ ಹತ್ತಾರು ಸ್ತಬ್ಧಚಿತ್ರಗಳು ಗಮನ ಸೆಳೆದವು. ಪಂಪ್‌ವೆಲ್‌ಗೆ ಸ್ತಬ್ಧಚಿತ್ರಗಳು ಬರುತ್ತಿದ್ದಂತೆ ಎರಡು ಜೆಸಿಬಿಗಳ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು. ಗುರುಗಳ ನೂರಾರು ಅನುಯಾಯಿಗಳು ಹಳದಿ ಶಾಲು ಹಾಕಿಕೊಂಡು ಹೆಜ್ಜೆ ಹಾಕಿದರು. ಹಲವು ಮಂದಿ ಹಳದಿ ಬಾವುಟದೊಂದಿಗೆ ಕಾರು, ದ್ವಿಚಕ್ರ ವಾಹನದಲ್ಲಿ ಪಾಲ್ಗೊಂಡರು. ಮೆರವಣಿಗೆಯಲ್ಲಿ ಚೆಂಡೆ ಪ್ರದರ್ಶನ, ಭಜನೆ ಗಮನ ಸೆಳೆಯಿತು. ಸಮುದಾಯ ನಾಯಕರು, ವಿವಿಧ ಪಕ್ಷಗಳ ಮುಖಂಡರು, ಸಂಘಟನೆಗಳ ಪ್ರಮುಖರು ಭಾಗವಹಿಸಿದ್ದರು.

ಇದಕ್ಕೂ ಮೊದಲು ಬ್ರಹ್ಮಶ್ರೀ ನಾರಾಯಣಗುರು ಸ್ವಾಭಿಮಾನ ನಡಿಗೆ ಸಮಿತಿಯ ಸ್ವಾಭಿಮಾನದ ನಡಿಗೆಗೆ ಕಂಕನಾಡಿ ಗರೋಡಿಯಲ್ಲಿ ಗರೋಡಿಯ ಅಧ್ಯಕ್ಷ ಚಿತ್ತರಂಜನ್ ಚಾಲನೆ ನೀಡಿದರು. ನಾರಾಯಣ ಗುರುಗಳ ಭಾವಚಿತ್ರದ ಸ್ತಬ್ಧಚಿತ್ರವು ನಗರದ ವಿವಿಧ ಕಡೆಗಳಲ್ಲಿ ಸಂಚರಿಸಿ, ಸಂಜೆ ಕುದ್ರೋಳಿ ಕ್ಷೇತ್ರದಲ್ಲಿ ಸಂಪನ್ನಗೊಂಡಿತು. ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಹರೀಶ್ ಕುಮಾರ್ ಸೇರಿದಂತೆ ಕಾಂಗ್ರೆಸ್‌ನ ಪ್ರಮುಖರು ಇದ್ದರು.

ಮತ್ತೊಂದೆಡೆ ಎಡ, ಜಾತ್ಯತೀತ ಪಕ್ಷಗಳು ಮತ್ತು ಜನಪರ ಸಂಘಟನೆಗಳಿಂದ ನಗರದ ಕ್ಲಾಕ್ ಟವರ್‌ನಿಂದ ಜಿಲ್ಲಾಧಿಕಾರಿ ಕಚೇರಿಗೆ ನಾರಾಯಣ ಗುರುಗಳ ಭಾವಚಿತ್ರದ ಮೆರವಣಿಗೆ ನಡೆಯಿತು.

ಮಂಗಳೂರಿನ ಕಂಕನಾಡಿ ಗರೋಡಿಯಲ್ಲಿ ನಾರಾಯಣ ಗುರುವಿನ ಸ್ತಬ್ಧಚಿತ್ರದ ಮೆರವಣಿಗೆ ಮತ್ತು ಸ್ವಾಭಿಮಾನದ ನಡಿಗೆಗೆ ಕೇಂದ್ರದ ಮಾಜಿ ಸಚಿವ ಬಿ. ಜನಾರ್ದನ ಪೂಜಾರಿ ಮೆರವಣಿಗೆಗೆ ಚಾಲನೆ ನೀಡಿದರು.

‘ರಾಗಿ ಖರೀದಿಗೆ ಮರುಚಾಲನೆ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಬೆಂಬಲ ಬೆಲೆ ಯೋಜನೆಯಡಿ ಸ್ಥಗಿತಗೊಂಡಿರುವ ರಾಗಿ ಖರೀದಿ ಪ್ರಕ್ರಿಯೆಗೆ ಮರುಚಾಲನೆ ನೀಡಲು ಚರ್ಚಿಸಲಾಗಿದೆ. ಎರಡು ದಿನಗಳಲ್ಲಿ ಸರ್ಕಾರ ಆದೇಶ ಹೊರಡಿಸಲಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಗಿ ಖರೀದಿಗೆ ಕೇಂದ್ರ ಸರ್ಕಾರ ಮಿತಿ ವಿಧಿಸಿದ್ದರಿಂದ ನೋಂದಣಿ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿತ್ತು. ಇದರಿಂದ ರೈತರಿಗೆ ತೊಂದರೆ ಉಂಟಾಗಲಿದೆ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಈ ಬಗ್ಗೆ ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚೆ ನಡೆಸಲಾಗಿದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.


ಬಿ.ಸಿ.ಪಾಟೀಲ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಶಿಕ್ಷಣ ಸಂಸ್ಥೆ ವಿವಾದ: ಹೊರಟ್ಟಿ ವಿರುದ್ಧ ಪ್ರಕರಣ

ಧಾರವಾಡ: ತಾಲ್ಲೂಕಿನ ಮುಗದ ಗ್ರಾಮದಲ್ಲಿರುವ ಸರ್ವೋದಯ ಶಿಕ್ಷಣ ಟ್ರಸ್ಟ್ ವಿವಾದಕ್ಕೆ ಸಂಬಂಧಿಸಿದಂತೆ ವಾಲ್ಮೀಕಿ ಸಮಾಜದವರ ಮೇಲೆ ಮಂಗಳವಾರ ಹಲ್ಲೆ ನಡೆದಿದೆ ಎಂದು ಆರೋಪಿಸಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಐವರ ವಿರುದ್ಧ ಇಲ್ಲಿನ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವಾದಿತ ಸರ್ವೋದಯ ಶಿಕ್ಷಣ ಟ್ರಸ್ಟ್‌ಗೆ ಸೇರಿದ ಶಿಕ್ಷಣ ಸಂಸ್ಥೆಯಲ್ಲಿ ಬಸವರಾಜ ಹೊರಟ್ಟಿ ಅವರ ನಾಮ ಫಲಕ ತೆಗೆಯಲು ತಿಳಿಸಿದ್ದು ಗಲಾಟೆಗೆ ಕಾರಣವಾಗಿತ್ತು. ಗಲಾಟೆಯಲ್ಲಿ ವಾಲ್ಮೀಕಿ ಸಂಘದ ಪದಾಧಿಕಾರಿಗಳು ಬಂದಿದ್ದ ಕಾರಿನ ಮೇಲೆ ಹೊರಟ್ಟಿ ಬೆಂಬಲಿಗರು ಕಲ್ಲುತೂರಾಟ ನಡೆಸಿದ್ದಾರೆ ಎಂದು ವಾಲ್ಮೀಕಿ ಸಂಘದ ಜಿಲ್ಲಾ ಅಧ್ಯಕ್ಷ ಮೋಹನ ಗುಡಸಲಮನಿ ಆರೋಪಿಸಿದ್ದಾರೆ. ಪ್ರಕರಣದಲ್ಲಿ ವೆಂಕಟೇಶ ಲಕ್ಕಾಣಿ, ಚೈತ್ರಾ ಮೇಟಿ, ನಿರ್ಮಲಾ ಚವ್ಹಾಣ, ದೊಡ್ಡಪ್ಪ ಕೆಂಗಣ್ಣವರ ವಿರುದ್ಧವೂ ಪ್ರಕರಣ ದಾಖಲಾಗಿದೆ. ಘಟನೆ ಕುರಿತ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ.

‘ಉಸ್ತುವಾರಿ ಆಯಾ ಜಿಲ್ಲೆಯ ಸಚಿವರಿಗೆ ನೀಡಬೇಕು’

ಹುಬ್ಬಳ್ಳಿ: ‘ಉತ್ತಮ ಆಡಳಿತ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಆಯಾ ಜಿಲ್ಲೆಯ ಸಚಿವರಿಗೇ ಜಿಲ್ಲಾ ಉಸ್ತುವಾರಿ ಸ್ಥಾನ ನೀಡುವುದು ಉತ್ತಮ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ’ ಎಂದು ಶಾಸಕ ಜಗದೀಶ ಶೆಟ್ಟರ್ ಹೇಳಿದರು.

ನಗರದಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ‘ಪಕ್ಷದ ನಿರ್ದೇಶನದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ತೀರ್ಮಾನ ಕೈಗೊಂಡಿದ್ದಾರೆ. ಇದಕ್ಕೆ ಯಾವ ರೀತಿಯ ಸ್ಪಂದನೆ ವ್ಯಕ್ತವಾಗುತ್ತದೆ ಎನ್ನುವುದನ್ನು ಸ್ವಲ್ಪ ದಿನ ಕಾದು ನೋಡಿ ನನ್ನ ಅಭಿಪ್ರಾಯವನ್ನು ಪಕ್ಷದ ವರಿಷ್ಠರಿಗೆ ತಿಳಿಸುವೆ. ಈ ಪ್ರಯೋಗದಿಂದ ಮುಂಬರುವ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದರು.

ಕರ್ನಾಟಕ ಸರ್ಕಾರ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ: 080–23349434 ಫ್ಯಾಕ್ಸ್: 080–23347670

ಸಂಖ್ಯೆ: ಬಿ3/ಪೂ.ಅಂ.ಮೇ.ಮು.ಲ್ಯಾ&ಸ.06/2021–22 ದಿನಾಂಕ: 24.01.2022

ಇ–ಟೆಂಡರ್ ಪ್ರಕಟಣೆ

ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರು **“2022ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಪೂರ್ವ ಮುದ್ರಿತ ಉತ್ತೀರ್ಣ ಪ್ರಮಾಣ ಪತ್ರಗಳ ಮುದ್ರಣ, ಪರಿವರ್ತನೀಯ ದತ್ತಾಂಶಗಳ ಮೇಲುಮುದ್ರಣ, ಮತ್ತು ಲ್ಯಾಮಿನೇಷನ್ ಸಹಿತ ಸರಬರಾಜು”** ಕಾರ್ಯಕ್ಕೆ ಅರ್ಹ ಸಂಸ್ಥೆಗಳಿಂದ ಇ-ಟೆಂಡರ್ ಅರ್ಜಿಗಳನ್ನು ಕೆ.ಟಿ.ಪಿ.ಪಿ. ಅಧಿನಿಯಮ–1999 ಮತ್ತು ಕೆ.ಟಿ.ಪಿ.ಪಿ. ನಿಯಮಗಳು–2000, ಅಡಿಯಲ್ಲಿ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ದಸ್ತಾವೇಜುಗಳನ್ನು ಮಂಡಳಿಯ ಅಂತರ್ಜಾಲತಾಣ **www.sslc.karnataka.gov.in** ಮತ್ತು **www.eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಾರಂಭ ದಿನಾಂಕ: **27.01.2022**, ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ: **31.01.2022ರ ಮಧ್ಯಾಹ್ನ 12.00 ಗಂಟೆ.** ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **11.02.2022ರ ಸಂಜೆ 4.00 ಗಂಟೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **15.02.2022ರ ಸಂಜೆ 4.00 ಗಂಟೆ.** ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ: **18.02.2022 ಸಂಜೆ 4.00 ಗಂಟೆ.** ಸದರೀ ಟೆಂಡರ್‌ನ ಅಂದಾಜು ಮೌಲ್ಯ **ರೂ. 59,64,000/-**(ಜಿ.ಎಸ್.ಟಿ. ಹೊರತುಪಡಿಸಿ)ಮತ್ತು ಮುಂಗಡ ಠೇವಣಿ **ರೂ. 1,19,300/-**ಗಳಾಗಿದ್ದು ಹೆಚ್ಚಿನ ವಿವರಗಳನ್ನು ಮಂಡಳಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ನಿರ್ದೇಶಕರು, ಪರೀಕ್ಷೆಗಳು,

ಕೃಷಿ ಇಲಾಖೆ

ಹಣ್ಣು ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅಗ್ರಹಾರ ಟ್ಯಾಂಕ್‌ಬಂಡ್ ರಸ್ತೆ, ಬಿನ್ನಿಪೇಟೆ, ಬೆಂಗಳೂರು – 560 023
ಫೋನ್: 26704150/26707575 | E-mail: apmcfv@rediffmail.com

ಕ್ರ.ಸಂ: ಹಹೂಮತ(ವಿ) ಕೃಉಮಾಸ(ಬೆಂ)/1665 /2021–22 ದಿನಾಂಕ : 25.01.2022

–:ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆ:–

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ “ಹೆಚ್” ಬ್ಲಾಕ್‌ನಲ್ಲಿ ಖಾಲಿ ಇರುವ ಮೂಲೆ ನಿವೇಶನ ಸಂಖ್ಯೆ: 01, 11, 20, 27, 29 ಮತ್ತು 34 ಗಳನ್ನು ಮಾನ್ಯ ನಿರ್ದೇಶಕರು ನಿವೇಶನಕ್ಕೆ ನಿಗಧಿಪಡಿಸಿರುವ ದರಗಳನ್ವಯ ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಲೀಸ್–ಕಂ–ಸೇಲ್ ಆಧಾರದ ಮೇಲೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಾವಳಿ 2004 ರನ್ವಯ ಹಂಚಿಕೆ ಮಾಡಲು ಉದ್ದೇಶಿಸಿರುವುದರಿಂದ, ಸಮಿತಿಯ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಪರವಾನಗಿ ಪಡೆದು ಅಧಿಸೂಚಿಸಲ್ಪಟ್ಟ ವಿವಿಧ ಹಣ್ಣುಗಳ ವ್ಯಾಪಾರ ವಹಿವಾಟು ನಡೆಸುತ್ತಿರುವ ಪೇಟೆಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹಂಚಿಕೆ ಮಾಡಲು ಉದ್ದೇಶಿಸಿರುವ ಮೂಲೆ ನಿವೇಶನ ಸಂಖ್ಯೆ	ನಿವೇಶನದ ಅಳತೆ (ಚ.ಅಡಿಗಳಲ್ಲಿ)	ನಿಗಧಿಪಡಿಸಿರುವ ನಿವೇಶನದ ಒಟ್ಟು ಮೌಲ್ಯ (ರೂ.ಗಳಲ್ಲಿ)	ನಿವೇಶನ ಮೌಲ್ಯ ಶೇ.25ರ ಮೊತ್ತ (ರೂ.ಗಳಲ್ಲಿ)
1	ಹೆಚ್–01, 11, 20	1030.96	18,55,728	4,63,932
2	ಹೆಚ್–27, (ಎಸ್.ಸಿ.ಗೆ ಮೀಸಲು)	1030.96	18,55,728	4,63,932
3	ಹೆಚ್–29, 34	500.00	9,00,000	2,25,000

ಷರತ್ತು ಮತ್ತು ನಿಬಂಧನೆಗಳು:– 1) ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ಹಂಚಿಕೆ ಪಡೆಯಲು ಇಚ್ಚಿಸುವ ಲೈಸನ್ಸ್ ಹೊಂದಿರುವ ಪೇಟೆಕಾರ್ಯಕರ್ತರು **ದಿನಾಂಕ: 08.02.2022 ರಂದು ಸಂಜೆ 4:30 ಗಂಟೆಯೊಳಗಾಗಿ** ನೋಂದಣಿ ಶುಲ್ಕ **ರೂ. 500/–** ಗಳಿಗೆ (ರೂ. ಐದು ನೂರು ಮಾತ್ರ) (ಮರುಪಾವತಿಸಲಾಗುವುದಿಲ್ಲ) ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ(ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. ಈ ಹಿಂದೆ ಸಮಿತಿಯಲ್ಲಿ ನೋಂದಾಯಿಸಿಕೊಂಡವರು ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. 2) ನೊಂದಾಯಿತಅರ್ಹ ಪೇಟೆಕಾರ್ಯಕರ್ತರು ಶೇ.18 ರಂತೆ ಜಿ.ಎಸ್.ಟಿ. ಸೇರಿ ಒಟ್ಟು ಅರ್ಜಿ ಶುಲ್ಕ **ರೂ. 1,180/–** (ರೂ. ಒಂದು ಸಾವಿರದ ನೂರಎಂಬತ್ತು ಮಾತ್ರ) ಗಳನ್ನು (ಮರುಪಾವತಿಸಲಾಗುವುದಿಲ್ಲ) ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಸಲ್ಲಿಸಿನಮೂನೆ–III ನ್ನು ಪಡೆಯತಕ್ಕದ್ದು. 3) ಭರ್ತಿ ಮಾಡಿದ ನಮೂನೆ–III ರೊಂದಿಗೆ ಹಾಗೂ ನಿವೇಶನ ಮೌಲ್ಯದ ಶೇ.25 ರಷ್ಟು ಮುಂಗಡ ಮೊತ್ತವನ್ನು ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇವರ ಹೆಸರಿಗೆ ಡಿ.ಡಿ. ಪಡೆದು ಸದರಿ ಡಿ.ಡಿ. ಹಾಗೂ ನಿಗಧಿ ಪಡಿಸಿದ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 11.02.2022ರಂದು ಸಂಜೆ 4.00 ಗಂಟೆಯವರೆಗೆ, 4) ದಿನಾಂಕ: 14.02.2022 ರಂದುಬೆಳಿಗ್ಗೆ 11:30 ಗಂಟೆಗೆ.** ಟೆಂಡರ್–ಕಂ–ಬಹಿರಂಗ ಹರಾಜು ಪ್ರಕ್ರಿಯೆಯು ಬಿನ್ನಿಪೇಟೆ ಆಡಳಿತ ಕಛೇರಿಯಲ್ಲಿ ನಡೆಸಿ, ನಂತರ ಟೆಂಡರ್ ತೆರೆಯಲಾಗುವುದು. 5) ಕರ್ನಾಟಕ ಸರ್ಕಾರದ ಅಧಿಸೂಚನೆಯಂತೆ, ಪರಿಶಿಷ್ಟ ಜಾತಿಗೆ ಶೇ. 16.22 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ. 6.55 ರಷ್ಟು ಮತ್ತು ಆಸ್ತಿ ಹಂಚಿಕೆ ನಿಯಮಗಳನ್ವಯ ಅಂಗವಿಕಲರಿಗೆ ಮತ್ತು ಮಾಜಿ ಯೋಧರಿಗೆ ತಲಾ ಶೇ: 2 ರಂತೆ ಮೀಸಲಾತಿ ಕಾಯ್ದಿರಿಸಲಾಗಿದೆ. ಈ ಸಂಬಂಧ ಮೀಸಲಾತಿ ಕೋರುವವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. 6) ಹಂಚಿಕೆಗೆ ಪ್ರಸ್ತಾಪಿಸಿರುವ ನಿವೇಶನ ಸಂಖ್ಯೆ ಹಾಗೂ ವಿಸ್ತೀರ್ಣಗಳಲ್ಲಿ ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. 7) ನಿವೇಶನ ಹಂಚಿಕೆಯನ್ನು ನಿಯಮಾನುಸಾರ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರಅನುಮೋದನೆಯ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗುವುದು. 8) ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಪರಿಗಣಿಸುವ / ರದ್ದುಗೊಳಿಸುವ / ತಿರಸ್ಕರಿಸುವ ಮತ್ತುಟೆಂಡರ್ ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಈ ಸಮಿತಿ ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳನ್ನು, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು. ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ | ವಾಸಾಸಂಇ/ಬೆಂ/ಜಿಎ/3030/2021–22 | ಸಹಿ/– ಆಡಳಿತಾಧಿಕಾರಿಗಳು

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.,
ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ–571428
ಸಂಖ್ಯೆ; ಮಂಹಾಒ/ಆಡಳಿತ/ನೇರ ನೇಮಕಾತಿ/637/2021–22 ದಿನಾಂಕ: 25–01–2022

ನೇಮಕಾತಿ ಪ್ರಕಟಣೆ

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ, ಗೆಜ್ಜಲಗೆರೆ ಇಲ್ಲಿ ಖಾಲಿ ಇರುವ ವಿವಿಧ ವೃಂದದ 187 ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ. ನೇಮಕಾತಿಗೆ ಅಭ್ಯರ್ಥಿಗಳು ಅರ್ಜಿಗಳನ್ನು ಖುದ್ದಾಗಿ/ಅಂಚೆ/ಕೊರಿಯರ್ ಮೂಲಕ ಸಲ್ಲಿಸಲು ಅವಕಾಶವಿಲ್ಲದಿರುವುದೆಂದು ಈ ಮೂಲಕ ಸ್ಪಷ್ಟಪಡಿಸಿದೆ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಒ 118 ಸಿಸಿಬಿ 2021, ಬೆಂಗಳೂರು, ದಿನಾಂಕ: 02.09.2021 ರ ಅನುಮತಿಯಂತೆ ನೇರ ನೇಮಕಾತಿಗೆ ಪ್ರಕಟಣೆ ನೀಡಿರುವ ಹುದ್ದೆಗಳ ವಿವರ ಕೆಳಕಂಡಂತಿರುತ್ತದೆ.

ಕ್ರ. ಸಂ.	ಹುದ್ದೆಗಳ ವಿವರ	ವೇತನ ಶ್ರೇಣಿ ರೂ.	ನೇರ ನೇಮಕಾತಿ ಹುದ್ದೆಗಳು
01	ಸಹಾಯಕ ವ್ಯವಸ್ಥಾಪಕರು (ಪ.ವೈ.ಸೇ/ಕೃ.ಗ)	52650–97100	19
02	ಸಹಾಯಕ ವ್ಯವಸ್ಥಾಪಕರು(ಖರೀದಿ/ಉಗ್ರಾಣ)	52650–97100	01
03	ಸಹಾಯಕ ವ್ಯವಸ್ಥಾಪಕರು(ಮೇವು & ಪ.ಆ)	52650–97100	03
04	ಲೀಗಲ್ ಅಧಿಕಾರಿ	43100–83900	01
05	ತಾಂತ್ರಿಕ ಅಧಿಕಾರಿ(ಡಿ.ಟಿ.)	43100–83900	12
06	ಉಗ್ರಾಣಾಧಿಕಾರಿ/ಐ.ಎಂ. ಅಧಿಕಾರಿ	43100–83900	01
07	ಡೇರಿ ಪರಿವೀಕ್ಷಕರು ದರ್ಜೆ –2 – ಸಿವಿಲ್	33450–62600	01
08	ಡೇರಿ ಪರಿವೀಕ್ಷಕರು ದರ್ಜೆ –2 – ಎಲೆಕ್ಟ್ರಾನಿಕ್ಸ್ & ಇನ್ಸ್‌ಟ್ರುಮೆಂಟೇಷನ್	33450–62600	02
09	ಡೇರಿ ಪರಿವೀಕ್ಷಕರು ದರ್ಜೆ –2 – ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್	33450–62600	02
10	ವಿಸ್ತರಣಾಧಿಕಾರಿ ದರ್ಜೆ –3	33450–62600	22
11	ವಿಸ್ತರಣಾಧಿಕಾರಿ ದರ್ಜೆ –3 ಮಂಡ್ಯ ಹಾಲು ಒಕ್ಕೂಟದ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ	33450–62600	03
12	ಆಡಳಿತ ಸಹಾಯಕ ದರ್ಜೆ –2	27650–52650	14
13	ಲೆಕ್ಕ ಸಹಾಯಕ ದರ್ಜೆ –2	27650–52650	08
14	ಕೆಮಿಸ್ಟ್ ದರ್ಜೆ –2	27650–52650	09
15	ಜೂನಿಯರ್ ಸಿಸ್ಟಮ್ ಆಪರೇಟರ್	27650–52650	10
16	ಕೋ–ಆರ್ಡಿನೇಟರ್ (ಪ್ರೊಟೆಕ್ಷನ್)	27650–52650	04
17	ಆರೋಗ್ಯ ನಿರೀಕ್ಷಕರು	27650–52650	01
18	ನರ್ಸ್	27650–52650	02
19	ಮಾರುಕಟ್ಟೆ ಸಹಾಯಕ ದರ್ಜೆ–3/ಡಿಸ್‌ಪ್ಯಾಚರ್ಸ್	21400–42000	10
20	ಮಾರುಕಟ್ಟೆ ಸಹಾಯಕ ದರ್ಜೆ–3/ಡಿಸ್‌ಪ್ಯಾಚರ್ಸ್ ಮಂಡ್ಯ ಹಾಲು ಒಕ್ಕೂಟದ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ	21400–42000	04
21	ಜೂನಿಯರ್ ಟೆಕ್ನಿಷಿಯನ್ – ಎಲೆಕ್ಟ್ರಿಕಲ್	21400–42000	16
22	ಜೂನಿಯರ್ ಟೆಕ್ನಿಷಿಯನ್ – ಎಂ.ಆರ್.ಎ.ಸಿ	21400–42000	06
23	ಜೂನಿಯರ್ ಟೆಕ್ನಿಷಿಯನ್ – ವೆಲ್ಡರ್	21400–42000	02
24	ಜೂನಿಯರ್ ಟೆಕ್ನಿಷಿಯನ್ – ಫಿಟ್ಟರ್	21400–42000	09
25	ಜೂನಿಯರ್ ಟೆಕ್ನಿಷಿಯನ್ – ಬಾಯ್ಲರ್	21400–42000	06
26	ಜೂನಿಯರ್ ಟೆಕ್ನಿಷಿಯನ್–ಇನ್ಸ್ಟ್ರುಮೆಂಟ್ ಮೆಕಾನಿಕ್	21400–42000	05
27	ಜೂನಿಯರ್ ಟೆಕ್ನಿಷಿಯನ್– ಎಲೆಕ್ಟ್ರಾನಿಕ್ ಮೆಕಾನಿಕ್	21400–42000	06
28	ಚಾಲಕರು	21400–42000	06
29	ಕೃಷಿ ಸಹಾಯಕ	21400–42000	01
30	ತೋಟಗಾರಿಕೆ ಸಹಾಯಕ	21400–42000	01

ನೇಮಕಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ದಿನಾಂಕ: **01–02–2022** ರಿಂದ ದಿನಾಂಕ: **02–03–2022** ರವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಳು ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ **Website www.manmul.coop** ನಲ್ಲಿ ಲಭ್ಯವಿದ್ದು, ಆಸಕ್ತ ಅಭ್ಯರ್ಥಿಗಳು ಒಕ್ಕೂಟದ ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,



ಸುಭಾಷಿತ

ಆಸೆಪಡುವುದು ತಪ್ಪಲ್ಲ. ಆಸೆ ಬಿಡು ಎಂದು ಹೇಳುವುದೇ ತಪ್ಪು. ಅದನ್ನು ಬಿಟ್ಟೆ ಎಂದು ಹೇಳುವುದು ಸುಳ್ಳು. ಏಕೆಂದರೆ, ಆಸೆ ಎಂಬುದು ಮನುಷ್ಯನ ಆಂತರ್ಯದಲ್ಲೇ ಇರುವ ಸಹಜ ಗುಣ. **–ಯು.ಜಿ.ಕೃಷ್ಣಮೂರ್ತಿ**

'ಗ್ರಾಮ ಒನ್'ನ ಅನನ್ಯ ಮಾದರಿ ಸಾಮಾಜಿಕ ಸೌಹಾರ್ದದ ಸವಾಲು

ಗಣರಾಜ್ಯೋತ್ಸವ ದಿನದಿಂದ ಕಾರ್ಯಾರಂಭ ಮಾಡಿರುವ ಕರ್ನಾಟಕ ಸರ್ಕಾರದ 'ಗ್ರಾಮ ಒನ್' ಯೋಜನೆ, ಜನರ ಬಳಿಗೆ ಸರ್ಕಾರವನ್ನು ಕೊಂಡೊಯ್ಯುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮ. ಆಡಳಿತದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರುವ ಉದ್ದೇಶ ಹೊಂದಿರುವ ಈ ಯೋಜನೆಯಲ್ಲಿ ನೂರಕ್ಕೂ ಹೆಚ್ಚು ಸೇವೆಗಳು ಒಂದೇ ಸೂರಿನ ಅಡಿ ಲಭ್ಯ. ಮೊದಲ ಹಂತದಲ್ಲಿ ಹನ್ನೆರಡು ಜಿಲ್ಲೆಗಳಲ್ಲಿ ಕಾರ್ಯಾರಂಭ ಮಾಡಿರುವ 'ಗ್ರಾಮ ಒನ್'ನಿಂದಾಗಿ ವಿವಿಧ ಉದ್ದೇಶಗಳಿಗೆ ನಾಗರಿಕರು ಸರ್ಕಾರಿ ಕಚೇರಿಗಳಿಗೆ ಅಲೆಯುವ ಹಾಗೂ ಸರತಿ ಸಾಲಿನಲ್ಲಿ ನಿಲ್ಲುವ ಶ್ರಮ ತಪ್ಪಲಿದೆ. ಮಧ್ಯವರ್ತಿಗಳ ಹಾವಳಿಯನ್ನೂ ತಪ್ಪಿಸುವ ಈ ಯೋಜನೆಯಿಂದ ನಾಗರಿಕರ ಹಣ ಮತ್ತು ಶ್ರಮ ಉಳಿಯುವುದರ ಜೊತೆಗೆ, ಆಡಳಿತದಲ್ಲಿ ದಕ್ಷತೆ ಹಾಗೂ ಪಾರದರ್ಶಕತೆ ಹೆಚ್ಚುವ ನಿರೀಕ್ಷೆಯಿದೆ. ಗ್ರಾಮ ಪಂಚಾಯಿತಿಗಳ ಮೂಲಕ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವ ಪರಿಕಲ್ಪನೆಯನ್ನು ದೇಶಕ್ಕೆ ಪರಿಚಯಿಸಿದ ಕರ್ನಾಟಕ, ಈಗ 'ಗ್ರಾಮ ಒನ್' ಮೂಲಕ ಗ್ರಾಮೀಣ ಆಡಳಿತವನ್ನು ಮತ್ತಷ್ಟು ಬಲಪಡಿಸಲು ಮುಂದಾಗಿದೆ. ಸ್ವಾತಂತ್ರ್ಯದ ಮತ್ತೊಂದು ಮುಖವಾದ ಸ್ವರಾಜ್ಯದ ಪರಿಕಲ್ಪನೆ ಸಾಕಾರಗೊಳ್ಳುವ ನಿಟ್ಟಿನಲ್ಲಿ 'ಗ್ರಾಮ ಒನ್'ನಂಥ ಯೋಜನೆಗಳ ಅಗತ್ಯ. ಸಂಗೊಳ್ಳಿ ರಾಯಣ್ಣನ ಹೆಸರಿನಲ್ಲಿ ಮಿಲಿಟರಿ ಶಾಲೆಯೊಂದನ್ನು ಆರಂಭಿಸುವುದು ಗಣರಾಜ್ಯೋತ್ಸವ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಕಟಿಸಿರುವ ಮತ್ತೊಂದು ಮುಖ್ಯ ಯೋಜನೆ. ನೂರು ಎಕರೆ ಜಾಗದಲ್ಲಿ, ₹ 185 ಕೋಟಿ ವೆಚ್ಚದಲ್ಲಿ ರೂಪುಗೊಳ್ಳಲಿರುವ ಸೈನಿಕ ಶಾಲೆಯು ಭಾರತ ಒಕ್ಕೂಟಕ್ಕೆ ಕರ್ನಾಟಕದ ಮಹತ್ವದ ಕೊಡುಗೆಯಾಗಲಿದೆ. ಸಂಗೊಳ್ಳಿಯಲ್ಲಿ ಹತ್ತು ಎಕರೆ ವಿಸ್ತೀರ್ಣದ 'ರಾಕ್ ಗಾರ್ಡನ್' ಅನ್ನು ರಾಯಣ್ಣನ ಹೆಸರಿನಲ್ಲಿ ನಿರ್ಮಿಸುವ ಉದ್ದೇಶವೂ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭಕ್ಕೆ ಪೂರಕವಾದ ಚಿಂತನೆಯಾಗಿದೆ. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭವನ್ನು ಸ್ಮರಣೀಯವಾಗಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ.

ಸಾಮಾಜಿಕ ಸೌಹಾರ್ದ, ಸಾಮರಸ್ಯಕ್ಕೆ ಕರ್ನಾಟಕ ಮೊದಲಿನಿಂದಲೂ ಹೆಸರುವಾಸಿ. ಇಂಥ ಹೆಮ್ಮೆಯ ಪರಂಪರೆಗೆ ಗಾಸಿಯಾಗದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಸರ್ಕಾರದ್ದಾಗಿದೆ

ಸಾಂವಿಧಾನಿಕ ಕರ್ತವ್ಯಗಳನ್ನು ಅರಿತುಕೊಂಡು ರಾಷ್ಟ್ರ ನಿರ್ಮಾಣದ ಬಗ್ಗೆ ರಾಜ್ಯದ ಜನತೆ ಗಮನಹರಿಸಬೇಕು ಎನ್ನುವ ಕಿವಿಮಾತನ್ನು ಗಣರಾಜ್ಯೋತ್ಸವ ಸಂದರ್ಭದಲ್ಲಿ ಮುಖ್ಯಮಂತ್ರಿ ಹೇಳಿದ್ದಾರೆ. ಪ್ರಜೆಗಳ ಜೊತೆಗೆ, ಪ್ರಜಾಪ್ರತಿನಿಧಿಗಳೂ ಸಂವಿಧಾನದ ಆಶಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಬದ್ಧತೆ ಪ್ರದರ್ಶಿಸಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಬರೆದಿರುವ ಪತ್ರವನ್ನು ಮುಖ್ಯಮಂತ್ರಿ ಹಾಗೂ ಶಾಸಕರು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಅಲ್ಪಸಂಖ್ಯಾತರ ಮೇಲೆ ಹಿಂಸಾಚಾರ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿ ಬರೆದಿರುವ ಪತ್ರದಲ್ಲಿ, ಕಳೆದ ಕೆಲವು ತಿಂಗಳುಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ಯುವಜನರ ಬರ್ಬರ ಹತ್ಯೆಗಳು ನಡೆದಿರುವುದನ್ನು ಪ್ರಸ್ತಾಪಿಸಲಾಗಿದೆ. ದ್ವೇಷಭಾಷಣಗಳ ಹೆಚ್ಚಳ, ಅಲ್ಪಸಂಖ್ಯಾತರ ಪೂಜಾಸ್ಥಳಗಳಿಗೆ ಸಾರ್ವಜನಿಕವಾಗಿ ಬೆದರಿಕೆ ಹಾಗೂ ವಿವಿಧ ಧಾರ್ಮಿಕ ಗುಂಪುಗಳ ಹಿಂಸಾತ್ಮಕ ಮುಖಾಮುಖಿಯ ಘಟನೆಗಳಿಗೆ ರಾಜ್ಯ ಸಾಕ್ಷಿಯಾಗಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ. ನಕಾರಾತ್ಮಕ ಪ್ರವೃತ್ತಿಗಳನ್ನು ಪುನರ್ ವಿಮರ್ಶೆಗೊಳ್ಳುವಂತೆ ಶಾಸಕರನ್ನು ಒತ್ತಾಯಿಸಿರುವ ಪತ್ರ, ದೇಶದ ಸಂವಿಧಾನದ ಆಶಯಗಳನ್ನು ಹಾಗೂ ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸುವಂತೆ ಶಾಸಕರಿಗೆ ಮನವಿ ಮಾಡಿದೆ. ರಾಜ್ಯದಲ್ಲಿ ಸಾಮಾಜಿಕ ಸೌಹಾರ್ದಕ್ಕೆ ಆತಂಕ ಉಂಟಾಗಿದೆ ಎಂದು ಕೆಲವು ಗಣ್ಯರು ವ್ಯಕ್ತಪಡಿಸಿರುವ ಆತಂಕವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಹಾಗೂ ಅಲ್ಪಸಂಖ್ಯಾತರಲ್ಲಿ ಮೂಡಿರುವ ಅಸುರಕ್ಷಿತ ಮನೋಭಾವವನ್ನು ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ಭಾರತ ಒಕ್ಕೂಟದಲ್ಲಿ ಪ್ರಬಲ ರಾಜ್ಯವಾದ ಕರ್ನಾಟಕದ ಸಾಧನೆಯ ಪರಂಪರೆಯನ್ನು ಮತ್ತಷ್ಟು ಸಶಕ್ತವಾಗಿ ಮುನ್ನಡೆಸುವ ಹೊಣೆಗಾರಿಕೆ ಸರ್ಕಾರದ ಮೇಲಿದೆ ಎಂದು ಗಣರಾಜ್ಯೋತ್ಸವ ಸಂದರ್ಭದಲ್ಲಿ ಮುಖ್ಯಮಂತ್ರಿ ಹೇಳಿದ್ದಾರೆ. ಸಾಮಾಜಿಕ ಸೌಹಾರ್ದ, ಸಾಮರಸ್ಯಕ್ಕೆ ಕರ್ನಾಟಕ ಮೊದಲಿನಿಂದಲೂ ಪ್ರಸಿದ್ಧವಾದುದು. ವಚನ ಚಳವಳಿ ದೇಶಕ್ಕೆ ಹಾಕಿಕೊಟ್ಟ ಕ್ರಾಂತಿಕಾರಿ ಮಾದರಿ ಈಗಲೂ ಪ್ರಸ್ತುತ. ಇಂಥ ಹೆಮ್ಮೆಯ ಪರಂಪರೆಗೆ ಗಾಸಿಯಾಗದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಸರ್ಕಾರದ್ದಾಗಿದೆ. ರಾಜ್ಯದ ವಿವಿಧ ಭಾಗಗಳಿಂದ ಪದೇಪದೇ ವರದಿಯಾಗುತ್ತಿರುವ ದ್ವೇಷ ಭಾಷಣಗಳು ಹಾಗೂ ಹಿಂಸಾಚಾರ ಪ್ರಕರಣಗಳು ನಾಡಿನ ಸೌಹಾರ್ದ ಪರಂಪರೆಗೆ ಪೂರಕವಾದವುಗಳಲ್ಲ. ರಾಜ್ಯದ ಘನತೆ ಮತ್ತು ವರ್ಚಸ್ಸನ್ನು ರಾಷ್ಟ್ರೀಯ- ಅಂತರರಾಷ್ಟ್ರೀಯ ಮಟ್ಟದಲ್ಲಿ ಕುಗ್ಗಿಸುವ, ಸಾಮಾಜಿಕ ವಿಘಟನೆಗೆ ಪ್ರೇರಣೆ ನೀಡುವ ಬೆಳವಣಿಗೆಗಳಿಗೆ ಕಡಿವಾಣ ಹಾಕುವ ಜವಾಬ್ದಾರಿಯಿಂದ ಸರ್ಕಾರ ನುಣುಚಿಕೊಳ್ಳುವಂತಿಲ್ಲ. ಮುಖ್ಯಮಂತ್ರಿಯಾಗಿ ಆರು ತಿಂಗಳ ಅವಧಿಯನ್ನು ಪೂರೈಸಿರುವ ಬಸವರಾಜ ಬೊಮ್ಮಾಯಿ ಅವರು ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಸವಾಲನ್ನು ಎದುರಿಸಲೇಬೇಕಾಗಿದೆ.

ಒಕ್ಕೂಟ ವ್ಯವಸ್ಥೆಯ ಮೇಲೆ ಮತ್ತೊಂದು ಪ್ರಹಾರಕ್ಕೆ ಸಿದ್ಧತೆ

ಹಳೆಯ ಜಗಳ: ಐಎಎಸ್ ಹೊಸ ದಾಳ

ಅನುರಣನ

ನಾರಾಯಣ ಎ.

ಕೆಲವೊಂದು ಪ್ರಾಥಮಿಕ ವಿಷಯಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ಪ್ರಾರಂಭಿಸೋಣ. ಸ್ಥೂಲವಾಗಿ ಈ ದೇಶದಲ್ಲಿ ಮೂರು ರೀತಿಯ ಸರ್ಕಾರಿ ನೌಕರಿಗಳಿವೆ: ಕೇಂದ್ರ ಸರ್ಕಾರದ ನೌಕರಿ, ರಾಜ್ಯ ಸರ್ಕಾರಗಳ ನೌಕರಿ ಮತ್ತು ಅಖಿಲ ಭಾರತ ಮಟ್ಟದ ನೌಕರಿ.

ಇವುಗಳಲ್ಲಿ ಅಖಿಲ ಭಾರತ ಮಟ್ಟದ ನೌಕರಿಯ (All India Services) ವ್ಯವಸ್ಥೆ ಇದೆಯಲ್ಲ ಅದೊಂದು ವಿಶೇಷವಾಗಿರುವ ಸಾಂವಿಧಾನಿಕ ಸೃಷ್ಟಿ. ಅದು ಯಾರ ಅಧೀನದಲ್ಲಿದೆ ಅಂತ ಕೇಳಿದರೆ, ಅದು ಕೇಂದ್ರ ಸರ್ಕಾರದ ಸಂಪೂರ್ಣ ಅಧೀನದಲ್ಲಿಲ್ಲ. ಅದು ರಾಜ್ಯ ಸರ್ಕಾರಗಳ ಅಧೀನದಲ್ಲೂ ಇಲ್ಲ. ಸಾಂವಿಧಾನಿಕವಾಗಿ ಹೇಳುವುದಾದರೆ, ಅದು ಈ ದೇಶದ ಒಕ್ಕೂಟ ವ್ಯವಸ್ಥೆಯ ಅಧೀನದಲ್ಲಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳ ಹೈಕಮಾಂಡ್ ಅಲ್ಲ. ಈ ಸಾಂವಿಧಾನಿಕ ಸೂಕ್ಷ್ಮತೆಯ ಬಗ್ಗೆ ದಿವ್ಯ ಅವಜ್ಞೆಯನ್ನು ಹೊಂದಿರುವ ಈಗಿನ ಕೇಂದ್ರ ಸರ್ಕಾರವು ಅಖಿಲ ಭಾರತ ನೌಕರರ ಯಾಜಮಾನ್ಯ ಏನಿದ್ದರೂ ತನಗೆ ಸೇರಿದ್ದು ಎನ್ನುವ ಧಿಮಾಕಿನಲ್ಲಿ ರಾಜ್ಯಗಳಿಗೆ ಬರೆದ ಪತ್ರ ಕೇಂದ್ರ-ರಾಜ್ಯಗಳ ನಡುವೆ ಹೊಸತೊಂದು ಸಂಘರ್ಷವನ್ನು ಹುಟ್ಟುಹಾಕುವಂತೆ ತೋರುತ್ತದೆ.

ದಿಟ್ಟ ಪ್ರಾದೇಶಿಕ ನಾಯಕತ್ವ ಆಡಳಿತ ನಡೆಸುತ್ತಿರುವ ರಾಜ್ಯಗಳೆಲ್ಲಾ ಕೇಂದ್ರ ಸರ್ಕಾರದ ಈ 'ದೊಡ್ಡಣ್ಣ-ಧೋರಣೆ'ಯ ವಿರುದ್ಧ ಪ್ರತಿಭಟಿಸುತ್ತಿವೆ. ಕೇಂದ್ರದಲ್ಲಿ ಆಡಳಿತ ನಡೆಸುವ ಪಕ್ಷದ ಸಾಮಂತ ಮುಖ್ಯಮಂತ್ರಿಗಳೆಲ್ಲಾ ತಮ್ಮ ರಾಜ್ಯದ ಅಸ್ಮಿತೆಯನ್ನು ಮತ್ತು ಆತ್ಮಗೌರವವನ್ನು ಪಣಕ್ಕಿಟ್ಟು 'ಯಸ್ ಸಾರ್' ಎನ್ನುತ್ತಿದ್ದಾರೆ.

ಮುಂದುವರಿಯುವುದಕ್ಕೆ ಮುನ್ನ ಇನ್ನೂ ಒಂದಷ್ಟು ಮೂಲ ಮಾಹಿತಿಗಳು: ಅಖಿಲ ಭಾರತ ಮಟ್ಟದ ನೌಕರಿಯಲ್ಲಿ ಮೂರು ರೀತಿಯ ನೌಕರಿಗಳಿವೆ: ಭಾರತೀಯ ಆಡಳಿತ ನೌಕರಿ (ಐಎಎಸ್), ಭಾರತೀಯ ಪೊಲೀಸ್ ನೌಕರಿ (ಐಪಿಎಸ್) ಮತ್ತು ಭಾರತೀಯ ಅರಣ್ಯ ನೌಕರಿ (ಐಎಫ್‌ಎಸ್). ಈ ಮೂರು ರೀತಿಯ ನೌಕರಿ ಮಾಡುವವರನ್ನು ನೇಮಿಸಿಕೊಳ್ಳುವುದು ಕೇಂದ್ರ ಸರ್ಕಾರ. ಆದರೆ ಅವರ ಕಾರ್ಯಕ್ಷೇತ್ರ ರಾಜ್ಯಗಳು. ಅವರಿಗೆ ಹುದ್ದೆಗಳನ್ನು ನೀಡುವುದು ರಾಜ್ಯ ಸರ್ಕಾರಗಳು. ಕೇಂದ್ರ ತನ್ನ ಕೆಲಸಕ್ಕೆಂದು ಯಾರನ್ನೂ ಉಳಿಸಿಕೊಳ್ಳುವುದಿಲ್ಲ. ಅದರ ಕೆಲಸಕ್ಕೆ ಬೇಕಾದಾಗ, ಬೇಕಾದಷ್ಟು ಮಂದಿಯನ್ನು ವಿವಿಧ ರಾಜ್ಯಗಳಿಂದ ನಿಯೋಜನೆಯ ಮೇಲೆ ತರಿಸಿಕೊಳ್ಳುತ್ತದೆ.

ಈ ತನಕ ಹೀಗೆ ಮಾಡಲು ರಾಜ್ಯ ಸರ್ಕಾರಗಳ ಅನುಮತಿ, ಸಂಬಂಧಪಟ್ಟ ನೌಕರರ ಸಮ್ಮತಿ ಬೇಕಾಗಿತ್ತು. ಇನ್ನು ಮುಂದೆ ಇವೆಲ್ಲಾ ಇಲ್ಲ. 'ದೊರೆ'ಯಿಂದ ಕರೆ ಬಂದಾಗ ಸಾಮಂತ ತನ್ನ ಅಧೀನದಲ್ಲಿ ಇರುವ ಸೈನಿಕರನ್ನು ಮರುಮಾತಿಲ್ಲದೆ ಕಳುಹಿಸಿಕೊಡುವ ಹಳೆಯ ಪದ್ಧತಿ ಇತ್ತಲ್ಲ ಹಾಗೆ. ಕೇಂದ್ರ ಕೇಳಿದ ತತ್‌ಕ್ಷಣ ಐಎಎಸ್ ಸಿಬ್ಬಂದಿಯನ್ನು ರಾಜ್ಯ ಸರ್ಕಾರಗಳು 'ಜೀ ಹುಜೂರ್' ಅಂತ ಕಳುಹಿಸಿಕೊಡಬೇಕು- ಸಿಬ್ಬಂದಿ ಗಂಟುಮೂಟೆ ಕಟ್ಟಿ ಹೊರಡಬೇಕು.

ರಾಜ್ಯ ಸರ್ಕಾರಗಳಲ್ಲಿ ದುಡಿಯುವವರೂ ಜನರ ಕೆಲಸವನ್ನೇ ಮಾಡುವುದು, ಕೇಂದ್ರ ಸರ್ಕಾರದಲ್ಲಿ ದುಡಿಯುವವರೂ ಅದನ್ನೇ ಮಾಡುವುದಲ್ಲವೇ? ಮತ್ತೇನೀಗ ಸಮಸ್ಯೆ ಎನ್ನುವ ಪ್ರಶ್ನೆ ಬರುವುದು. ಕೇಂದ್ರ ಸರ್ಕಾರದಲ್ಲಿ ದುಡಿಯಲು ಅಗತ್ಯವಿರುವಷ್ಟು ಐಎಎಸ್ ಸಿಬ್ಬಂದಿ ರಾಜ್ಯಗಳಿಂದ ಬರುತ್ತಿಲ್ಲವಾದ್ದರಿಂದ ಈ ಬದಲಾವಣೆ ಅಂತ ಕೇಂದ್ರ ಸಮಜಾಯಿಷಿ ನೀಡುತ್ತಿದೆ. ಆದರೆ ಇವೆಲ್ಲಾ ಅಷ್ಟೊಂದು ಸರಳವಾದ ವ್ಯವಹಾರಗಳಲ್ಲ. ಇದರ ಹಿಂದೆ ಒಕ್ಕೂಟ ವ್ಯವಸ್ಥೆಯ ಅಳಿವು- ಉಳಿವಿನ ಪ್ರಶ್ನೆಗಳಿವೆ. ಅಧಿಕಾರ ರಾಜಕೀಯದ ಕಪಟ ಲೆಕ್ಕಾಚಾರಗಳಿವೆ. ಹೇಗೆ ಅಂತ ತಿಳಿದುಕೊಳ್ಳಬೇಕಾದರೆ, ಅಖಿಲ ಭಾರತ ನೌಕರಿ ವ್ಯವಸ್ಥೆಯ ಇನ್ನೊಂದು ಸೂಕ್ಷ್ಮವಾದ ಮಗ್ಗುಲನ್ನು ಸ್ವಲ್ಪ ಅರ್ಥಮಾಡಿಕೊಳ್ಳಬೇಕು.

ಅಖಿಲ ಭಾರತ ನೌಕರಿ ವ್ಯವಸ್ಥೆ ಎನ್ನುವುದು ಕೇವಲ ಒಂದು ಆಡಳಿತಾತ್ಮಕ ರಚನೆ ಅಷ್ಟೇ ಅಲ್ಲ. ಅದು ದೇಶದ ಒಕ್ಕೂಟ ವ್ಯವಸ್ಥೆಯ ಅರ್ಥಾತ್ ಸಾರ್ವಭೌಮ ಅಧಿಕಾರವನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೊಳ್ಳುವ ವ್ಯವಸ್ಥೆಯ ಆಧಾರಸ್ತಂಭಗಳಲ್ಲಿ ಒಂದು. ಅದನ್ನು ನಮ್ಮ ವ್ಯವಸ್ಥೆಯ ನಿರ್ಮಾತೃಗಳು ಮತ್ತು ಸಂವಿಧಾನ ರಚನಾಕಾರರು ಅದೆಷ್ಟು ನಾಜೂಕಿನಿಂದ ಮತ್ತು ದೂರದೃಷ್ಟಿಯಿಂದ ರೂಪಿಸಿದ್ದಾರೆ ಎಂದರೆ, ಇಡೀ ಒಕ್ಕೂಟ ವ್ಯವಸ್ಥೆಯ ಹಿತ ಕಾಯಲು ಬೇಕಾದ ಆಡಳಿತಾತ್ಮಕ ಸಮತೋಲನವೊಂದನ್ನು ಈ ನೌಕರಿ ವ್ಯವಸ್ಥೆಯೊಳಗೆ ಅಳವಡಿಸಿಬಿಟ್ಟಿದ್ದಾರೆ. ಅದು ಹೇಗೆಂದರೆ, ಪ್ರತಿಯೊಂದು ರಾಜ್ಯದಲ್ಲಿ ಇರುವ ಐಎಎಸ್, ಐಪಿಎಸ್, ಐಎಫ್‌ಎಸ್ ಸಿಬ್ಬಂದಿ ವರ್ಗದಲ್ಲಿ ವಿವಿಧ ರಾಜ್ಯಗಳಿಂದ ಬಂದವರು ಇರುತ್ತಾರೆ. ಹಾಗೆಂದು ಯಾವುದೇ ರಾಜ್ಯದಲ್ಲಿ ಹೊರಗಿನಿಂದ ಬಂದವರದ್ದೇ ಮೇಲುಗೈ ಆಗಬಾರದಲ್ಲ. ಅದಕ್ಕಾಗಿ ಆಯಾ ರಾಜ್ಯಗಳಿಂದ ಐಎಎಸ್, ಐಪಿಎಸ್‌ಗೆ ನೇರವಾಗಿ ಆಯ್ಕೆಯಾದವರು ಮತ್ತು ಪದೋನ್ನತಿ ಹೊಂದಿದವರು ಇತರ ರಾಜ್ಯಗಳಿಂದ ಬಂದವರ ಸಂಖ್ಯೆಗಿಂತ ಹೆಚ್ಚಿಗೆ ಇರುತ್ತಾರೆ. ಅಂದರೆ, ಪ್ರತಿಯೊಂದು ರಾಜ್ಯದ ಆಡಳಿತದಲ್ಲಿ ಇಡೀ ದೇಶವೇ ಇದ್ದ ಹಾಗೂ ಆಯಿತು, ಕೇಂದ್ರದಿಂದ ನೇಮಕಗೊಂಡವರು ಇದ್ದ ಹಾಗೂ ಆಯಿತು, ಅದೇ ವೇಳೆ ಆಯಾ ರಾಜ್ಯದ ಹಿತಾಸಕ್ತಿಯ ರಕ್ಷಣೆಯೂ ಆಯಿತು.

ಕೇಂದ್ರದಲ್ಲೂ ಅಷ್ಟೇ. ಅಲ್ಲಿ ಎಲ್ಲಾ ರಾಜ್ಯಗಳ ಮೂಲದಿಂದ ಮತ್ತು ವೃಂದಗಳಿಂದ ಬಂದವರೇ ಉನ್ನತ ಹುದ್ದೆಗಳಲ್ಲಿ ಇರುವ ಕಾರಣ ಯಾವುದೇ ಒಂದು ರಾಜ್ಯದ ಅಥವಾ ಕೆಲವೇ ರಾಜ್ಯಗಳ ಹಿತಾಸಕ್ತಿ ಮೇಲುಗೈ ಪಡೆಯದಂತೆಯೂ ಆಯಿತು. ಹೀಗೆ ಕೇಂದ್ರ ಮತ್ತು ರಾಜ್ಯಗಳೆರಡರ ಹಿತಾಸಕ್ತಿಗಳಿಗೆ ಮತ್ತು ದೇಶದ ಎಲ್ಲಾ ರಾಜ್ಯಗಳ ಹಿತಾಸಕ್ತಿಗಳಿಗೆ ಪೂರಕವಾಗುವಂತೆ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ. ಪ್ರತಿಯೊಂದು ರಾಜ್ಯದ ಆಡಳಿತ ವ್ಯವಸ್ಥೆಯಲ್ಲೂ ಇಡೀ ಭಾರತ ಇರಬೇಕು, ಭಾರತ ಸರ್ಕಾರದಲ್ಲಿ ಪ್ರತಿಯೊಂದು ರಾಜ್ಯವೂ ಇರಬೇಕು ಎಂಬಂತೆ ಈ ವ್ಯವಸ್ಥೆಯ ಒಂದೊಂದು ಪದರವನ್ನೂ ಅತ್ಯಂತ ಜಾಣ್ಮೆಯಿಂದ ಹದಗೊಳಿಸಲಾಗಿದೆ. ಭಾರತದ ಸಂವಿಧಾನದ ಅಪ್ರತಿಮ ಆವಿಷ್ಕಾರಗಳಲ್ಲಿ ಇದೂ ಒಂದು.

ಕೇಂದ್ರ ಸರ್ಕಾರ ಈ ಸಾಂವಿಧಾನಿಕ ಸಮತೋಲನವನ್ನು ಕೆಡಿಸಲು ಹೊರಟಿದೆ. ಅಖಿಲ ಭಾರತ ಮಟ್ಟದ ನೌಕರಿಗಳ ಪೈಕಿ ಅತ್ಯಂತ ಪ್ರಮುಖ ಎನ್ನಬಹುದಾದ ಐಎಎಸ್ ನೌಕರಿಯನ್ನು ಕೇಂದ್ರ ಸರ್ಕಾರದ ನೌಕರಿಯನ್ನಾಗಿ ಪರಿವರ್ತಿಸುವ ಹುನ್ನಾರವನ್ನು ಈಗ ಕೇಂದ್ರ ಮುಂದಿಟ್ಟಿದೆ. ಇದೇನಾದರೂ ಜಾರಿಗೆ ಬಂದರೆ ಐಎಎಸ್ ಸಿಬ್ಬಂದಿ ಮೇಲೆ ರಾಜ್ಯ ಸರ್ಕಾರಗಳ ನಿಯಂತ್ರಣ ತಪ್ಪುತ್ತದೆ. ಐಎಎಸ್ ಸಿಬ್ಬಂದಿ ಕೇಂದ್ರ ಸರ್ಕಾರಕ್ಕೆ ತಗ್ಗಿಬಗ್ಗಿ ಇರಬೇಕಾಗುತ್ತದೆ.

ಒಂದು ಕಾಲದಲ್ಲಿ ಕೇಂದ್ರ ಸರ್ಕಾರದಲ್ಲಿ ಕಾರ್ಯದರ್ಶಿಯ ಹುದ್ದೆ ಪಡೆಯುವುದು ಐಎಎಸ್ ಸಿಬ್ಬಂದಿಗೆ ಅತ್ಯಂತ ಪ್ರತಿಷ್ಠೆಯ ವಿಷಯವಾಗಿತ್ತು. ಈಗ ಹಾಗಿಲ್ಲವಂತೆ. ಕಳೆದ ಐದಾರು ವರ್ಷಗಳಿಂದ ಬಹುಪಾಲು ಐಎಎಸ್ ಮಂದಿ 'ನಮಗೆ ಕೇಂದ್ರದಲ್ಲಿ ಕೆಲಸ ಮಾಡುವ ಉಸಾಬರಿಯೇ ಬೇಡ' ಅಂತ ಇದ್ದಾರೆ. ಹಾಗಾಗಿ ಕೇಂದ್ರದಲ್ಲಿ ಐಎಎಸ್ ಸಿಬ್ಬಂದಿಯ ಕೊರತೆ ಕಾಣಿಸಿರುವುದು. ಯಾಕೆ ಹೀಗಾಗಿದೆ ಅಂತ ಎಲ್ಲರಿಗೂ ಗೊತ್ತು. ಆದರೆ ಇದನ್ನೇ ನೆಪವಾಗಿಟ್ಟುಕೊಂಡ ಕೇಂದ್ರ ಸರ್ಕಾರವು ಎಪ್ಪತ್ತು ವರ್ಷಗಳಲ್ಲಿ ರೂಪುಗೊಂಡ ಅದ್ಭುತವಾದ ವ್ಯವಸ್ಥೆಯನ್ನೇ ದುರ್ಬಲಗೊಳಿಸಲು ಹೊರಟಿದೆ.

ಇಲ್ಲಿ ಇನ್ನೊಂದು ರಾಜಕೀಯ ಆಯಾಮವನ್ನೂ ಗಮನಿಸಬೇಕಿದೆ. ಕೇಂದ್ರದಲ್ಲಿ ಅಧಿಕಾರ ನಡೆಸುವ ಬಿಜೆಪಿ ಇಡೀ ದೇಶದಲ್ಲೇ ಅತ್ಯಂತ ಜನಪ್ರಿಯ ನಾಯಕರೊಬ್ಬರನ್ನು ಹೊಂದಿದೆ. ಆದರೆ ಆ ಜನಪ್ರಿಯತೆ ಹಲವಾರು ರಾಜ್ಯಗಳಲ್ಲಿ ಪ್ರಯೋಜನಕ್ಕೆ ಬರುತ್ತಿಲ್ಲ. ವಿರೋಧ ಪಕ್ಷಗಳ ಬಲಿಷ್ಠ ನಾಯಕರು ಮುಖ್ಯಮಂತ್ರಿಗಳಾಗಿರುವ ರಾಜ್ಯಗಳನ್ನು ಏನೇ ಮಾಡಿದರೂ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಆಗುತ್ತಿಲ್ಲ. ಹಿಂದಿನಂತೆ ಈಗ ರಾಷ್ಟ್ರಪತಿ ಆಡಳಿತ ಹೇರುವ ಹಾಗಿಲ್ಲ. ಕೇಂದ್ರ ತನಿಖಾ ಸಂಸ್ಥೆಗಳನ್ನು ಛೂ ಬಿಡುವ ರಾಜಕಾರಣಕ್ಕೆ ಕೂಡಾ ಹಿನ್ನಡೆಯಾಗುತ್ತಿದೆ.

ಪ್ರಬಲ ಮುಖ್ಯಮಂತ್ರಿಗಳೆಲ್ಲಾ ಇದಕ್ಕೆ ಪ್ರತಿಯಾಗಿ ರಾಜ್ಯಮಟ್ಟದ ತನಿಖಾ ಸಂಸ್ಥೆಗಳನ್ನು ಆಯಾ ರಾಜ್ಯಗಳ ಬಿಜೆಪಿ ನಾಯಕರ ವಿರುದ್ಧ ಬಳಸಿಕೊಳ್ಳಲು ಆರಂಭಿಸಿದ್ದಾರೆ. ಏಟಿಗೆ ಎದುರೇಟು ಬೀಳತೊಡಗಿದೆ. ಹಾಗಾಗಿ ರಾಜ್ಯಗಳನ್ನು ಹತೋಟಿಗೆ ತರಲು ಇನ್ನುಳಿದ ಅಸ್ತ್ರ ಎಂದರೆ ಒಕ್ಕೂಟ ವ್ಯವಸ್ಥೆಯನ್ನು ಪರೋಕ್ಷವಾಗಿ ಇನ್ನಷ್ಟು ದುರ್ಬಲಗೊಳಿಸುವುದು. ಈ ತಂತ್ರದ ಅಂಗವಾಗಿ ಈಗ ಕೇಂದ್ರದ ಕಣ್ಣು ರಾಜ್ಯಗಳ ಸಚಿವಾಲಯದ (secretariat) ಮೇಲೆ ಬಿದ್ದಿದೆ.

ಚುರುಮುರಿ

ಪ್ರಮಾಣವಚನ

• ಆನಂದ

'ಇದೇನ್ರೀ ಈ ಬೆಳವಣಿಗೆ? ಹಿಂದೆಲ್ಲ ಶಾಸಕರನ್ನು ರೆಸಾರ್ಟಿಗೆ ಕೊಂಡೊಯ್ಯುತ್ತಿದ್ದರು, ಕುರಿಗಳನ್ನ ವ್ಯಾನಿನಲ್ಲಿ ಹಾಕಿಕೊಂಡು ಹೋದಂತೆ. ಈಗ ಗೋವಾದಲ್ಲಿ ಭಾವಿ ಶಾಸಕರನ್ನು ದೇವಸ್ಥಾನಕ್ಕೆ, ಮಸೀದಿಗೆ, ಚರ್ಚ್‌ಗೆ ಕರೆದೊಯ್ಯುತ್ತಿದ್ದಾರೆ' ಹೆಂಡತಿಯ ಉದ್ಗಾರ.

'ಅಲ್ಲೇನೋ ಪ್ರಮಾಣ ಮಾಡಿಸ್ತಾರಂತೆ' ಎಂದೆ.

'ಶಾಸಕರಾದ ಮೇಲೆ ತಾನೆ ಪ್ರಮಾಣವಚನ ಸ್ವೀಕಾರ ಮಾಡೋದು' ಎಂದು ಕೇಳಿದಳು.

'ಆಯ್ಕೆಯಾದ ಮೇಲೆ ಪಕ್ಷವನ್ನು ತೊರೆಯೊಲ್ಲ ಅಂತ ಪ್ರಮಾಣ ಮಾಡಿಸೋದಿಕ್ಕೆ'.

'ಓ! ಆ್ಯಂಟಿಸಿಪೇಟರಿ ಬೇಲ್ ತರಹ. ಇದು ಮುಂದುವರಿದರೆ ನಾಳೆ ಕರ್ನಾಟಕದಲ್ಲಿ ಗೆದ್ದವರನ್ನೆಲ್ಲ ರೆಸಾರ್ಟಿಗೆ ಕರೆದುಕೊಂಡು ಹೋಗೋಕೆ ಮುಂಚೆ ದೇವಸ್ಥಾನಕ್ಕೆ ಕರೆದೊಯ್ಯುತ್ತಾರೇನೋ?'

'ದೇವರಿಗೇನು ಕೆಲಸ?'

'ನನ್ನನ್ನು ಮಂತ್ರಿ ಮಾಡಿ ಅಂತ ಹಟ ಮಾಡೊಲ್ಲ, ಚಳವಳಿ ಮಾಡಿಸೊಲ್ಲ, ಸ್ವಾಮೀಜಿಗಳಿಂದ ಒತ್ತಡ ಹಾಕ್ಸಲ್ಲ ಅಂತ ಪ್ರಮಾಣ ಮಾಡಿಸೋದಿಕ್ಕೆ'.

'ಹಾಗೆಯೇ, ಮಂತ್ರಿ ಮಾಡಿದರೂ ಇಂತಹುದೇ ಖಾತೆ ಕೊಡಬೇಕು ಅಂತ ಕ್ಯಾತೆ ತೆಗೆಯೊಲ್ಲ ಅಂತ ಪ್ರಮಾಣ ಮಾಡಿಸೋಕೂ ದೇವರ ಮುಂದೆ ಕರೆದೊಯ್ಯಬಹುದು. ಈ ಪ್ರಮಾಣ ಮಾಡೋದಿಕ್ಕೆ ಬೇರೆ ಬೇರೆ ದೇವರುಗಳ ಮೊರೆ ಹೋಗಬೇಕೊ, ಸಿಂಗಲ್ ದೇವರು ಸಾಕೊ?'

'ಅಂದರೆ?'

'ಪಕ್ಷಾಂತರ ಮಾಡೊಲ್ಲ ಅನ್ನೋದಿಕ್ಕೆ ಒಬ್ಬ ದೇವರ ಮುಂದೆ, ಮಂತ್ರಿ ಮಾಡಿ ಅಂತ ಕೇಳಲ್ಲ ಅನ್ನೋದಿಕ್ಕೆ ಮತ್ತೊಬ್ಬ ದೇವರು, ಮಂತ್ರಿಯಾದ ಮೇಲೆ ನಿರ್ದಿಷ್ಟ ಖಾತೇನೇ ಬೇಕು ಅಂತ ಕೇಳದಿರೋಕ್ಕೆ ಇನ್ನೊಬ್ಬ ದೇವರು...'

'ಹೌದು, ಕೆಲವರಿಗೆ ತಿರುಪತೀನೆ ಬೇಕು, ಕೆಲವರಿಗೆ ಧರ್ಮಸ್ಥಳ, ಉಳಿದವರಿಗೆ ನಂಜನಗೂಡು... ಆಗೇನು ಮಾಡೋದು?'

'ಎಲ್ಲರನ್ನೂ ಎಲ್ಲೆಡೆ ಕರೆದುಕೊಂಡು ಹೋದರಾಯಿತು. ಆಗ ಎಲ್ಲ ದೇವರ ರಕ್ಷಣೆ ಹೈಕಮಾಂಡಿಗೆ ಇರುತ್ತದೆ. ಪಾಪ! ದೇವರಿಗೂ ರಾಜಕೀಯದ ಕಾಟ ತಪ್ಪೊಲ್ಲ'.

ದಿನದ ಟ್ವೀಟ್

ಸಂವಿಧಾನ ಉಳಿಸಿ

ನಮ್ಮ ಭಾರತೀಯ ಸಂವಿಧಾನದ ಪ್ರಸ್ತಾವನೆಯು 'ಭಾರತದ ಪ್ರಜೆಗಳಾದ ನಾವು' ಎಂದು ಆರಂಭವಾಗುತ್ತದೆ. ಆದರೆ ರಾಜಕೀಯ ದ್ವೇಷ ಪ್ರವರ್ತಕರು ಕೆಲವರು ನಮ್ಮನ್ನು ವಿಭಜಿಸುತ್ತಾರೆ. ಸಂವಿಧಾನದಲ್ಲಿ ನಂಬಿಕೆ ಇರಿಸಿ, ದ್ವೇಷ ಪ್ರವರ್ತಕರಲ್ಲಿ ಅಲ್ಲ. ಭಾರತದ ಸಂವಿಧಾನವನ್ನು ಉಳಿಸುವ ಸಲುವಾಗಿ ನಿಮ್ಮ ಮತವನ್ನು ಬಳಸಿ ಮತ್ತು ಸಂವಿಧಾನವು 'ಭಾರತ'ವನ್ನು ಉಳಿಸುತ್ತದೆ. #RepublicDayIndia

ಸೈಯದ್ ಅಹಮದ್ ಅಲಿ, ಮನೋವೈದ್ಯ, ಲೇಖಕ

ಕಿಡಿನುಡಿ

ಕಾಂಗ್ರೆಸ್ ಸೇರಲು ಎಷ್ಟು ಮಂದಿ ಸಂಪರ್ಕಿಸಿದ್ದಾರೆ, ಯಾರ್‍ಯಾರು ಎಂಬುದನ್ನು ಹೇಳಲ್ಲ ಎಂದು ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಹೇಳಿದ್ದಾರೆ. ಕಾಂಗ್ರೆಸ್ ಕೊಳೆತ ಹಣ್ಣು, ಬಿಜೆಪಿಯು ಮೋದಿ ನೇತೃತ್ವದ ಸೇಬು ಹಣ್ಣು. ಕೊಳೆತ ಹಣ್ಣನ್ನು ಯಾರಾದರೂ ಇಷ್ಟಪಡುತ್ತಾರಾ? ಕಾಂಗ್ರೆಸ್‌ಗೆ ಬೇಡಿಕೆ ಸೃಷ್ಟಿಸಿಕೊಳ್ಳಲು ಈ ರೀತಿ ಆಟವಾಡುತ್ತಾರೆ.

ಕೆ.ಎಸ್.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 27-1-1997

• **ಆಲಮಟ್ಟಿ: ತಜ್ಞರ ವರದಿ ರಾಜ್ಯಕ್ಕೆ ಪ್ರತಿಕೂಲ**

ರಾಯಚೂರು, ಜ. 26– ಆಲಮಟ್ಟಿ ವಿವಾದದ ಹಿನ್ನೆಲೆಯಲ್ಲಿ ಸಂಯುಕ್ತ ರಂಗದ ನಾಲ್ವರು ಮುಖ್ಯಮಂತ್ರಿಗಳು ರಚಿಸಿದ್ದ ತಜ್ಞರ ಸಮಿತಿಯು ನೀಡಿರುವ ವರದಿ ರಾಜ್ಯಕ್ಕೆ ಪ್ರತಿಕೂಲವಾಗಿದೆ ಎಂಬ ಬಲವಾದ ಶಂಕೆಯನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಚ್.ಕೆ. ಪಾಟೀಲ್ ಅವರು ಇಲ್ಲಿ ವ್ಯಕ್ತಪಡಿಸಿದರು.

ವರದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, 'ರಾಜ್ಯದ ನೀರಾವರಿ ಯೋಜನೆಗಳನ್ನು ವೀಕ್ಷಿಸಿ ಹೋದ ಈ ಸಮಿತಿ ಈಚೆಗೆ ಕಲ್ಕತ್ತದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಅವರಿಗೆ ವರದಿ ನೀಡಿದೆ. ಕರ್ನಾಟಕವು ಕೃಷ್ಣಾ ನದಿ ನೀರನ್ನು ತನ್ನ ಪಾಲಿಗಿಂತ ಹೆಚ್ಚು ಬಳಸಿಕೊಳ್ಳುತ್ತಿದೆ ಎಂಬಂಶ ಇದರಲ್ಲಿ ಇರುವ ಬಗ್ಗೆ ಈಗಾಗಲೇ ಆಂಧ್ರ ಮೂಲದ ಪತ್ರಿಕೆಗಳಲ್ಲಿ ವರದಿಗಳು ಬರಲಾರಂಭಿಸಿವೆ. ಈ ವರದಿಗಳು ಸತ್ಯವಾಗಿದ್ದರೆ ಕರ್ನಾಟಕದ ಪಾಲಿಗೆ ನಿಜವಾಗಿಯೂ ಕಳವಳಕಾರಿ ವಿಚಾರವಾಗಿದೆ' ಎಂದರು.

• **ಮಲ ಹೊರುವ ಪದ್ಧತಿಗೆ ನಿಷೇಧ**

ನವದೆಹಲಿ, ಜ. 26 (ಪಿಟಿಐ)– ಎಲ್ಲಾ ಕೇಂದ್ರಾಡಳಿತ ಪ್ರದೇಶ ಹಾಗೂ ಆರು ರಾಜ್ಯಗಳಲ್ಲಿ ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ಸರ್ಕಾರ ಇಂದಿನಿಂದ ನಿಷೇಧಿಸಿದೆ.

ಕರ್ನಾಟಕ, ಆಂಧ್ರ ಪ್ರದೇಶ, ಗೋವಾ, ಮಹಾರಾಷ್ಟ್ರ, ತ್ರಿಪುರಾ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಈ ಅಮಾನವೀಯ ಪದ್ಧತಿ ನಿಷೇಧ ಜಾರಿಗೆ ಬರಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಮಲ ಹೊರುವ ಪದ್ಧತಿ ನಿಷೇಧ ಕಾಯ್ದೆಯನ್ನು ಪಂಜಾಬ್, ಅಸ್ಸಾಂ, ಹರಿಯಾಣ ರಾಜ್ಯಗಳು ಈಗಾಗಲೇ ಜಾರಿಗೆ ತಂದಿವೆ.

• **ಬೊಕ್ಕಸಕ್ಕೆ ಅಧಿಕ ಹೊರೆ ಇಲ್ಲದಂತೆ ಹೊಸ ಜಿಲ್ಲೆ ರಚನೆ ಸಾಧ್ಯತೆ**

ಬೆಂಗಳೂರು, ಜ. 26– 'ರಾಜ್ಯದ ಬೊಕ್ಕಸದ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳದಂತೆ ಹೊಸ ಜಿಲ್ಲೆಗಳನ್ನು ರಚಿಸಲು ಸಾಧ್ಯವಿದೆ'.

ಗುಪ್ತಚರ ಇಲಾಖೆ ಸರ್ಕಾರಕ್ಕೆ ಕಳುಹಿಸಿದ ಅಧಿಕೃತ ಟಿಪ್ಪಣಿಯೊಂದರಲ್ಲಿ ಈ ವಿಷಯವನ್ನು ಪ್ರತಿಪಾದಿಸಲಾಗಿದ್ದು, ಹೊಸ ಜಿಲ್ಲಾ ರಚನೆಯಿಂದ ಆಗಬಹುದಾದ ವೆಚ್ಚಗಳನ್ನು ತಗ್ಗಿಸಲು ಕೆಲ ಸಲಹೆ ಸೂಚನೆಗಳನ್ನು ಈ ಸಂಬಂಧ ನೀಡಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಆಡಳಿತಾತ್ಮಕ ಅನುಕೂಲದ ದೃಷ್ಟಿಯಿಂದ ಗದಗ, ಹಾವೇರಿ, ಬಾಗಲಕೋಟೆ, ಗೋಕಾಕ, ಯಾದಗಿರಿ, ಕೊಪ್ಪಳ, ದಾವಣಗೆರೆ, ಚಾಮರಾಜನಗರ ಮತ್ತು ಉಡುಪಿ ಜಿಲ್ಲೆಗಳನ್ನು ರಚಿಸಲು ಜ. 17ರಂದು ನಡೆದ ಸರ್ವಪಕ್ಷ ಸಭೆ ಒಪ್ಪಿಗೆ ನೀಡಿತ್ತು.

ಸಂಗತ

'ತ್ರಿಭಾಷಾ' ಸಮನ್ವಯ ಸೂತ್ರ

ನಮ್ಮ ಆತ್ಮದ ಭಾಷೆ ಸಂಸ್ಕೃತದ ಬಗೆಗೇಕೆ ಕೆಲವರಿಗೆ ಸೀಮಿತ ಆಲೋಚನೆ?

• ಡಾ. ಸಿ.ಎನ್. ಅಶ್ವತ್ಥನಾರಾಯಣ

'ದೇಶವಾಸಿಗಳನ್ನೆಲ್ಲ ಬೆಸೆಯುವ ಒಂದು ರಾಷ್ಟ್ರಭಾಷೆ ನಮಗೆ ಬೇಕಿದ್ದು, ಇದಕ್ಕೆ ಸಂಸ್ಕೃತ ಸೂಕ್ತವಾಗಿದೆ' ಎಂದು ಹೇಳಿದ್ದರು ಡಾ. ಬಿ.ಆರ್.ಅಂಬೇಡ್ಕರ್. ರಾಜ್ಯ ಸರ್ಕಾರವು 'ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ'ಕ್ಕೆ 100 ಎಕರೆ ವಿಸ್ತೀರ್ಣದಲ್ಲಿ ಕ್ಯಾಂಪಸ್ ನಿರ್ಮಿಸಲು ಇತ್ತೀಚೆಗೆ ಶಂಕುಸ್ಥಾಪನೆ ನೆರವೇರಿಸಿದ ಬೆನ್ನಲ್ಲೇ ಕೆಲವರು, 'ಕನ್ನಡಿಗರ ತೆರಿಗೆ ಹಣದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಬೇಡ' ಎಂದು ಹುಯಿಲೆಬ್ಬಿಸುತ್ತಿದ್ದಾರೆ.

ಒಂದು ಮಾತನ್ನಿಲ್ಲಿ ಹೇಳಬೇಕು. ಕನ್ನಡ ನಮ್ಮ ಹೃದಯದ ಭಾಷೆ. ಅದು ನಮ್ಮ ಚೈತನ್ಯ, ಚಿಂತನೆ ಮತ್ತು ಕರ್ತವ್ಯಗಳ ಅವಿಭಾಜ್ಯ ಅಂಗ. ಭಾರತೀಯ ಭಾಷೆಗಳಲ್ಲೇ ಮಕ್ಕಳ ಕಲಿಕೆ ನಡೆಯಬೇಕು ಎಂಬ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಕ್ಕೆ ತಕ್ಕಂತೆ ನಾವು ಎಂಜಿನಿಯರಿಂಗ್‌ನಲ್ಲೂ ಕನ್ನಡ ಮಾಧ್ಯಮ ತಂದಿದ್ದೇವೆ. ಡಿಪ್ಲೊಮಾ, ಪಾಲಿಟೆಕ್ನಿಕ್‌ನಲ್ಲೂ ಕನ್ನಡದಲ್ಲಿ ಸಹ ಬೋಧಿಸುವಂತೆ ಸೂಚಿಸಿದ್ದೇವೆ. ಕನ್ನಡದಲ್ಲೇ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟಿದ್ದೇವೆ (ಪದವಿಯಲ್ಲೂ ಕನ್ನಡ ಕಲಿಕೆ ಕಡ್ಡಾಯಗೊಳಿಸಿದ್ದೇವೆ. ಇದು ಸದ್ಯಕ್ಕೆ ನ್ಯಾಯಾಲಯದ ಅಂತಿಮ ತೀರ್ಪಿನ ವಿವೇಚನೆಗೆ ಒಳಪಟ್ಟಿದೆ).

ಅಂದಮಾತ್ರಕ್ಕೆ ನಾವು ಸಂಸ್ಕೃತವನ್ನು ನಿರಾಕರಿಸಬೇಕೆ? ಗಾಂಧೀಜಿ ತಮ್ಮ 'ಹಿಂದ್ ಸ್ವರಾಜ್' ಕೃತಿಯಲ್ಲಿ 'ಬ್ರಿಟಿಷರ ಇಂಗ್ಲಿಷ್ ಶಿಕ್ಷಣವನ್ನು ಬಿಸುಡಬೇಕು. ಅದು ನಮ್ಮನ್ನು ಗುಲಾಮರನ್ನಾಗಿಯೇ ಇಡುತ್ತದೆ. ನಮಗೆ ಆತ್ಮಾಭಿಮಾನವಿದ್ದರೆ ಸಂಸ್ಕೃತವನ್ನೇ ಎಲ್ಲೆಡೆ ಅಳವಡಿಸಿಕೊಳ್ಳಬೇಕು' ಎಂದಿದ್ದಾರೆ.

ದೇಶದಲ್ಲಿರುವ 4,000ಕ್ಕೂ ಹೆಚ್ಚಿನ ಭಾಷೆಗಳಿಗೆ ಮಾತೃಸ್ಥಾನದಲ್ಲಿ ಇರುವುದು ಸಂಸ್ಕೃತವೇ. ಲಿಪಿ, ಕಾಗುಣಿತ, ವ್ಯಾಕರಣ ಶಾಸ್ತ್ರ, ಕಾವ್ಯಮೀಮಾಂಸೆ ಇವೆಲ್ಲವನ್ನೂ ಕನ್ನಡದಂಥ ಭಾಷೆಗಳು ಸಂಸ್ಕೃತದಿಂದ ಸ್ವೀಕರಿಸಿವೆ. ವೇದೋಪನಿಷತ್ತುಗಳು, ಆಯುರ್ವೇದ, ಮಹಾಕಾವ್ಯಗಳು, ವಿಜ್ಞಾನ, ಯೋಗಶಾಸ್ತ್ರ, ಜ್ಯೋತಿರ್ವಿಜ್ಞಾನಗಳ ಮೂಲಗ್ರಂಥಗಳೆಲ್ಲವೂ ಇರುವುದು ಸಂಸ್ಕೃತದಲ್ಲೇ. ನಮ್ಮ ಪ್ರಾದೇಶಿಕ ನುಡಿಗಳ ಒಕ್ಕೂಟವನ್ನು ಆಳದಲ್ಲಿ ಭಾಷಿಕವಾಗಿ ಬೆಸೆದಿರುವುದು ಇದೇ ಭಾಷೆ. ಹೀಗೆ ನೋಡಿದರೆ, ಇದು ನಮ್ಮ ಆತ್ಮದ ಭಾಷೆ!

ಕನ್ನಡದ ಮೇರುಪ್ರತಿಭೆಗಳಾದ ಪಂಪ, ರನ್ನ, ಜನ್ನ, ರತ್ನಾಕರವರ್ಣಿ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ, ಕುವೆಂಪು, ಡಿವಿಜಿ, ಗೋಪಾಲಕೃಷ್ಣ ಅಡಿಗರ ಕಾವ್ಯಗಳನ್ನೆಲ್ಲ ನೋಡಿದರೆ, ಇವರೆಲ್ಲ ಸಂಸ್ಕೃತದಿಂದ ಎಷ್ಟೊಂದು ಪ್ರಭಾವಿತರಾಗಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅವರೆಲ್ಲ ಸಂಸ್ಕೃತವನ್ನು ಕಲಿತಿದ್ದರಿಂದ ಕನ್ನಡಕ್ಕೆ ಲಾಭವೇ ಆಗಿದೆ.

ಸಂಸ್ಕೃತವು ವಿಯೆಟ್ನಾಂ, ಇಂಡೊನೇಷ್ಯಾ, ಮಲೇಷ್ಯಾ, ಥಾಯ್ಲೆಂಡ್, ಕಾಂಬೋಡಿಯಾಗಳ ಸಂಸ್ಕೃತಿಯನ್ನು ಹೇಗೆ ರೂಪಿಸಿದೆ ಎನ್ನುವುದನ್ನು ಅದನ್ನು ವಿರೋಧಿಸುತ್ತಿರುವವರು ಯಾರೂ ಅರಿತಿಲ್ಲ. ಜಪಾನ್ ಅನ್ನೂ ಧಾರ್ಮಿಕವಾಗಿ ರೂಪಿಸಿರುವುದು ಇದೇ ಭಾಷೆ! ಅರಬ್ ದೇಶಗಳು ಮತ್ತು ಚೀನಾವು ಸಂಸ್ಕೃತ ಗ್ರಂಥಗಳನ್ನು ತೆಗೆದುಕೊಂಡು ಹೋಗಿ, ಅವೆಲ್ಲವನ್ನೂ ತಮ್ಮ ಭಾಷೆಗೆ ಅನುವಾದಿಸಿಕೊಂಡು ಇವತ್ತು ಗಣಿತ, ಯಂತ್ರವಿಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಬೆಳೆದಿವೆ. ಯುರೋಪ್ ಕೂಡ ಇದಕ್ಕೆ ಹೊರತಲ್ಲ.

ಕೆಲ ವರ್ಷಗಳ ಹಿಂದೆ ಭಾರತೀಯರಾದ ಮಂಜುಲ್ ಭಾರ್ಗವ ಅವರು 'ಗಣಿತ ಕ್ಷೇತ್ರದ ನೊಬೆಲ್' ಎನಿಸಿರುವ ಫೀಲ್ಡ್ ಮೆಡಲ್ ಪುರಸ್ಕಾರಕ್ಕೆ ಪಾತ್ರರಾದರು. ಆಗ ಅವರು 'ಪೂರ್ವಸೂರಿಗಳಾದ ಪಿಂಗಳ, ಹೇಮಚಂದ್ರ, ಬ್ರಹ್ಮಗುಪ್ತ ಮುಂತಾದವರು ಗಣಿತವನ್ನು ಕುರಿತು ಸಂಸ್ಕೃತದಲ್ಲಿ ಬರೆದಿಟ್ಟು ಹೋಗಿರುವ ಗ್ರಂಥಭಂಡಾರವೇ ನನ್ನ ಸಾಧನೆಗೆ ಕಾರಣ. ಇವುಗಳ ಅನುಸಂಧಾನದ ಮೂಲಕ ಎಂತಹ ಕ್ಲಿಷ್ಟ ಸಮಸ್ಯೆಗಳನ್ನಾದರೂ ಸುಲಭವಾಗಿ ಬಿಡಿಸಬಹುದು' ಎಂದಿದ್ದರು. ಇಂತಹ ಅಪಾರವಾದ ಜ್ಞಾನಸಂಪತ್ತು ಕರ್ನಾಟಕದ ಯುವಜನರಿಗೂ ಸಿಗಬೇಕು ಎನ್ನುವುದೇ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯ ಆಶಯಗಳಲ್ಲಿ ಪ್ರಮುಖವಾಗಿದೆ.



ಕನ್ನಡಿಗರಾಗಿ ನಾವು ಕನ್ನಡವನ್ನೂ ಭಾರತೀಯರಾಗಿ ಸಂಸ್ಕೃತವನ್ನೂ ಕಲಿಯಬೇಕು. ಜೊತೆಗೆ ಹೊಸ ಜಾಗತಿಕ ವ್ಯವಸ್ಥೆಯಲ್ಲಿ ಇಂಗ್ಲಿಷಿಗೂ ತೆರೆದುಕೊಳ್ಳಬೇಕು. ಹೃದಯದ ಭಾಷೆ (ಕನ್ನಡ) + ಆತ್ಮದ ಭಾಷೆ (ಸಂಸ್ಕೃತ) + ಮಿದುಳಿನ ಭಾಷೆ (ಇಂಗ್ಲಿಷ್) ನಮ್ಮ ಉಳಿವಿಗೂ ಬೆಳವಿಗೂ ಸೂಕ್ತವೆನ್ನುವುದರಲ್ಲಿ ಎರಡು ಮಾತಿಲ್ಲ.

ಕುವೆಂಪು ತಮ್ಮ 'ಸಂಸ್ಕೃತ ಮಾತೆ' ಕವನದಲ್ಲಿ 'ಆರ್ಯರಾಗಿಹ ನಾವು ನಿನ್ನ ಮೊಲೆವಾಲ ಸವಿಯಿಲ್ಲದೆಯೆ ಬದುಕುವೆವೆ?/ ನೀನಿಲ್ಲದೆಲ್ಲಿಯದು ಭರತ ಖಂಡದ ಬದುಕು, ಸಂಪತ್ತು, ಸಂಸ್ಕೃತಿ/... ಹೇ ದಿವ್ಯ ಸಂಸ್ಕೃತ ಹಿಮಾಚಲವೇ... ಬೆಳೆಯುತಿಹ ನಿನ್ನೀ ಹಸುಳೆಗಳಿಗೆ ತಾವ ಕೊಡು, ಹರಕೆಗೈ; ಸ್ತನ್ಯಪಾನವ ನೀಡು, ಹೇ ಜನನಿ!' ಎಂದು ಪ್ರಾರ್ಥಿಸಿದ್ದಾರೆ. ನಮ್ಮ ಸರ್ಕಾರದ ಆಶಯವೂ ಇದೇ ಆಗಿದೆ.

ಸಂಸ್ಕೃತ ವಿಶ್ವವಿದ್ಯಾಲಯವನ್ನು ಹೊಸದಾಗಿ ಆರಂಭಿಸಲಾಗುತ್ತಿದೆ ಎಂದು ಕೆಲವರು ತಪ್ಪು ತಿಳಿದಿದ್ದಾರೆ. ವಾಸ್ತವವಾಗಿ ಇದು ಅಸ್ತಿತ್ವಕ್ಕೆ ಬಂದು 13-14 ವರ್ಷಗಳೇ ಆಗಿವೆ. ಇದಕ್ಕೊಂದು ಒಳ್ಳೆಯ ಕ್ಯಾಂಪಸ್ ಇರಬೇಕಾಗಿತ್ತು. ಹಿಂದಿನ ಸರ್ಕಾರಗಳು ಅದನ್ನು ಮಾಡಲಿಲ್ಲ. ನಮ್ಮ ಸರ್ಕಾರ ಈ ದಿಸೆಯಲ್ಲಿ ಮುಂದಡಿ ಇಟ್ಟಿದೆ. ಪ್ರಜಾಪ್ರಭುತ್ವದಲ್ಲಿ ಪರ-ವಿರೋಧಗಳಿಗೆಲ್ಲ ಜಾಗ ಇದ್ದೇಇದೆ. ಇದೇ ಈ ವ್ಯವಸ್ಥೆಯ ಸೌಂದರ್ಯ. ಆದರೆ, ತಿಕ್ಕಾಟದ ಸ್ವಪ್ರತಿಷ್ಠೆಯಲ್ಲಿ ಸಂಸ್ಕೃತವನ್ನು ಬಲಿಪೀಠದ ಮೇಲೆ ಕೂರಿಸಬಾರದಷ್ಟೆ.

ಲೇಖಕ: ಉನ್ನತ ಶಿಕ್ಷಣ ಸಚಿವ

ವಾಚಕರ ವಾಣಿ

ಎನ್‌ಸಿಸಿ ಪ್ರಮಾಣಪತ್ರಕ್ಕೆ ಇರಲಿ ಕಿಮ್ಮತ್ತು

ರಾಜ್ಯದ ಆಯ್ದ 75 ಸರ್ಕಾರಿ ಶಾಲೆಗಳನ್ನು 'ನೇತಾಜಿ ಅಮೃತ ಶಾಲೆಗಳು' ಎಂದು ಘೋಷಿಸಿ, ಈ ಶಾಲೆಗಳಲ್ಲಿ ಎನ್‌ಸಿಸಿ ಘಟಕಗಳನ್ನು ಸ್ಥಾಪಿಸುವ ಸರ್ಕಾರದ ನಿರ್ಧಾರ (ಪ್ರ.ವಾ., ಜ. 26) ಸ್ವಾಗತಾರ್ಹ. ಆದರೆ ಈ ಯೋಜನೆಯು ವಿದ್ಯಾರ್ಥಿಗಳಿಗೆ ಉಪಯೋಗಕ್ಕೆ ಬರುವಂತೆ ಆಗಬೇಕು. ನಾನು ಮಾಧ್ಯಮಿಕ ಶಾಲೆಯಿಂದ ಪದವಿವರೆಗೂ ಎನ್‌ಸಿಸಿ ತರಬೇತಿ ಪಡೆದೆ. ಆದರೆ ಸೈನಿಕ ಹುದ್ದೆಗೆಂದು ಸಂದರ್ಶನಕ್ಕೆ ಹೋದಾಗ ಎನ್‌ಸಿಸಿ ಪ್ರಮಾಣಪತ್ರವನ್ನು ಹತ್ತಿರ ಕೂಡ ಸೇರಿಸಲಿಲ್ಲ. ಇಂತಹ ತರಬೇತಿಯು ಉಪಯೋಗಕ್ಕೆ ಬಾರದಿದ್ದರೆ ಯಾವ ಮಹತ್ಸಾಧನೆಗಾಗಿ ಅದಕ್ಕೆ ಕೋಟ್ಯಂತರ ರೂಪಾಯಿ ವ್ಯಯಿಸಬೇಕು?

ಸೈನಿಕ ಹುದ್ದೆಯ ಸಂದರ್ಶನದಲ್ಲಿ ಎತ್ತರದ ಪ್ರಶ್ನೆಯೂ ಎದುರಾಯಿತು. ಆದ್ದರಿಂದ ಇನ್ನು ಮುಂದೆ ಎನ್‌ಸಿಸಿಗೆ ವಿದ್ಯಾರ್ಥಿಗಳ ಎತ್ತರ, ಪರ್ಸನಾಲಿಟಿ ಎಲ್ಲವನ್ನೂ ಪರಿಶೀಲಿಸಿ, ಮುಂದೆ ಅಂತಹ ಹುದ್ದೆಗಳಿಗೆ ತಕ್ಕ ಮಟ್ಟಿಗಾದರೂ ಸರಿಹೊಂದುವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು ಸರಿಯಾದ ಕ್ರಮವಾಗಬಹುದು. ಅಲ್ಲದೆ ಕೆಲಸಕ್ಕಾಗಿ ಸಂದರ್ಶನಕ್ಕೆ ಹೋದಾಗ ಎನ್‌ಸಿಸಿ ಪ್ರಮಾಣಪತ್ರವನ್ನು ಪರಿಗಣಿಸುವಂತೆ ಮಾಡುವುದು ಸೂಕ್ತ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಸೆಸ್, ಸರ್‌ಚಾರ್ಜ್‌ಗಳಲ್ಲಿ ರಾಜ್ಯಗಳಿಗೂ ಪಾಲಿರಲಿ!

ಈಗಿರುವ ವ್ಯವಸ್ಥೆಯಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳಿಂದ ಬರುವ ರೆವಿನ್ಯೂವನ್ನು ಒಕ್ಕೂಟ ಸರ್ಕಾರ ಸಂಪೂರ್ಣವಾಗಿ ಅನುಭವಿಸುತ್ತಿದೆ. ಈ ತೆರಿಗೆಗಳಿಂದ ಬರುವ ರೆವಿನ್ಯೂ 2011-12ರಲ್ಲಿ ₹ 49,628 ಕೋಟಿಯಷ್ಟಿದ್ದುದು 2020-21ರಲ್ಲಿ ₹ 3,74,471 ಕೋಟಿಯಾಗಿದೆ. ಒಕ್ಕೂಟ ಸರ್ಕಾರದ ಹಂಚಿಕೊಳ್ಳಬಹುದಾದ ತೆರಿಗೆ ರಾಶಿಯಲ್ಲಿ ಇದರ ಪಾಲು 2011-12ರಲ್ಲಿ ಶೇ 10ರಷ್ಟಿದ್ದುದು 2020-21ರಲ್ಲಿ ಶೇ 20ರಷ್ಟಾಗಿದೆ.

ಈ ರೆವಿನ್ಯೂವನ್ನು 15ನೆಯ ಹಣಕಾಸು ಆಯೋಗದ ಸೂತ್ರದ ಪ್ರಕಾರ (ಶೇ 41) ರಾಜ್ಯಗಳಿಗೆ ಹಂಚಿದ್ದರೆ ಅವುಗಳಿಗೆ ₹ 1,53,533 ಕೋಟಿಯಷ್ಟು ದೊರೆಯುತ್ತಿತ್ತು. ನಮ್ಮ ದೇಶದ 14 ಮತ್ತು 15ನೆಯ ಹಣಕಾಸು ಆಯೋಗಗಳು ಈ ತೆರಿಗೆಗಳನ್ನು 'ಹಂಚಿಕೊಳ್ಳುವ ತೆರಿಗೆ ರಾಶಿ'ಯ ಭಾಗವನ್ನಾಗಿ ಮಾಡಬೇಕೆಂದು ಶಿಫಾರಸು ಮಾಡಿವೆ. ಆದ್ದರಿಂದ ಬರುವ ಫೆಬ್ರುವರಿ 1ರಂದು ಮಂಡನೆಯಾಗುವ 2022-23ರ ಬಜೆಟ್ಟಿನಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳ ರೆವಿನ್ಯೂವನ್ನು ರಾಜ್ಯಗಳ ಜೊತೆ ಹಂಚಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇದರಿಂದ ನಮ್ಮ ಸಂವಿಧಾನಾತ್ಮಕ ಒಕ್ಕೂಟ ವ್ಯವಸ್ಥೆಗೆ ಒಂದು ಅರ್ಥ ಬರುತ್ತದೆ ಮತ್ತು ಅದರ ಮಹತ್ವ ಹೆಚ್ಚುತ್ತದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಅಪಾಯ ಭತ್ಯೆ ತಡೆ ಅಮಾನವೀಯ

ರಾಜ್ಯದ ಆಶಾ ಕಾರ್ಯಕರ್ತೆಯರಿಗೆ ₹ 1000 ಕೋವಿಡ್ ಅಪಾಯ ಭತ್ಯೆಯನ್ನು ಕಳೆದ ಸೆಪ್ಟೆಂಬರ್‌ನಿಂದ ನೀಡಲಾಗಿಲ್ಲ ಎಂಬ ಸುದ್ದಿ ಸರ್ಕಾರಕ್ಕೆ ನಾಚಿಕೆ ತರಿಸಬೇಕು. ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ಎಲ್ಲರೂ ಬೆಚ್ಚಗೆ, ಸುರಕ್ಷಿತವಾಗಿರಲು ಮನೆ ಸೇರಿದರು. ಸ್ವಂತ ತಂದೆ, ತಾಯಿ, ಮಕ್ಕಳು ಆಸ್ಪತ್ರೆ ಸೇರಿದರೂ, ಕೊನೆಗೆ ಅವರು ಸತ್ತರೂ ಮನೆಯ ಯಾವ ಸದಸ್ಯರೂ ಅವರ ಅಂತಿಮ ದರ್ಶನ ಪಡೆಯಲು ಧೈರ್ಯ ಮಾಡಲಿಲ್ಲ. ಅಂತಹ ಸಂದರ್ಭದಲ್ಲಿ ಸರ್ಕಾರದ ಮಾತಿಗೆ ಬೆಲೆ ಕೊಟ್ಟು ಮನೆಮನೆಗೆ ಹೋಗಿ ಕೋವಿಡ್ ಸೋಂಕಿತರನ್ನು ಆಸ್ಪತ್ರೆಗೆ ಸೇರಿಸಿ, ಸ್ವಾಬ್ ಟೆಸ್ಟ್‌ಗೆ ಅನುಕೂಲ ಮಾಡಿ, ಸೋಂಕಿತರೆಲ್ಲರ ಮಾಹಿತಿ ಸಂಗ್ರಹಿಸಿ, ಲಸಿಕೆ ಹಾಕಿಸಿಕೊಳ್ಳಲು ಅವರ ಮನವೊಲಿಸಿದ್ದು, ಗರ್ಭಿಣಿಯರ ಆರೈಕೆ ಮಾಡಿದ್ದು ಆಶಾ ಕಾರ್ಯಕರ್ತೆಯರು. ಕೋವಿಡ್‌ನ ಮೊದಲೆರಡು ಅಲೆಗಳಲ್ಲಿ ಆಶಾ ಕಾರ್ಯಕರ್ತೆಯರು 'ಮುಂಚೂಣಿಯಲ್ಲಿರುವ ಯೋಧರು' ಎಂದಿದ್ದ ಸರ್ಕಾರ, ಇಂದು ಅವರಿಗೆ ಭತ್ಯೆ ನೀಡುವಲ್ಲಿ ಇಷ್ಟು ನಿರ್ಲಕ್ಷ್ಯ ವಹಿಸುತ್ತಿರುವುದು ದುರದೃಷ್ಟಕರ.

ಬಸನಗೌಡ ಪಾಟೀಲ, ಧಾರವಾಡ

ಯಾರ ವಿರುದ್ಧ ಹೋರಾಡಬೇಕು?

ಕೆಪಿಎಸ್‌ಸಿ ನೇಮಕಾತಿ ಅಕ್ರಮಗಳಿಗೆ ಸಂಬಂಧಿಸಿದ ಪತ್ರಿಕಾ ವರದಿಗಳನ್ನು ಓದಿದಾಗ, ಅಭ್ಯರ್ಥಿಗಳು ಎಷ್ಟು ಅಸಹಾಯಕರು ಎಂದೆನಿಸಿತು. ತಂದೆ ತಾಯಿ 'ಇನ್ನು ನಿನ್ನ ಅಭ್ಯಾಸಕ್ಕೆ ನಮ್ಮಲ್ಲಿ ಹಣವಿಲ್ಲ ನಿಲ್ಲಿಸು' ಎನ್ನುವರೇನೋ, 'ಕೆಲವು ತಿಂಗಳಲ್ಲಿ ಅಧಿಸೂಚನೆ ಹೊರಡಿಸದಿದ್ದರೆ ನನ್ನ ವಯೋಮಿತಿ ಮೀರಿ ಹೋಗುವುದೇನೋ' ಎಂಬಂತಹ ಪ್ರಶ್ನೆಗಳಿಗೆ ಉತ್ತರ ಸಿಗದೆ ಲಕ್ಷಾಂತರ ಮಂದಿ ತಳಮಳದಿಂದ ಜೀವನ ನಡೆಸುತ್ತಿದ್ದಾರೆ.

ಪಕ್ಕದ ಅನೇಕ ರಾಜ್ಯಗಳ ವಿದ್ಯಾರ್ಥಿಗಳು ಪ್ರತಿವರ್ಷ ಪರೀಕ್ಷೆ ಬರೆದು ಕೆಲಸ ಪಡೆಯುತ್ತಿದ್ದಾರೆ. ಆದರೆ ನಮಗೇಕೆ ಆ ಭಾಗ್ಯ ಇಲ್ಲ? ಇದಕ್ಕಿಂತ ದೊಡ್ಡ ದೌರ್ಭಾಗ್ಯವೆಂದರೆ, ಈ ನಮ್ಮ ಕಷ್ಟಗಳನ್ನು ಯಾರಿಗೆ ಮುಟ್ಟಿಸಬೇಕು, ಯಾರ ವಿರುದ್ಧ ಹೋರಾಡಬೇಕು ಎಂದು ತಿಳಿಯದಿರುವುದು.

ಸುಪ್ರೀತಾ ಸಿ. ಹೆಬ್ಬೂರು, ತುಮಕೂರು

ರಾಜಕೀಯ ವಲಸೆಗೆ ಬೇಕು ಕಠಿಣ ನಿರ್ಬಂಧ

ವಲಸೆ ಎನ್ನುವುದು ಈಗ ರಾಜಕೀಯ ಕ್ಷೇತ್ರದಲ್ಲಿ ಸಾಮಾನ್ಯ ವಿದ್ಯಮಾನವಾಗಿ ಬೆಳೆಯುತ್ತಿರುವುದು ಹೇವರಿಕೆ ತರಿಸುವಂತಿದೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಅಂಟಿದ ಅಶಿಸ್ತಿನ ನಡೆ ಮಾತ್ರವಲ್ಲ ನಾವು ಆರಿಸಿ ಕಳುಹಿಸಿದವರ ನೈತಿಕತೆಯ ಪ್ರಶ್ನೆಯೂ ಹೌದು. ಪಕ್ಷ ಯಾವುದೇ ಇರಲಿ ಅದರ ಸಿದ್ಧಾಂತಗಳು, ಪ್ರಣಾಳಿಕೆಗಳು ರಾಜ್ಯ, ದೇಶದ ಸುರಕ್ಷೆ ಮತ್ತು ಅಭಿವೃದ್ಧಿಯ ದೃಷ್ಟಿಯಲ್ಲಿ ಪ್ರಶ್ನಾತೀತವಾಗಿ ಇರಬೇಕಾದದ್ದು ನ್ಯಾಯ. ಅಂತಹ ಮೌಲ್ಯಗಳನ್ನು ಒಮ್ಮೆ ಒಪ್ಪಿ ಅಪ್ಪಿಕೊಂಡು ಬಂದ ರಾಜಕೀಯ ನಾಯಕರು ಆ ಪಕ್ಷಗಳಿಂದ ಗೆಲುವನ್ನು ಸಾಧಿಸಿ ಉನ್ನತ ಸ್ಥಾನಗಳಲ್ಲಿದ್ದರೂ ಮುಂದೆ ತಮ್ಮ ಸ್ವಾರ್ಥ ಸಾಧನೆಗಾಗಿ, ಕೈಹಿಡಿದ ಪಕ್ಷ ಮತ್ತು ಮತದಾರರನ್ನು ಕಡೆಗಣಿಸುವುದು ಯಾರು ಕೂಡಾ ಸಂಭ್ರಮಿಸುವ ಸಂಗತಿಯಲ್ಲ. ಇವರನ್ನು ಬೆಂಬಿಡದೆ ಹಿಂಬಾಲಿಸುವ ಗುಂಪು ಈ ವಿಚಾರದತ್ತ ಯೋಚಿಸುವುದೇ ಇಲ್ಲ. ಕಾರಣ ಅವರನ್ನು ತಮ್ಮ ಸುಪರ್ದಿಯಲ್ಲಿಡಲು ಇವರು ಏನೆಲ್ಲಾ ಬೇಕೊ ಅದೆಲ್ಲವನ್ನೂ ಮಾಡಿರುತ್ತಾರೆ. ಇಂತಹ ರಾಜಕೀಯ ವ್ಯಕ್ತಿಗಳ ನಡೆಯನ್ನು ನೇರ್ಪುಗೊಳಿಸಲು ಇರುವ ಏಕೈಕ ಅಸ್ತ್ರ ಮತವಾದರೂ ಅದನ್ನೂ ಇವರು ಖರೀದಿಸುವ ಹಂತಕ್ಕೆ ಯಾವತ್ತೋ ಬಂದಾಗಿದೆ. ಮನಸ್ಸು ಬಂದಾಗ ಪಕ್ಷದಿಂದ ಪಕ್ಷಕ್ಕೆ ನಾಚಿಕೆಯಿಲ್ಲದೆ ಜಿಗಿಯುವ ಇವರನ್ನು ನಿಯಂತ್ರಿಸಲು ಒಂದೋ ಮತದಾರ ಜಾಗೃತನಾಗಬೇಕು ಇಲ್ಲವೇ ವಲಸೆ ವಿರುದ್ಧ ಕಟ್ಟುನಿಟ್ಟಿನ ಕಾನೂನು ಜಾರಿಯಾಗಬೇಕು. ಇಲ್ಲದಿದ್ದರೆ ಇವರ ಅಸಹ್ಯ ತರಿಸುವ ಮರ್ಕಟ ಹಾರಾಟವನ್ನು ನಾವೆಲ್ಲ ಕಣ್ಣು, ಕಿವಿ, ನಾಲಗೆ ಇದ್ದೂ ಸಹಿಸಿಕೊಳ್ಳಬೇಕಾದೀತು!

ಧರ್ಮಾನಂದ ಶಿರ್ವ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಲವು ವಿಶೇಷಗಳ ಗಣರಾಜ್ಯೋತ್ಸವ

ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ನಡೆದಿರುವ 73ನೇ ಗಣರಾಜ್ಯೋತ್ಸವದ ಆಚರಣೆಯು ಹಲವು ವಿಶೇಷಗಳು ಮತ್ತು ಹಲವು ಮೊದಲುಗಳಿಗೆ ಸಾಕ್ಷಿಯಾಗಿದೆ. ಕೋವಿಡ್ ಮಧ್ಯೆ ಕಡಿಮೆ ಮಂದಿ ಭಾಗಿಯಾಗಿದ್ದ ಈ ವರ್ಷದ ಆಚರಣೆಯು ಗಮನ ಸೆಳೆದಿದೆ

ಕೇಂದ್ರ ಲೋಕೋಪಯೋಗಿ ಇಲಾಖೆಯ ಸ್ತಬ್ಧಚಿತ್ರದಲ್ಲಿ ನೇತಾಜಿ

ಸ್ತಬ್ಧಚಿತ್ರಗಳ ಮೆರುಗು

ಈ ಬಾರಿಯ ಗಣರಾಜ್ಯೋತ್ಸವದಲ್ಲಿ 21 ಸ್ತಬ್ಧಚಿತ್ರಗಳು (ಟ್ಯಾಬ್ಲೊ) ಗಮನ ಸೆಳೆದವು. 12 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ಹಾಗೂ ನಾಗರಿಕ ವಿಮಾನಯಾನ, ಕಾನೂನು ಮತ್ತು ನ್ಯಾಯ, ಜಲಶಕ್ತಿ, ಐಟಿ ಸಚಿವಾಲಯ ಸೇರಿದಂತೆ ವಿವಿಧ ಸಚಿವಾಲಯಗಳ ಸ್ತಬ್ಧಚಿತ್ರಗಳು ಪಥಸಂಚಲನ ಮೆರವಣಿಗೆಯಲ್ಲಿ ಭಾಗಿಯಾಗಿದ್ದವು.

ಕೇಂದ್ರದ ಲೋಕೋಪಯೋಗಿ ಇಲಾಖೆಯು ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 125ನೇ ಜನ್ಮದಿನವನ್ನು ಇಟ್ಟುಕೊಂಡು ರೂಪಿಸಿದ್ದ ಸ್ತಬ್ಧಚಿತ್ರವು ಕಣ್ಮನ ಸೆಳೆಯಿತು. ಕೇಂದ್ರ ಸಂಸ್ಕೃತಿ ಸಚಿವಾಲಯವು ಅರವಿಂದೋ ಅವರ 150ನೇ ವರ್ಷವನ್ನು ಸ್ತಬ್ಧಚಿತ್ರದ ಮೂಲಕ ಸ್ಮರಿಸಿತು. ಶಿಕ್ಷಣ ಸಚಿವಾಲಯವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಒಳಗೊಂಡ ವಿಷಯವನ್ನು ಸ್ತಬ್ಧಚಿತ್ರದ ಮೂಲಕ ಅನಾವರಣಗೊಳಿಸಿತು. ರಫೇಲ್ ಯುದ್ಧವಿಮಾನದ ಮೊದಲ ಮಹಿಳಾ ಪೈಲಟ್ ವಾಯುಪಡೆಯ ಸ್ತಬ್ಧಚಿತ್ರದಲ್ಲಿ ಭಾಗಿಯಾಗಿದ್ದರು.

ಕರ್ನಾಟಕದ ಸಾಂಪ್ರದಾಯಿಕ ಕರಕುಶಲ ಕಲೆಗಳನ್ನು ನೆನಪಿಸುವ ಟ್ಯಾಬ್ಲೊ ಈ ಬಾರಿಯ ವಿಶೇಷತೆಗಳಲ್ಲೊಂದು. ಬಿದರಿ ಕಲಾಕೃತಿ, ಕಿನ್ನಾಳ ಕಲಾವಸ್ತುಗಳು, ಕಂಚಿನ ಪ್ರತಿಮೆಗಳು, ಚನ್ನಪಟ್ಟಣದ ಆಟಿಕೆಗಳು, ಮರಗೆತ್ತನೆ, ಕುಂಬಾರಿಕೆ ಹೀಗೆ ಕರ್ನಾಟಕದ ಹಲವು ಕರಕುಶಲ ಕಲೆ ಹಾಗೂ ವಸ್ತುಗಳು ಕಣ್ಮನ ಸೆಳೆದವು.

ಮೇಘಾಲಯದ ಸ್ತಬ್ಧಚಿತ್ರವು ರಾಜ್ಯ ಉದಯವಾದ 50 ವರ್ಷಗಳನ್ನು ನೆನಪಿಸಿತು. ಸಹಕಾರ ಸಂಘಗಳು ಮತ್ತು ಸ್ವ-ಸಹಾಯ ಗುಂಪುಗಳ ನೇತೃತ್ವ ವಹಿಸಿರುವ ಮಹಿಳೆಯರಿಗೆ ಗೌರವ ಸಲ್ಲಿಸಿತು. ಬಿದಿರಿನಿಂದ ಮಾಡಿದ್ದ ಕರಕುಶಲ ವಸ್ತುಗಳನ್ನು ಪ್ರದರ್ಶಿಸಲಾಯಿತು. ಗುಜರಾತ್‌ನಲ್ಲಿ ನಡೆದ ಬುಡಕಟ್ಟು ಕ್ರಾಂತಿಯನ್ನು ಬಿಂಬಿಸುವ ಟ್ಯಾಬ್ಲೊವನ್ನು ಗುಜರಾತ್ ಪ್ರದರ್ಶಿಸಿತು. ಗೋವಾದ ಟ್ಯಾಬ್ಲೊ ವಿವಿಧ ಐತಿಹಾಸಿಕ ಮತ್ತು ಸ್ವರ್ಗಿಕ ಆಕರ್ಷಣೆಗಳನ್ನು ಪ್ರದರ್ಶಿಸುವಂತೆ ಮಾಡಿತು.

'ಹರಿಯಾಣವು ಕ್ರೀಡೆಯಲ್ಲಿ ಮೊದಲ ಸ್ಥಾನದಲ್ಲಿದೆ' ಎಂಬುದನ್ನು ಬಿಂಬಿಸುವ ಸ್ತಬ್ಧಚಿತ್ರವನ್ನು ಹರಿಯಾಣ ಸರ್ಕಾರ ಪ್ರದರ್ಶಿಸಿತು. ಇತರ ರಾಜ್ಯಗಳಿಗೆ ಹೋಲಿಸಿದರೆ, ಒಲಿಂಪಿಕ್ ಸೇರಿದಂತೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹರಿಯಾಣದ ಕ್ರೀಡಾಪಟುಗಳು ಅಪಾರ ಪದಕಗಳನ್ನು ಪಡೆದಿದ್ದಾರೆ ಎಂಬುದನ್ನು ಸ್ತಬ್ಧಚಿತ್ರ ಸೂಚಿಸಿತು. ಉತ್ತರಾಖಂಡದ ಪ್ರಗತಿಯನ್ನು ಸೂಚಿಸುವ ಸ್ತಬ್ಧಚಿತ್ರ ಅನಾವರಣಗೊಂಡಿತು. ಸಂಪರ್ಕ ವೃದ್ಧಿ ಹಾಗೂ ಧಾರ್ಮಿಕ ಸ್ಥಳಗಳ ಅಭಿವೃದ್ಧಿಯಲ್ಲಿ ಆಗಿರುವ ಬೆಳವಣಿಗೆಗಳನ್ನು ಬಿಂಬಿಸಲಾಯಿತು.

ಛತ್ತೀಸಗಢ ಸರ್ಕಾರವು ಗೋಧನ ಹೊಸ ಯೋಜನೆ ವಿಷಯವನ್ನು ಪ್ರಸ್ತುತಪಡಿಸಿತು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಜ್ಯ ನೀಡಿದ ಅಪ್ರತಿಮ ಕೊಡುಗೆಯನ್ನು ಪಂಜಾಬ್‌ನ ಸ್ತಬ್ಧಚಿತ್ರ ಚಿತ್ರಿಸಿತು.

ವಿರಾಟ್ ನಿವೃತ್ತಿ

ರಾಷ್ಟ್ರಪತಿಯ ಬೆಂಗಾವಲು ಪಡೆಯ ಕಮಾಂಡಂಟ್ ಸವಾರಿಗೆ ಬಳಸಲಾಗುತ್ತಿದ್ದ ವಿರಾಟ್ ಎಂಬ ಕುದುರೆ ಬುಧವಾರ ನಿವೃತ್ತವಾಗಿದೆ. ಈವರೆಗೆ ಗಣರಾಜ್ಯೋತ್ಸವದ 13 ಮೆರವಣಿಗೆಗಳಲ್ಲಿ ವಿರಾಟ್ ಭಾಗಿಯಾಗಿತ್ತು. ಗಣರಾಜ್ಯೋತ್ಸವದ ಮೆರವಣಿಗೆಯ ನಂತರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಪ್ರಧಾನಿ ನರೇಂದ್ರ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ವಿರಾಟ್‌ನನ್ನು ಬೀಳ್ಕೊಟ್ಟರು.

ಸೇನಾ ಸಮವಸ್ತ್ರಗಳ ಪ್ರದರ್ಶನ

ಸ್ವಾತಂತ್ರ್ಯಾನಂತರ ಭಾರತೀಯ ಸೇನೆಯಲ್ಲಿ ಬಳಕೆಯಲ್ಲಿದ್ದ ಎಲ್ಲಾ ಸಮರ ಸಮವಸ್ತ್ರಗಳು ತೊಟ್ಟ ಸೈನಿಕರು ಗಣರಾಜ್ಯೋತ್ಸವದಲ್ಲಿ ಮೆರವಣಿಗೆ ನಡೆಸಿದರು. ಈ ವರ್ಷದ ಸೇನಾ ದಿನಾಚರಣೆಯ ದಿನದಿಂದ ಭಾರತೀಯ ಸೇನೆಯ ಸೈನಿಕರಿಗೆ ಹೊಸ ಸಮರ ಸಮವಸ್ತ್ರಗಳನ್ನು ನೀಡಲಾಗಿದೆ. ಹಂತ ಹಂತವಾಗಿ ಸೇನೆಯ 12 ಲಕ್ಷ ಸೈನಿಕರಿಗೂ ಈ ಸಮರ ಸಮವಸ್ತ್ರಗಳನ್ನು ನೀಡಲಾಗುತ್ತದೆ. ಈ ಬದಲಾವಣೆಯ ಸೂಚಕವಾಗಿ ಸೇನೆಯಲ್ಲಿ ಈ ಹಿಂದೆ ಬಳಕೆಯಲ್ಲಿದ್ದ ಎಲ್ಲಾ ಸಮವಸ್ತ್ರಗಳನ್ನು ಈ ಮೆರವಣಿಗೆಯಲ್ಲಿ ಪ್ರದರ್ಶಿಸಲಾಗಿದೆ. ಜತೆಗೆ ಆ ಸಂದರ್ಭದಲ್ಲಿ ಬಳಕೆಯಲ್ಲಿದ್ದ ರೈಫಲ್‌ಗಳನ್ನೂ ಸೈನಿಕರು ಮೆರವಣಿಗೆಯಲ್ಲಿ ಪ್ರದರ್ಶಿಸಿದ್ದಾರೆ.

ತಲಾ 96 ಸೈನಿಕರಿದ್ದ ಆರು ತಂಡಗಳು ಈ ಮೆರವಣಿಗೆಯನ್ನು ನಡೆಸಿಕೊಟ್ಟವು. 1950ರಲ್ಲಿ ಬಳಕೆಯಲ್ಲಿದ್ದ ಸಮವಸ್ತ್ರವನ್ನು ತೊಟ್ಟು ರಜಪೂತ್ ರೆಜಿಮೆಂಟ್ ಮೆರವಣಿಗೆ ನಡೆಸಿತು. ಈ ತಂಡವು .303 ರೈಫಲ್‌ಗಳನ್ನು ಹೊತ್ತು ಪ್ರದರ್ಶನ ನೀಡಿತು. 1960ರಲ್ಲಿ ಬಳಕೆಯಲ್ಲಿದ್ದ ಸಮವಸ್ತ್ರ ತೊಟ್ಟು ಮತ್ತು ಆಗ ಬಳಕೆಯಲ್ಲಿದ್ದ .303 ರೈಫಲ್ ಹೊತ್ತು ಅಸ್ಸಾಂ ರೆಜಿಮೆಂಟ್ ಮೆರವಣಿಗೆ ನಡೆಸಿತು.

1970ರ ಸಮವಸ್ತ್ರವನ್ನು ತೊಟ್ಟು ಮತ್ತು ಆಗ ಬಳಕೆಯಲ್ಲಿದ್ದ 7.62 ಎಂಎಂ ರೈಫಲ್ ಹೊತ್ತು ಜಮ್ಮು-ಕಾಶ್ಮೀರ ಲೈಟ್ ಇನ್‌ಫ್ಯಾಂಟ್ರಿ ರೆಜಿಮೆಂಟ್ ಪ್ರದರ್ಶನ ನೀಡಿತು. ಈಗ ಬಳಕೆಯಲ್ಲಿರುವ ಸಮವಸ್ತ್ರ ತೊಟ್ಟು ಮತ್ತು 5.56 ಎಂಎಂ ಇನ್ಸಾಸ್ ರೈಫಲ್ ಹೊತ್ತು ಸಿಖ್ ಲೈಟ್ ಇನ್‌ಫ್ಯಾಂಟ್ರಿ ರೆಜಿಮೆಂಟ್ ಮೆರವಣಿಗೆ ನಡೆಸಿತು.

ಪ್ಯಾರಾಶೂಟ್ ರೆಜಿಮೆಂಟ್‌ನ ಸದಸ್ಯರು ಹೊಸತಾಗಿ ನೀಡಲಾಗಿರುವ ಸಮರ ಸಮವಸ್ತ್ರವನ್ನು ತೊಟ್ಟು ಮತ್ತು ಟ್ಯಾವೋರ್ ರೈಫಲ್ ಹೊತ್ತು ಮೆರವಣಿಗೆ ನಡೆಸಿದರು.

1950ರಲ್ಲಿ ಬಳಕೆಯಲ್ಲಿದ್ದ ಸಮವಸ್ತ್ರವನ್ನು ತೊಟ್ಟು ರಜಪೂತ್ ರೆಜಿಮೆಂಟ್‌ನ ಸದಸ್ಯರು ಮೆರವಣಿಗೆ ನಡೆಸಿದರು

ಪೌರ ಕಾರ್ಮಿಕರು, ರಿಕ್ಷಾ ಚಾಲಕರು ಅತಿಥಿಗಳು

ಕೋವಿಡ್‌ನ ಕಾರಣ ಗಣರಾಜ್ಯೋತ್ಸವದ ಮೆರವಣಿಗೆ ನೋಡಲು ಸೇರಿದ್ದವರ ಸಂಖ್ಯೆ ಬಹಳ ಕಡಿಮೆ ಇತ್ತು. ಕೋವಿಡ್‌ನ ಕಾರಣದಿಂದ 2021ರ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಯಾವುದೇ ವಿದೇಶಿ ಅತಿಥಿಯನ್ನು ಆಹ್ವಾನಿಸಿರಲಿಲ್ಲ. ಈ ಬಾರಿಯು ಕೋವಿಡ್ ಕಾರಣಕ್ಕೇ ವಿದೇಶಿ ಅತಿಥಿಯನ್ನು ಆಹ್ವಾನಿಸಿಲ್ಲ. ಆದರೆ, ಗಣರಾಜ್ಯೋತ್ಸವದ ಮೆರವಣಿಗೆಗೆ ಸ್ತಬ್ಧಚಿತ್ರಗಳ ನಿರ್ಮಾಣದಲ್ಲಿ ಭಾಗಿಯಾಗಿದ್ದ ಕಾರ್ಮಿಕರು ಮತ್ತು ಕಲಾವಿರನ್ನು ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಜತೆಗೆ ರಿಕ್ಷಾ ಚಾಲಕರು, ಪೌರ ಕಾರ್ಮಿಕರು ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಅತಿಥಿಗಳಾಗಿ ಆಹ್ವಾನಿಸಲಾಗಿತ್ತು.

ಅಂತರ ಕಾಯ್ದುಕೊಳ್ಳುವಿಕೆಯ ನಿಯಮಗಳಿಗೆ ಅನುಗುಣವಾಗಿ ಕುರ್ಚಿಯ ವ್ಯವಸ್ಥೆ ಮಾಡಲಾಗಿತ್ತು. ಅತಿಥಿಗಳು ಮಾಸ್ಕ್ ಧರಿಸಿ ಗಣರಾಜ್ಯೋತ್ಸವದ ಆಚರಣೆಗೆ ಸಾಕ್ಷಿಯಾದರು. ಈ ಬಾರಿ 15 ವರ್ಷ ಮೇಲ್ಪಟ್ಟ ಮತ್ತು ಕೋವಿಡ್ ಲಸಿಕೆ ಪಡೆದುಕೊಂಡಿದ್ದ ಮಕ್ಕಳಿಗೆ ಮಾತ್ರವೇ ಗಣರಾಜ್ಯೋತ್ಸವದ ವಿವಿಧ ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವಕಾಶ ನೀಡಲಾಗಿತ್ತು.

ಪ್ರತಿವರ್ಷ ಗಣರಾಜ್ಯೋತ್ಸವದ ವೀಕ್ಷಣೆಗೆ ರಾಜಪಥದಲ್ಲಿ 25,000 ಜನರಿಗೆ ಆಸನದ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ 5,000 ಜನರಿಗಷ್ಟೇ ಮೆರವಣಿಗೆ ವೀಕ್ಷಣೆಗೆ ಅವಕಾಶ ನೀಡಲಾಗಿತ್ತು. 5,000ದಲ್ಲಿ 4,000 ಮಂದಿ ಕಾರ್ಮಿಕ ಅತಿಥಿಗಳೇ ಇದ್ದರು. ಆದರೆ, ಭದ್ರತೆಗೆ ನಿಯೋಜಿಸಿದ್ದ ಭದ್ರತಾ ಸಿಬ್ಬಂದಿ ಸಂಖ್ಯೆ 26,000. ಅತಿಥಿಗಳಿಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವ ಎಂದು ಮುದ್ರಿಸಲಾಗಿದ್ದ ಟೋಪಿಗಳನ್ನು ನೀಡಲಾಗಿತ್ತು.

ಉತ್ತರಾಖಂಡದ ಟೋಪಿ, ಮಣಿಪುರದ ಶಲ್ಯ

ಪ್ರಧಾನಿ ನರೇಂದ್ರ ಮೋದಿ ಅವರು ತಾವು ಧರಿಸುವ ಬಟ್ಟೆ ಹಾಗೂ ವೇಷಭೂಷಣಗಳಿಂದ ಆಗಾಗ್ಗೆ ಸುದ್ದಿಯಲ್ಲಿರುತ್ತಾರೆ. ಈ ಬಾರಿಯ ಗಣರಾಜ್ಯೋತ್ಸವದಲ್ಲೂ ಅವರು ತಮ್ಮ ವಸ್ತ್ರ ವಿನ್ಯಾಸದಿಂದ ಗಮನ ಸೆಳೆದಿದ್ದಾರೆ. 2014ರಿಂದಲೂ ಪ್ರತಿ ವರ್ಷ ಅವರು ತಲೆಗೆ ಮುಂಡಾಸು ಧರಿಸುತ್ತಿದ್ದರು. ಈ ಬಾರಿ ಅವರು ಉತ್ತರಾಖಂಡದ ಟೋಪಿಯನ್ನು ಧರಿಸಿದ್ದಾರೆ. ಟೋಪಿಯಲ್ಲಿ ಬ್ರಹ್ಮಕಮಲದ ಚಿತ್ರವಿದೆ. ಇದು ಉತ್ತರಾಖಂಡದ ರಾಜ್ಯದ ಹೂವು. ಮೋದಿ ಅವರು ತಮ್ಮ ಕೊರಳ ಸುತ್ತ ಶಲ್ಯವನ್ನು ಧರಿಸಿದ್ದರು. ಈ ಶಲ್ಯ ಮಣಿಪುರದಿಂದ ಬಂದಿದೆ. ಇದನ್ನು ಬಿಳಿ, ಕಪ್ಪು ಮತ್ತು ಕೆಂಪು ಬಣ್ಣದ ನೂಲಿನಿಂದ ನೇಯಲಾಗಿದೆ. ಇದು ಮಣಿಪುರದ ಮೈತೆಯ್ ಬುಡಕಟ್ಟಿನ ಸಾಂಪ್ರದಾಯಿಕ ಶಲ್ಯ.

ಉತ್ತರಾಖಂಡ ಹಾಗೂ ಮಣಿಪುರದಲ್ಲಿ ಫೆಬ್ರುವರಿ ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಈ ಕಾರಣದಿಂದಲೇ ಅಲ್ಲಿನ ಟೋಪಿ ಮತ್ತು ಶಲ್ಯವನ್ನು ಮೋದಿ ಧರಿಸಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಹೇಳಿದ್ದಾರೆ.

ಗಣರಾಜ್ಯೋತ್ಸವ ಮೆರವಣಿಗೆಗೂ ಮುನ್ನ ಅವರು ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಗೌರವ ಸಲ್ಲಿಸಿದ್ದರು.

485 ಕಲಾವಿದರಿಂದ ನೃತ್ಯ ಪ್ರದರ್ಶನ

15 ರಾಜ್ಯಗಳಿಗೆ ಸೇರಿದ 485 ನೃತ್ಯಪಟುಗಳ ಗಣರಾಜ್ಯೋತ್ಸವ ಮೆರವಣಿಗೆಯಲ್ಲಿ ಅತ್ಯದ್ಭುತ ನೃತ್ಯ ಪ್ರದರ್ಶನ ನೀಡಿದರು. ಶಾಸ್ತ್ರೀಯ, ಜನಪದ/ಬುಡಕಟ್ಟು, ಸಮಕಾಲೀನ ನೃತ್ಯ ಪ್ರಕಾರಗಳು ಮನಸೂರೆಗೊಂಡವು. ಬೃಹತ್ ರಂಗಪರಿಕರಗಳು, ಮುಖವಾಡಗಳು, ಬೊಂಬೆಗಳು ಮತ್ತು ದಿರಿಸುಗಳು ಸ್ವರಮೇಳದ ವೈಭವವನ್ನು ಹೆಚ್ಚಿಸಿದವು.

ಭಾರತದ ಸಂಗೀತವು ಏಕತೆ ಮತ್ತು ವೈವಿಧ್ಯತೆಯನ್ನು ಪ್ರದರ್ಶಿಸಿತು. ಸಾಂಪ್ರದಾಯಿಕ ಸಂಗೀತವು ಆಧುನಿಕತೆ ಸಂಗೀತವನ್ನು ಹೇಗೆ ಸಂಧಿಸುತ್ತದೆ, ಜಾನಪದವು ಸಮಕಾಲೀನವನ್ನು ಹೇಗೆ ಬೆಸೆಯುತ್ತದೆ ಎಂಬುದನ್ನು ಚಿತ್ರಿಸಲಾಯಿತು. ರಕ್ಷಣಾ ಸಚಿವಾಲಯ ಮತ್ತು ಸಂಸ್ಕೃತಿ ಸಚಿವಾಲಯ ಆಯೋಜಿಸಿದ್ದ ಅಖಿಲ ಭಾರತ ಮಟ್ಟದ ಸ್ಪರ್ಧೆ ವಂದೇ ಭಾರತಂ-ನೃತ್ಯ ಉತ್ಸವದ ಆಧಾರದ ಮೇಲೆ ಇಲ್ಲಿ ಭಾಗವಹಿಸುವ ನೃತ್ಯಪಟುಗಳನ್ನು ಇದೇ ಮೊದಲ ಬಾರಿಗೆ ಆಯ್ಕೆ ಮಾಡಲಾಗಿತ್ತು.

ಬಾಂಗ್ಲಾ ವಿಮೋಚನೆಯ ನೆನಪು

ಭಾರತವು ಹೋರಾಡಿ, ಬಾಂಗ್ಲಾದೇಶ ಉದಯಕ್ಕೆ ಕಾರಣವಾದ 1971ರ ಬಾಂಗ್ಲಾ ವಿಮೋಚನಾ ಯುದ್ಧದ ನೆನಪಿನಲ್ಲಿ ಈ ವರ್ಷ 'ಸ್ವರ್ಣ ವಿಜಯ ವರ್ಷ' ಆಚರಿಸಲಾಗುತ್ತಿದೆ. ಪಾಕಿಸ್ತಾನದ ಮೇಲೆ ಸಾಧಿಸಲಾದ ಜಯದ ಸ್ಮರಣೆಗಾಗಿ ಭಾರತೀಯ ಸೇನೆಯು ರಾಜಪಥದಲ್ಲಿ ವಿಶೇಷ ಮೆರವಣಿಗೆ ನಡೆಸಿತು.

1971ರ ಯುದ್ಧದಲ್ಲಿ ಬಳಸಲಾಗಿದ್ದ ತಲಾ ಒಂದು ಪಿಟಿ-76 ಟ್ಯಾಂಕ್, ಸೆಂಚೂರಿಯನ್ ಟ್ಯಾಂಕ್, ಎರಡು ಎಂಬಿಟಿ ಅರ್ಜುನ್ ಎಂಕೆ-1 ಟ್ಯಾಂಕ್, ಒಟಿ-62 ಟೋಪಾಜ್ ಗುಂಡು ನಿರೋಧಕ ಸಮರ ವಾಹನ, ಒಂದು ಬಿಎಂಪಿ-1 ಸಮರ ವಾಹನ ಮತ್ತು ಎರಡು ಬಿಎಂಪಿ-2 ಸಮರ ವಾಹನಗಳನ್ನು ಒಳಗೊಂಡಿದ್ದ ಸೇನಾ ತುಕಡಿಯು ಮೆರವಣಿಗೆಯ ಆಕರ್ಷಣೆಯ ಕೇಂದ್ರವಾಗಿತ್ತು.

ಇದರ ಜತೆಯಲ್ಲಿಯೇ ಭಾರತೀಯ ಸೇನೆಯ ಮೂರೂ ಪಡೆಗಳ ವಿಶೇಷ ತುಕಡಿಗಳು ಮತ್ತು ಬೆಟಾಲಿಯನ್‌ಗಳ ಪ್ರತಿನಿಧಿಗಳು ಮೆರವಣಿಗೆ ನಡೆಸಿದರು. ಸದ್ಯ ಸೇನೆಯಲ್ಲಿ ಬಳಕೆಯಲ್ಲಿರುವ ಟ್ಯಾಂಕ್‌ಗಳು, ಕ್ಷಿಪಣಿ ಲಾಂಚರ್‌ಗಳು, ಫಿರಂಗಿಗಳು, ರೈಫಲ್‌ಗಳನ್ನು ಹೊತ್ತ ಸೈನಿಕರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಭಾರತೀಯ ಗಡಿ ಭದ್ರತಾ ಪಡೆಯ ಒಂಟೆಯ ತುಕಡಿಯು ಮೆರವಣಿಗೆಯ ಆಕರ್ಷಣೆಗಳಲ್ಲಿ ಒಂದಾಗಿತ್ತು.

1971ರ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಬಳಸಲಾಗಿದ್ದ ಸೆಂಚುರಿಯನ್ ಟ್ಯಾಂಕ್

ಆಧಾರ: ಪಿಟಿಐ

ಫ್ಲೈಪಾಸ್ಟ್ ಪ್ರದರ್ಶನ

ಭಾರತೀಯ ವಾಯುಪಡೆಯ ಸುಖೋಯ್ ಯುದ್ಧವಿಮಾನಗಳು ಕಸರತ್ತು ಪ್ರದರ್ಶಿಸಿದವು

ಈ ಬಾರಿಯ ಗಣರಾಜ್ಯೋತ್ಸವದಲ್ಲಿ ವಾಯುಪಡೆಯು ಕೆಲವು ಮೊದಲುಗಳಿಗೆ ಮುನ್ನುಡಿ ಬರೆಯಿತು. 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ, ಇದೇ ಮೊದಲ ಬಾರಿಗೆ ಹೆಚ್ಚಿನ ಸಂಖ್ಯೆಯ ಅಂದರೆ, 75 ವಿಮಾನಗಳು ರಾಜಪಥದ ಆಗಸದಲ್ಲಿ ಪಥಸಂಚಲನ (ಫ್ಲೈಪಾಸ್ಟ್) ನಡೆಸಿದ್ದು ವಿಶೇಷ. ದೂರದರ್ಶನದ ಸಹಯೋಗದಲ್ಲಿ ವಾಯುಪಡೆಯುವ ಇದೇ ಮೊದಲ ಬಾರಿಗೆ ವಿಮಾನದಲ್ಲಿ ಸಾಗುವ ವಿಡಿಯೊಗಳನ್ನು ನೇರ ಪ್ರಸಾರ ಮಾಡಿದ್ದು ಮತ್ತೊಂದು ವಿಶೇಷ. ಮೋಡದ ಮೇಲೆ ಹಾರಾಡುವ ಹಾಗೂ ಆಗಸದಲ್ಲಿ ವಿಮಾನಗಳು ಆಕರ್ಷಕ ವಿನ್ಯಾಸ ರಚಿಸುವ ವಿಡಿಯೊಗಳು ಬೃಹತ್ ಪರದೆಯ ಮೇಲೆ ನೇರಪ್ರಸಾರವಾಗಿದ್ದು ಜನರ ಗಮನ ಸೆಳೆಯಿತು.

ಇತ್ತೀಚೆಗೆ ವಾಯುಪಡೆಗೆ ಸೇರ್ಪಡೆಯಾಗಿರುವ ಐದು ರಫೇಲ್ ಯುದ್ಧವಿಮಾನಗಳು ವಾಯು ಕಸರತ್ತು ನಡೆಸಿದ್ದು ಈ ಬಾರಿಯ ವಿಶೇಷತೆಗಳಲ್ಲೊಂದು. ವಿಂಟೇಜ್ ಹಾಗೂ ಆಧುನಿಕ ವಿಮಾನಗಳೆರಡೂ ಭಾಗಿಯಾಗಿದ್ದವು. ವಾಯುಪಡೆಯ ಎಂಐ29ಕೆ, ಗಸ್ತು ವಿಮಾನವಾದ ಪಿ-8ಐ, ರಫೇಲ್, ಸುಖೋಯ್, ಜಾಗ್ವಾರ್ ವಿಮಾನಗಳು ಹಾಗೂ ಎಂಐ-17, ಸಾರಂಗ್, ಅಪಾಚೆ ಮೊದಲಾದವು ಹೆಲಿಕಾಪ್ಟರ್‌ಗಳು ಪ್ರದರ್ಶನ ನೀಡಿದವು. ವಿಮಾನಗಳು ಆಗಸದಲ್ಲಿ ತಿರಂಗಾ, ತಂಗೈಲ್, ಏಕಲವ್ಯ, ರುದ್ರ, ತ್ರಿಶೂಲ ಮೊದಲಾದ ವಿನ್ಯಾಸಗಳನ್ನು ನಿರ್ಮಿಸಿದವು. ಮೂರೂ ಪಡೆಗಳ ವಿಮಾನಗಳು ಭಾಗಿಯಾಗಿದ್ದವು. ಒಂದು ಡಕೋಟ್ ಹಾಗೂ ಎರಡು ಡಾರ್ನಿಯರ್ ವಿಮಾನಗಳು 1971ರ ಯುದ್ಧದ ತಂಗೈಲ್ ಏರ್‌ಡ್ರಾಪ್ ಕಾರ್ಯಾಚರಣೆ ನೆನಪಿಸಿದವು. ಧ್ವಜ ವಿನ್ಯಾಸದ ಮೂಲಕ ಸೇನಾ ಕಸರತ್ತು ಶುರು ಮಾಡಲಾಗಿತ್ತು. ಕೊನೆಯಲ್ಲಿ 17 ಜಾಗ್ವಾರ್ ವಿಮಾನಗಳು 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ 'ಅಮೃತ' ವಿನ್ಯಾಸ ಮೂಡಿಸಿದವು.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 29

ಬ್ರಹ್ಮನ ಐದನೇ ತಲೆ ಕತ್ತರಿಸಿದ ಭೈರವ

ವಿಷ್ಣುವಿನ ನಡವಳಿಕೆ ಮೆಚ್ಚಿ ವರವನ್ನು ಕೊಟ್ಟ ಮಹಾದೇವ, ನಂತರ ಬ್ರಹ್ಮನ ದರ್ಪವನ್ನು ಇಳಿಸಲು ತನ್ನ ಹುಬ್ಬುಗಳ ನಡುವಿನಿಂದ ಭೈರವನೆಂಬ ಅದ್ಭುತಾಕಾರವುಳ್ಳ ಪುರುಷನೊಬ್ಬನನ್ನು ಸೃಷ್ಟಿಸಿದ. ಸುಳ್ಳು ಹೇಳಿದ ಬ್ರಹ್ಮನ ತಲೆಗಳನ್ನು ಕತ್ತರಿಸಲು ಭೈರವನಿಗೆ ಸೂಚಿಸುತ್ತಾನೆ. ಭೈರವನು ಬ್ರಹ್ಮನ ಜುಟ್ಟನ್ನು ಎಡಗೈನಲ್ಲಿ ಹಿಡಿದುಕೊಂಡು, ಬಲಗೈನಿಂದ ಸುಳ್ಳನ್ನು ಹೇಳಿದ ಐದನೆಯ ಶಿರಸ್ಸನ್ನು ಕತ್ತರಿಸುತ್ತಾನೆ. ನಂತರ ಬ್ರಹ್ಮನ ಉಳಿದ ನಾಲ್ಕು ತಲೆಗಳನ್ನು ಕತ್ತರಿಸಲು ಭೈರವ ಕತ್ತಿಯನ್ನು ಎತ್ತಿದಾಗ ವಿಷ್ಣುವಿಗೆ ಬ್ರಹ್ಮನ ಮೇಲೆ ಕನಿಕರವಾಗುತ್ತದೆ. ಶಿವನ ಕಾಲು ಹಿಡಿದು, ಬ್ರಹ್ಮನ ತಪ್ಪನ್ನು ಮನ್ನಿಸಿ, ಅವನ ಉಳಿದ ನಾಲ್ಕು ತಲೆಗಳನ್ನು ರಕ್ಷಿಸುವಂತೆ ಬೇಡಿಕೊಳ್ಳುತ್ತಾನೆ.

'ಬ್ರಹ್ಮನಿಗೆ ಜಗತ್ತಿನ ಒಡೆತನದ ಗುರುತಾಗಿ ಐದು ಮುಖಗಳನ್ನು ನೀನೇ ಅನುಗ್ರಹಿಸಿರುವೆ. ಅದಕ್ಕಾಗಿ ಯಾದರೂ ವಿಧಿಯ ತಪ್ಪನ್ನು ಮನ್ನಿಸು' ಎಂದು ವಿಷ್ಣು ಪರಿಪರಿಯಾಗಿ ಬೇಡಿಕೊಂಡದ್ದರಿಂದ ಶಿವ ಶಾಂತನಾಗುತ್ತಾನೆ. ಬ್ರಹ್ಮನ ಮತ್ತೊಂದು ತಲೆಯನ್ನು ಕತ್ತರಿಸಲು ಕತ್ತಿ ಎತ್ತಿದ ಭೈರವನನ್ನು ತಡೆಯುತ್ತಾನೆ. ನಂತರ ಮಹಾ ದೇವ ಐದನೆಯ ಶಿರಸ್ಸನ್ನು ಕಳೆದುಕೊಂಡ ಬ್ರಹ್ಮನಿಗೆ, 'ನೀನು ಜಗದೊಡೆಯನಾಗಬೇಕೆಂಬ ದುರಾಸೆಯಿಂದ ವಿಷ್ಣುವಿಗೆ ಮೋಸ ಮಾಡಿದೆ. ಕೇದಗೆಹೂವಿನಿಂದ ಸುಳ್ಳು ಹೇಳಿಸಿ ಅಧರ್ಮ ಉಂಟುಮಾಡಿದೆ. ಇದರಿಂದ ನಿನ್ನ ದೈವತ್ವ ನಶಿಸಿಹೋಯಿತು. ಆದಕಾರಣ ಲೋಕದಲ್ಲಿ ನಿನ್ನನ್ನು ಯಾರೂ ಪೂಜಿಸಲಾರರು. ನಿನಗೆ ಪ್ರತಿಷ್ಠೆ ಉತ್ಸವ ಮುಂತಾದವುಗಳೂ ನಡೆಯದಿರಲಿ' ಎಂದು ಶಾಪ ಕೊಡುತ್ತಾನೆ.

ಆಗ ಬ್ರಹ್ಮ ತಾನು ಮಾಡಿದ ಪಾಪಕ್ಕೆ ಪಶ್ಚಾತ್ತಾಪ ಪಡುತ್ತಾ, ಶಿವನ ಶಾಪದಿಂದ ದುಃಖತಪ್ತನಾಗುತ್ತಾನೆ. ಒಂದು ಕ್ಷಣದ ದುರಹಂಕಾರಕ್ಕೆ ಎಂಥ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂಬ ಅರಿವು ತನಗಾಯಿತು ಅಂತ ನೊಂದ ದನಿಯಲ್ಲಿ ಶಿವನ ಪಾದವಿಡಿದು ಕ್ಷಮೆ ಕೋರುತ್ತಾನೆ. ಅಲ್ಲದೆ, ಸುಳ್ಳು ಹೇಳಿದ ತನ್ನ ಐದನೆಯ ಶಿರಸ್ಸನ್ನು ಕತ್ತರಿಸಿದುದು ಒಳ್ಳೆಯದೇ ಆಯಿತು ಎನ್ನುತ್ತಾನೆ. ಆಗ ಮಹಾಶಿವ 'ನಿನ್ನ ಗರ್ವಕ್ಕೆ ಪ್ರಾಯಶ್ಚಿತ್ತವಾಗಿ ಐದನೇ ತಲೆ ಹೋಗಿದೆ. ಉಳಿದ ನಾಲ್ಕು ತಲೆಗಳಿಂದ ಜಗತ್ತಿನ ನಾಲ್ಕು ದಿಕ್ಕುಗಳನ್ನು ನ್ಯಾಯಬದ್ಧವಾಗಿ ಕಾಯುವವನಾಗು. ರಾಜಭಯವಿಲ್ಲದಿದ್ದರೆ ಈ ಲೋಕವೆಲ್ಲವೂ ನಷ್ಟವಾಗುವುದು. ಸಮರ್ಥರಾದ ರಾಜರು ಆಳದಿದ್ದರೆ ಲೋಕವು ದುರ್ಮಾಗಕ್ಕೆ ಇಳಿದು ಹಾಳಾಗುತ್ತದೆ. ಆದಕಾರಣ, ನೀನು ಭೂಲೋಕದಲ್ಲಿ ಅಪರಾಧಿಗಳನ್ನು ಶಿಕ್ಷಿಸುತ್ತಾ ಲೋಕವನ್ನು ರಕ್ಷಿಸುವವನಾಗು. ನಿನ್ನ ತಪ್ಪಿನಿಂದ ಲೋಕದಲ್ಲಿ ನಿನಗೆ ನಿತ್ಯಪೂಜೆ ಸಲ್ಲದಿದ್ದರೂ, ಯಾವುದೇ ಪೂಜಾಕಾರ್ಯಕ್ಕೂ ನೀನೇ ಗುರುವಾಗಿರುತ್ತೀಯ. ಜಗತ್ತಿನ ನಿತ್ಯಕರ್ಮಗಳಲ್ಲಿ ನೀನೇ ಗುರುವಾಗಿರುತ್ತೀಯಾ. ನೀನಿಲ್ಲದ ಕರ್ಮವು ನಿಷ್ಫಲವಾಗುತ್ತೆ. ಪರಿಪೂರ್ಣವಾದ ಮತ್ತು ಯೋಗ್ಯವಾದ ರೀತಿಯಲ್ಲಿ ಮಾಡಲ್ಪಟ್ಟಿದ್ದರೂ, ನಿನ್ನ ಅನುಗ್ರಹ ಇಲ್ಲದೆ ಆ ಕರ್ಮಕ್ಕೆ ಫಲವಿರುವುದಿಲ್ಲ' ಎಂದು ವರ ನೀಡಿದ.

ನಂತರ ಕೇದಗೆಗೆ 'ಇಲ್ಲಿ ನಿಲ್ಲದೆ ದೂರ ಹೊರಟು ಹೋಗು. ಇನ್ನು ಮುಂದೆ ಪೂಜೆಗಳಲ್ಲಿ ನನಗೆ ನಿನ್ನ ಹೂವು ಬೇಕಾಗಿಲ್ಲ' ಎನ್ನುತ್ತಾನೆ ಶಿವ. ಕೇದಗೆಹೂವು ಮಹಾದೇವನನ್ನು ಬೇಡಲು ಮುಂದಾದಾಗ ಅಲ್ಲಿದ್ದ ಎಲ್ಲಾ ದೇವತೆಗಳೂ 'ಇಷ್ಟೆಲ್ಲಾ ರಾದ್ಧಾಂತಕ್ಕೆ ನಿನ್ನ ಸುಳ್ಳೇ ಕಾರಣ' ಅಂತ ಬೇಡಿಕೊಳ್ಳಲು ಅವಕಾಶ ಕೊಡದೆ, ಕೇದಗೆಯನ್ನು ಅಲ್ಲಿಂದ ಬಲವಂತವಾಗಿ ಹೊರದೂಡಲೆತ್ನಿಸುತ್ತಾರೆ.

ಆಗ ಕೇದಗೆಯು 'ನಿನ್ನ ಶಾಪದಿಂದ ನನ್ನ ಜನ್ಮವೇ ವ್ಯರ್ಥವಾಯಿತು. ನನ್ನ ಜನ್ಮವನ್ನು ಸಾರ್ಥಕಗೊಳಿಸು. ನನ್ನ ತಪ್ಪನ್ನು ಮನ್ನಿಸು' ಅಂತ ಗೋಳಾಡುತ್ತದೆ. ಆಗ ಶಿವ ಪ್ರಸನ್ನನಾಗಿ 'ನನ್ನ ಶಾಪವನ್ನು ವ್ಯರ್ಥಮಾಡುವಂತಿಲ್ಲ. ಹೀಗಾಗಿ ನಿನ್ನನ್ನು ಧರಿಸುವುದು ನನಗೆ ಯೋಗ್ಯವಲ್ಲ. ಆದರೆ ನನ್ನ ಭಕ್ತರು ನಿನ್ನನ್ನು ಧರಿಸುವರು. ಇದರಿಂದ ನಿನ್ನ ಜನ್ಮವು ಸಫಲವಾಗುವುದು. ಹಾಗೇ, ನೀನು ಧ್ವಜದ ಆಕಾರದಿಂದ ನನ್ನ ಸೇವೆಗೂ ಉಪಯುಕ್ತವಾಗುವೆ' ಎಂದು ವರವಿತ್ತು ಸಮಾಧಾನಿಸಿದ ಎಂಬಲ್ಲಿಗೆ ಶ್ರೀ ಶಿವಮಹಾಪುರಾಣದ ವಿದ್ಯೇಶ್ವರಸಂಹಿತೆಯ ಎಂಟನೆ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜನವರಿ 27, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 13 ನೇ ದಿನ ತಿಥಿ: (ಪೌಷ ಕೃಷ್ಣ) ದಶಮಿ ಗಂ. 26-17 ನಕ್ಷತ್ರ: ವಿಶಾಖ ಗಂ. 08-51 ಯೋಗ: ವೃದ್ಧಿ ಗಂ. 25-04, ಕರಣ: ವಣಿಜ ಗಂ. 15-29. ರಾಹುಕಾಲ : ಮಧ್ಯಾಹ್ನ 01:30–03:00 ಸೂರ್ಯೋದಯ : 07-01 ಸೂರ್ಯಾಸ್ತ : 06-25 ಮುಸ್ಲಿಂ ದಿನಾಂಕ : 23 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ: 4, 10

ಮೇಷ: ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನ ಗಳಿಸುವಿರಿ.

ವೃಷಭ: ಹೊಸ ವಾಹನ ಅಥವಾ ಮನೆ ಖರೀದಿ ಯೋಗ. ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲ. ಸಂಶೋಧನಾಗಾರರಿಗೆ, ನ್ಯಾಯಾಂಗ ಇಲಾಖೆಯವರಿಗೆ ಒಳ್ಳೆಯ ದಿನ. ಶುಭ ಫಲಗಳಿಗಾಗಿ ವಿಷ್ಣು ಸಹಸ್ರನಾಮ ಪಠಿಸಿ.

ಮಿಥುನ: ಮಾನಸಿಕ ನೆಮ್ಮದಿಗಾಗಿ ದೇವತಾ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನ ಮಾಡಿ. ಸರ್ಕಾರಿ ಗುತ್ತಿಗೆದಾರರಿಗೆ ಬಹಳ ದಿನದಿಂದ ಬಾಕಿ ಇದ್ದ ಕಾಮಗಾರಿ ಹಣ ಮಂಜೂರಾಗಲಿದೆ. ಸಗಟು ಧಾನ್ಯ ವ್ಯಾಪಾರಿಗಳಿಂದ ಲಾಭ.

ಕರ್ಕಾಟಕ: ರಸ ಪದಾರ್ಥಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ. ಓದು ಅಥವಾ ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ.

ಸಿಂಹ: ನೀವು ಹಿಂದೆ ಮಗನ ಒಳಿತಿಗಾಗಿ, ಅಭ್ಯುದಯಕ್ಕಾಗಿ ತೆಗೆದುಕೊಂಡ ಕೆಲ ಕಠಿಣ ನಿರ್ಧಾರಗಳಿಂದಾಗಿ ಇಂದು ಉತ್ತಮ ಫಲ ನಿರೀಕ್ಷಿಸಬಹುದಾಗಿದೆ. ಹುಟ್ಟೂರಿನಿಂದ ಶುಭಸುದ್ದಿಯನ್ನು ಕೇಳುವಿರಿ.

ಕನ್ಯಾ: ವಿಮಾ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ತೋರಿದ್ದಕ್ಕೆ ನಿಮಗೆ ಸಂಸ್ಥೆಯವರಿಂದ ವಿಶೇಷ ಪುರಸ್ಕಾರಗಳು ದೊರೆಯಲಿದೆ. ಮಕ್ಕಳ ವಿದ್ಯಾಭ್ಯಾಸದ ಗಮನ ತೋರಿ. ಮದುವೆಯ ಕೆಲಸ ಕಾರ್ಯಗಳನ್ನು ಮುಗಿಸಿಕೊಳ್ಳಲು ಓಡಾಟ ಹೆಚ್ಚುವುದು.

ತುಲಾ: ವಾಣಿಜ್ಯ ವ್ಯವಹಾರಗಳು ಲಾಭ. ಗಣ್ಯವ್ಯಕ್ತಿಯ ಭೇಟಿಯಿಂದ ಅನುಕೂಲ ಉಂಟಾಗುವುದು. ಆದಾಯದಷ್ಟೇ ಖರ್ಚು ಇರುವುದು. ಆದ್ದರಿಂದ ವ್ಯವಹರಿಸುವಾಗ ಎಚ್ಚರ ಅಗತ್ಯ. ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯವೆನಿಸಲಿದೆ.

ವೃಶ್ಚಿಕ: ಜೀವನ ಶೈಲಿ ಬದಲಾವಣೆಯಾಗುವ ದಿನ. ವೃತ್ತಿಪರ ಹೊಸ ವಿಷಯಗಳು ನಿಮ್ಮ ಅನುಭವಕ್ಕೆ ಬರಲಿವೆ. ಅಪರಿಚಿತರೊಂದಿಗೆ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ನಿಮ್ಮ ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುವುದು.

ಧನು: ನಿಮ್ಮ ಮನಸ್ಸಿನ ಭಾವನೆಗಳನ್ನು ನಿಮ್ಮ ಸ್ನೇಹಿತರಲ್ಲಿ ಹೇಳಿಕೊಳ್ಳುವಿರಿ. ಅದರಿಂದಾಗಿ ಬಹಳ ದಿನದಿಂದ ಇದ್ದ ನಿಮ್ಮ ಆತಂಕ ದೂರಾಗುವುದು. ಮಕ್ಕಳ ವಿಚಾರದಲ್ಲಿ ಹೇಳಿಕೊಂಡಿರುವ ಹರಕೆ ತೀರಿಸುವ ಬಗ್ಗೆ ನೆನಪಿರಲಿ.

ಮಕರ: ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು. ಇಂದು ನಿಮ್ಮಲ್ಲಿನ ಸೃಜನಶೀಲತೆಗೆ ಉತ್ತಮ ವೇದಿಕೆ ಲಭಿಸಲಿದೆ. ಬಡಗಿ ಕೆಲಸ ಮಾಡುವವರಿಗೆ ಇಂದು ಸುಯೋಗವಿದೆ.

ಕುಂಭ: ಇಂದು ನೀವು ಸರಿಯಾದ ಹಾದಿಯಲ್ಲಿಯೇ ನಡೆಯುವಿರಿ. ಬದುಕನ್ನು ವಿಲಾಸಿಯಾಗಿ ಕಳೆಯುವ ಹೊರತಾಗಿ ಅನೇಕ ಜವಾಬ್ದಾರಿಗಳಿವೆ ಎಂಬುದನ್ನು ಮರೆಯದಿರಿ. ಸೌಂದರ್ಯವರ್ಧಕಗಳ ವ್ಯಾಪಾರಿಗಳಿಗೆ ಇಂದು ಒಳ್ಳೆಯ ದಿನ.

ಮೀನ: ಸಹೋದರರ ಮೇಲೆ ವಿಶಾಲವಾದ ಭಾವನೆ ಇರಲಿ. ದೊಡ್ಡ ಯೋಜನೆಗಳನ್ನು ಕೈಗೊಳ್ಳುವ ಮೊದಲು ಮಹಾಗಣಪತಿಯನ್ನು ಆರಾಧಿಸಿ, ನಂತರದಲ್ಲಿ ಸಿದ್ಧತೆ ನಡೆಸಿ. ಸಂಬಂಧದಲ್ಲಿ ಸೌಹಾರ್ದತೆ ಕಾಯ್ದುಕೊಳ್ಳುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ವಿಧಿಯ ದಾಳಿ

ತಾಳಿ ಮೆಲುಮೆಲನೊಮ್ಮೆ ಧಾಳಿ ರಭಸದಿನೊಮ್ಮೆ |
ಹೇಳದೆಯೆ ಕೇಳದೆಯೆ ಬಹನು ವಿಧಿರಾಯ ||
ಕೀಳ ಮೇಲಾಗಿಪನು ಮೇಲ ಕೀಳಾಗಿಪನು |
ತಾಳುಮೆಯಿನಿರು ನೀನು –ಮಂಕುತಿಮ್ಮ || 550 ||

ಪದ-ಅರ್ಥ: ಮೆಲುಮೆಲನೊಮ್ಮೆ = ಮೆಲು + ಮೆಲನೆ + ಒಮ್ಮೆ, ಬಹನು = ಬರುವನು, ತಾಳುಮೆಯಿನಿರು = ತಾಳುಮೆಯಿನ್(ತಾಳ್ಮೆಯಿಂದ) + ಇರು

ವಾಚ್ಯಾರ್ಥ: ಈ ವಿಧಿರಾಯನೆಂಬುವವನು ಹೇಳದೆಯೆ, ಕೇಳದೆಯೆ, ಕೆಲವೊಮ್ಮೆ ಹಗುರವಾಗಿ ಮೆಲ್ಲಮೆಲ್ಲನೆ ಬಂದರೆ ಕೆಲವೊಮ್ಮೆ ದಾಳಿ ಮಾಡುವಂತೆ ರಭಸದಲ್ಲಿ ಬರುತ್ತಾನೆ. ಬಂದವನೇ ಕೆಳಗಿದ್ದನ್ನು ಮೇಲೆ, ಮೇಲಿದ್ದನ್ನು ಕೆಳಗೆ ಮಾಡಿ ಬಿಡುತ್ತಾನೆ. ನೀನು ತಾಳ್ಮೆಯಿಂದಿರು.

ವಿವರಣೆ: ರಾಜ ತನ್ನ ರಾಜ್ಯದಲ್ಲಿ ಪ್ರವಾಸ ಮಾಡುತ್ತಿದ್ದ. ತಾನೊಬ್ಬ ಅತ್ಯಂತ ಸಮರ್ಥ ಆಡಳಿತಗಾರ, ಪ್ರಜಾ ಚಿಂತಕ ಎಂಬುದರ ಅರಿವು ಅವನಿಗಿತ್ತು. ನಗರಗಳಲ್ಲಿ, ಹಳ್ಳಿಗಳಲ್ಲಿ ಜನರ ಸಭೆ ಕರೆದಿದ್ದ, ಎತ್ತರದ ದಿನ್ನೆಯ ಮೇಲೆ ಅವನ ಅಲಂಕೃತ ಕುರ್ಚಿಯನ್ನಿಟ್ಟಿದ್ದರು. ಜನರೆಲ್ಲ ಕೆಳಗೆ ನೆಲದ ಮೇಲೆ ಕುಳಿತಿದ್ದರು. ಉಭಯಕುಶಲೋಪರಿಯಾದ ಮೇಲೆ ನಗರದ ಹಿರಿಯನೊಬ್ಬ ರಾಜನಿಗೆ ಗೌರವ ಸಲ್ಲಿಸಿ ಮಾತನಾಡಿದ. 'ಮಹಾರಾಜರು ದಕ್ಷರು, ಜನರ ಪ್ರೀತಿಗೆ ಮಾನ್ಯರಾದವರು. ಅವರು ಹೀಗೆಯೇ ದೀರ್ಘಕಾಲ ಅಧಿಕಾರದಲ್ಲಿರಲಿ. ವಿಧಿ ಅವರನ್ನು ಯಾವಾಗಲೂ ಕರುಣೆಯಿಂದ ಕಾಣಲಿ' ಎಂದ. ರಾಜ ತಕ್ಷಣವೇ ಕೇಳಿದ, 'ವಿಧಿ ಏನು ಮಾಡುತ್ತದೆ? ನಮ್ಮ ಪ್ರಯತ್ನವೇ ಮುಖ್ಯ. ವಿಧಿ ಎನ್ನುವುದು ಹೇಡಿಗಳ ಮತ್ತು ಸೋಮಾರಿಗಳ ಮಾತು. ಯಾರಾದರು ವಿಧಿಯನ್ನು ಕಂಡಿದ್ದೀರಾ? ಅದು ಏನು ಮಾಡುತ್ತದೆ ಎಂಬುದನ್ನು ತಿಳಿದಿದ್ದೀರಾ?' ಅವನ ಕೋಪ ಏರುತ್ತಿತ್ತು. ಆಗ ಅಲ್ಲಿ ನಿಂತಿದ್ದ ಒಬ್ಬ ದನಗಾಹಿ ಹುಡುಗ ಜೋರಾಗಿ ಕೂಗಿದ, 'ಪ್ರಭುಗಳೇ, ನನಗೆ ವಿಧಿ ಏನು ಮಾಡುತ್ತದೆ ಗೊತ್ತು'. ರಾಜ ಅವನನ್ನು ಹತ್ತಿರಕ್ಕೆ ಕರೆದ. 'ನೀನು ಹೇಳಯ್ಯ, ವಿಧಿ ಏನು ಮಾಡಬಲ್ಲದು?'. ಹುಡುಗ ಹೇಳಿದ, 'ಮಹಾಪ್ರಭೂ, ಕೇವಲ ಐದು ನಿಮಿಷ ನಾನು ಹೇಳಿದ ಹಾಗೆ ತಾವು ಕೇಳಬೇಕು. ಯಾಕೆ ಎಂದು ಕೇಳಕೂಡದು. ಹಾಗೆ ಮಾಡಿದರೆ ನಾನು ವಿಧಿಯ ಕರಾಮತ್ತನ್ನು ತೋರಿಸುತ್ತೇನೆ'. ರಾಜ ಆಯ್ತು ಎಂದ. ಹುಡುಗ, 'ಈಗ ತಾವು ನಾನು ನಿಂತಲ್ಲಿಗೆ ಹೋಗಿ ಕೂಡ್ರಬೇಕು. ರಾಜ ಹಾಗೆಯೇ ಮಾಡಿದ. ಹುಡುಗ ನೇರವಾಗಿ ಹೋಗಿ ರಾಜನಿಗಾಗಿ ಇಟ್ಟಿದ್ದ ಕುರ್ಚಿಯಲ್ಲಿ ಕುಳಿತ. ಜನ ಗಾಬರಿಗೊಂಡರು, ಗದ್ದಲವಾಯಿತು'. ಹುಡುಗ ಹೇಳಿದ, 'ದಯವಿಟ್ಟು ಸುಮ್ಮನಿರಿ. ನನಗಿರುವುದು ಐದೇ ನಿಮಿಷ'. ನಂತರ ರಾಜನೆಡೆಗೆ ನೋಡಿ ಹೇಳಿದ, 'ಮಹಾರಾಜರೆ ತಿಳಿಯಿತೇ ವಿಧಿಯ ಶಕ್ತಿ? ಎರಡೇ ನಿಮಿಷದಲ್ಲಿ ರಾಜನಾದವನನ್ನು ನೆಲದಲ್ಲಿ ಕೂಡ್ರಿಸಿತು, ದನಕಾಯುವವನನ್ನು ಸಿಂಹಾಸನದಲ್ಲಿ ಕೂಡ್ರಿಸಿತು'.

ವಿಧಿಯ ಈ ಕೈವಾಡವನ್ನು ಕಗ್ಗ ಹೇಳುತ್ತದೆ. ವಿಧಿ ನಮ್ಮ ಮೇಲೆ ಹೇಗೆ ಆಕ್ರಮಣ ಮಾಡುತ್ತದೆಂಬುದನ್ನು ತಿಳಿಯುವುದು ಕಷ್ಟ. ನಿಧಾನವಾಗಿಯೋ, ರಭಸದಿಂದಲೋ ನಮ್ಮ ಬಾಳಿನಲ್ಲಿ ನುಗ್ಗಿ ಕೆಳಗಿರುವುದನ್ನು ಮೇಲೆ ಮಾಡಿ, ಮೇಲಿರುವುದನ್ನು ಕೆಳಗೆ ಮಾಡಿ ಬಿಡುತ್ತದೆ. ಹೆಸರಿಲ್ಲದ ಹುಡುಗ, ಚಾಣಕ್ಯನ ಕೈಗೆ ಸಿಕ್ಕಿ ಚಂದ್ರಗುಪ್ತ ಮೌರ್ಯನಾಗುತ್ತಾನೆ, ಅಧಿಕಾರದ ಎತ್ತರದಲ್ಲಿ ಉನ್ಮತ್ತತೆಯಲ್ಲಿ ಇದ್ದ ಸದ್ದಾಂ ಹುಸೇನ ಅನಾಥನಂತೆ ಗಲ್ಲಿಗೇರುತ್ತಾನೆ. ನಾಗರಿಕತೆಯ ಔನ್ನತ್ಯದಲ್ಲಿದ್ದ ರೋಮ್ ಸಾಮ್ರಾಜ್ಯ ಕುಸಿದುಹೋಗುತ್ತದೆ. ಜನರು ಹೆಸರೇ ಕೇಳಿಲ್ಲದ ವ್ಯಕ್ತಿ ರಾಷ್ಟ್ರಪತಿಯಾಗುತ್ತಾನೆ. ಹಣ, ಅಧಿಕಾರದಿಂದ ಎತ್ತರಕ್ಕೇರಿದ್ದ ಮನುಷ್ಯ ಜೈಲು ಸೇರುತ್ತಾನೆ. ಹಾಗೆ ಸೇರುವುದಕ್ಕಿಂತ ಮೊದಲು ತಾನು ಅಜೇಯ, ಅಭೇದ್ಯ ಎಂದುಕೊಂಡಿದ್ದ. ಹೀಗಾಗಿ ವಿಧಿ ಧಾಳಿ ಮಾಡಿದಾಗ ನಮಗಿರುವ ಢಾಲು, ರಕ್ಷಕ ಎಂದರೆ ತಾಳ್ಮೆ ಒಂದೇ.

ಪದಬಂಧ 4851

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಎಣೆಯಿಲ್ಲದುದು (4)
3.ಕೊನೆಗೆ ಬೆಲೆಯಿದ್ದಾಗ ಕಣಿವೆ ಕಂಡೀತೇ? (3)
4.ಜಾತಿಯನ್ನು ಮೀರಿದವನು (4)
6.ಬೂದಿ ಇಲ್ಲಿದೆ (2)
7.ಜಾಲಾಡುವಾಗ ಸುಳಿವು ಸಿಕ್ಕೀತೇ? (2)
8.ಕೂಪ ಇಲ್ಲಿ ಕಾಣುತ್ತಿದೆ (2)
9.ಇದು ನಿಜವಾದುದು (2)
10.ಕೆಮ್ಮಿದಾಗ ಹೊರಬೀಳುವ ಶ್ಲೇಷ್ಮ (2)
11.ಹುರಿ ಮಾಡಿದ ಹತ್ತಿಯ ಎಳೆ (2)
14.ಕ್ಷಮೆಯನ್ನು ಯಾಚಿಸುವುದು (4)
16.ಬಾಗಿ ತೆರೆದ ಕದ! (3)
17.ಓಡುತ್ತ ಹೋಗಿ ಸುದ್ದಿ ಮುಟ್ಟಿಸುವವನು (4)

ಮೇಲಿಂದ ಕೆಳಕ್ಕೆ

1.ರಾಣಿ ಇಲ್ಲಿದ್ದಾಳೆ (3)
2.ತಮಾಷೆ ಅಥವಾ ಮೋಜು (2)
3.ಕಂಚಿನ ದೊಡ್ಡ ತಾಳ (3)
5.ಭತ್ತ ಮೊದಲಾದ ಧಾನ್ಯದ ಹೊಟ್ಟು (3)
6.ಸಂಸಾರ ಬಂಧನಕ್ಕೆ ಒಳಗಾದವನು (2)
9.ಅತ್ತಿತ್ತ ನೋಡುವಾಗ ಮೊಟ್ಟೆ ಕಾಣಿಸಿತಲ್ಲಾ! (2)
10.ಕಕ್ಷದಲ್ಲಿರುವ ಕೃಪಾದೃಷ್ಟಿ! (3)
12.ಹಗಲು ಹೊತ್ತಿನಲ್ಲಿ ಕಾಣಿಸಿದ ಚರ್ಮ! (3)
13.ಮಣ್ಣಿನಿಂದ ಪಾತ್ರೆಗಳನ್ನು ಮಾಡುವವನು (3)
15.ತಿರುವು ಮುರುವಾದ ನೊಸಲು! (2)



4850ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿಶ್ವಸಂಸ್ಥೆ 2.ಹಮ್ಮೀರ 4.ಗದ್ಗದ 6.ಗಲಾಟೆ 7.ವಿಮಾನಯಾನ 10.ಗುಲಾಬಿ 11.ಕತ್ತಲೆ 13.ಕಡಲು 14.ಪರಿಣಿತ

ಮೇಲಿಂದ ಕೆಳಕ್ಕೆ: 1.ವಿಯೋಗ 2.ಹರಟೆ 3.ರಕ್ಷಕ 5.ದನೋವಿ 6.ಗಗನಚುಂಬಿ 8.ನಡುಕ 9.ಮುದುಕ 10.ಗುಲಾಲು 12.ಲೆಪ್ಪತ

ಸುಡೊಕು 5237

	8			7			4	
		4	6		8			9
7				1		8		
					4	6	7	
6		1	7		2			4
								1
				6		5		
	3	6	2		5			7
8		5		4			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5236 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2

ಹರಿಪ್ರಸಾದ್ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಪ್ರಜಾವಾಣಿ ವಾರ್ತೆ

ಬಿ. ಕೆ. ಹರಿಪ್ರಸಾದ್


ಪ್ರಕಾಶ್ ರಾಠೋಡ್

ಬೆಂಗಳೂರು: ರಾಜ್ಯ ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾಗಿ ಬಿ.ಕೆ. ಹರಿಪ್ರಸಾದ್, ಉಪ ನಾಯಕರಾಗಿ ಕೆ. ಗೋವಿಂದರಾಜ್ ಹಾಗೂ ಮುಖ್ಯ ಸಚೇತಕರಾಗಿ ಪ್ರಕಾಶ್ ರಾಥೋಡ್ ಅವರನ್ನು ಕಾಂಗ್ರೆಸ್ ನೇಮಿಸಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಈ ನೇಮಕ ಮಾಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ. ವಿರೋಧ ಪಕ್ಷದ ನಾಯಕರಾಗಿದ್ದ ಎಸ್.ಆರ್. ಪಾಟೀಲ ಮತ್ತು ಮುಖ್ಯ ಸಚೇತಕರಾಗಿದ್ದ ನಾರಾಯಣ ಸ್ವಾಮಿ ಅವರ ಅವಧಿ ಜ. 5ಕ್ಕೆ ಮುಕ್ತಾಯ ಆಗಿತ್ತು. ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಪಾಟೀಲ ಅವರಿಗೆ ಪಕ್ಷ ಟಿಕೆಟ್ ನೀಡಿರಲಿಲ್ಲ. ನಾರಾಯಣ ಸ್ವಾಮಿ ಮತ್ತೆ ಸ್ಪರ್ಧಿಸಲು ನಿರಾಕರಿಸಿದ್ದರು.


ಗೋವಿಂದರಾಜ್

ಹರಿಪ್ರಸಾದ್ ಅವರು ಈಡಿಗ ಸಮುದಾಯಕ್ಕೆ ಸೇರಿದವರು. ಲಿಂಗಾಯತ ಸಮುದಾಯದ ಎಂ.ಬಿ. ಪಾಟೀಲ ಅವರಿಗೆ ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷ ಸ್ಥಾನ ನೀಡಿದ ಕಾಂಗ್ರೆಸ್, ಇದೀಗ ಹಿಂದುಳಿದ ಸಮುದಾಯದ ಮೇಲೆ ತನ್ನ ಹಿಡಿತ ಬಲಪಡಿಸುವ ಉದ್ದೇಶದಿಂದ ಆ ವರ್ಗದ ನಾಯಕನಿಗೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನ ನೀಡಿದೆ ಎಂದು ಹೇಳಲಾಗುತ್ತಿದೆ.

ಕಾಶಿಯ 125ರ ಯೋಗ ಪಟುವಿ ಶಿವಾನಂದಗೆ ಪ್ರಶಸ್ತಿ

‘ಎಲೆಮರೆ ಕಾಯಿ’ಗಳಿಗೆ ‘ಪದ್ಮಶ್ರೀ’

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ‘ಅತ್ಯುನ್ನತ ನಾಗರಿಕ ಪ್ರಶಸ್ತಿ’ ಎಂದೇ ಕರೆಯಲಾಗುವ ‘ಪದ್ಮ’ ಪ್ರಶಸ್ತಿಗೆ ವಿವಿಧ ಕ್ಷೇತ್ರದ ಅದ್ವಿತೀಯ ಸಾಧಕರನ್ನು ಆಯ್ಕೆ ಮಾಡಲಾಗುತ್ತದೆ. ಪ್ರಸಕ್ತ ಸಾಲಿನ ಪ್ರಶಸ್ತಿಗೆ ಅಂಥ ವಿಶಿಷ್ಟ ಸಾಧನೆ ಮಾಡಿದ ಕೆಲವು ಹಿರಿಯ ಸಾಧಕರನ್ನೂ ಪರಿಗಣಿಸಲಾಗಿದೆ.

ಇವರಲ್ಲಿ ಕಾಶಿ ಮೂಲದ 125 ವರ್ಷ ವಯಸ್ಸಿನ ಯೋಗ ಪಟು, ಪ್ರವಾಹ ಸಂತ್ರಸ್ತರಿಗಾಗಿ ಬಟ್ಟೆ ಸಂಗ್ರಹಿಸಲೆಂದೇ ‘ವಸ್ತ್ರ ಬ್ಯಾಂಕ್’ ಆರಂಭಿಸಿದ್ದ 91 ವರ್ಷದ ವೃದ್ಧೆ, ಪೋಲಿಯೊ ವಿರುದ್ಧದ ಹೋರಾಟವನ್ನು ಮುಂದುವರಿಸಿರುವ 82 ವರ್ಷದ ಎಲುಬು–ಕೀಲು ತಜ್ಞ ಹಾಗೂ ಕಾಶ್ಮೀರದ ಬಂಡಿಪುರ ಮೂಲದ 33 ವರ್ಷ ವಯಸ್ಸಿನ ಸಮರ ಕಲೆಯ (ಮಾರ್ಷಲ್ ಆರ್ಟ್ಸ್) ಪಟು ‘ಪದ್ಮಶ್ರೀ’ ಪ್ರಶಸ್ತಿಗೆ ಆಯ್ಕೆಯಾದ ‘ಎಲೆ ಮರೆ ಕಾಯಿ’ಗಳಾಗಿದ್ದಾರೆ.

ಉತ್ತರ ಪ್ರದೇಶದ ಕಾಶಿ (ವಾರಾಣಸಿ) ನಗರದ 125 ವರ್ಷ ವಯಸ್ಸಿನ ಯೋಗ ಪಟು ಶಿವಾನಂದ ಅವರು ದೇಶದ ಇತಿಹಾಸದಲ್ಲೇ ‘ಪದ್ಮ’ ಪ್ರಶಸ್ತಿ ಪಡೆದಿರುವ ಅತ್ಯಂತ ಹಿರಿಯ ಎಂದು ಸರ್ಕಾರ ಹೇಳಿದೆ. ‘ಯೋಗ ಸೇವಕ’ ಎಂದೇ ಹೆಸರಾಗಿರುವ ಇವರ ಸೇವೆಗೆ ಪ್ರಶಸ್ತಿ ಸಂದಿದೆ.

ಕಳೆದ ಮೂರು ದಶಕಗಳಿಂದ ಯೋಗ ಅಭ್ಯಾಸದಲ್ಲಿ ತೊಡಗಿರುವ ಇವರು, ಸುತ್ತಮುತ್ತಲಿನ ಅನೇಕರಿಗೆಯೋಗದಮಹತ್ವವನ್ನುಹೇಳಿಕೊಡುತ್ತಲೇ ಕಾಶಿಯ ಘಾಟ್‌ಗಳನ್ನು ಸುತ್ತುತ್ತಿದ್ದಾರೆ. ಅಸ್ಸಾಂನ ಸಮಾಜ ಸೇವಕಿ ಶಕುಂತಲಾ ಚೌಧರಿ ಅವರು ಶಿವಾನಂದ ಅವರಂತೆಯೇ ‘ಪದ್ಮಶ್ರೀ’ ಪಡೆದಿರುವ ಮತ್ತೊಬ್ಬ ಶತಾಯುಷಿಯಾಗಿದ್ದಾರೆ. ಆದರೆ, ಇವರ ಸಾಧನೆಯ ಕ್ಷೇತ್ರ ಭಿನ್ನವಾದದ್ದು.

‘ಕಳೆದ ಏಳು ದಶಕಗಳಿಂದ ಮೌನವಾಗಿಯೇ ಜನಸೇವೆಯಲ್ಲಿ ತೊಡಗಿ, ಅದರ ಮೌಲ್ಯವನ್ನು ಹೆಚ್ಚಿಸುತ್ತಿರುವ 102 ವರ್ಷ ವಯಸ್ಸಿನ ಶಕುಂತಲಾ, ಈಶಾನ್ಯ ಭಾರತದಲ್ಲಿ ಗ್ರಾಮ ಸೇವಾ ಕೇಂದ್ರಗಳನ್ನು ಸ್ಥಾಪಿಸಿದವರಲ್ಲಿ ಪ್ರಮುಖರು. ಸ್ತ್ರೀಶಕ್ತಿ ಜಾಗರಣ ಚಳವಳಿ ನಡೆಸುತ್ತಲೇ ಗ್ರಾಮಸ್ಥರ ಸೇವೆ ಸಲ್ಲಿಸುತ್ತಿರುವ ಇವರು, ಮಹಾತ್ಮ ಗಾಂಧಿ ಹಾಗೂ ವಿನೋಬಾ ಭಾವೆ ಅವರ ಅನುಯಾಯಿ.

ಶತಾಯುಷಿಗಳೊಂದಿಗೆ ‘ಪದ್ಮಶ್ರೀ’ಗೆ ಪಾತ್ರರಾಗಿರುವ ಕಾಶ್ಮೀರದ ಬಂಡಿಪೋರಾದ 33 ವರ್ಷ ವಯಸ್ಸಿನ ‘ಸಮರ ಕಲೆಯ ಗುರು’ ಫೈಸಲ್ ಅಲಿ ದಾರ್, ಪ್ರಶಸ್ತಿ ಪಡೆದವರಲ್ಲೇ ಅತ್ಯಂತ ಕಿರಿಯರು.

ಬಂಡಿಪೋರಾದಲ್ಲಿ ಕ್ರೀಡಾ ಅಕಾಡೆಮಿ ಸ್ಥಾಪಿಸಿ ಸಮರ ಕಲೆಯ ಪಟ್ಟುಗಳನ್ನು ಹೇಳಿಕೊಡುವ ಮೂಲಕ ಇದುವರೆಗೆ ಅಂದಾಜು 4,000 ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ.

ಗುಜರಾತ್‌ನ ಕಚ್‌ನಲ್ಲಿ ಪ್ರವಾಹ ಸ್ಥಿತಿ ತಲೆದೋರಿದ ಸಂದರ್ಭ ಸಂತ್ರಸ್ತರಿಗಾಗಿ ಬಟ್ಟೆ ಸಂಗ್ರಹಿಸಿಕೊಡಲು ‘ವಸ್ತ್ರ ಬ್ಯಾಂಕ್’ ಸ್ಥಾಪಿಸಿ, ಅಗತ್ಯ ನೆರವು ನೀಡಿದ 91 ವರ್ಷ ವಯಸ್ಸಿನ ಪ್ರಭಾ ಬೆನ್ ಶಾ ಅವರಿಗೆ ‘ಪದ್ಮಶ್ರೀ’ ಗೌರವ ಸಂದಿದೆ.

ಅಂದಾಜು 20 ಲಕ್ಷ ಮಂದಿ ಪೋಲಿಯೊ ಪೀಡಿತರಿಗೆ ಚಿಕಿತ್ಸೆ ನೀಡಿ ನೆರವಾಗಿದ್ದಲ್ಲದೆ, ಸುಮಾರು 1 ಲಕ್ಷ ಜನ ರೋಗಿಗಳಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಹೆಸರಾಗಿರುವ ವಿಶಾಖಪಟ್ಟಣದ ಸುಂಕರ ವೆಂಕಟ ಆದಿ ನಾರಾಯಣ ರಾವ್ ಅವರನ್ನು ‘ಪದ್ಮಶ್ರೀ’ ಅರಸಿ ಬಂದಿದೆ.

ವಿಶಿಷ್ಟ ಸೇವೆ ಸಲ್ಲಿಸಿಯೂ ಎಲೆ ಮರೆ ಕಾಯಿಯಂತೆ ಇದ್ದ ಅನೇಕರು ‘ಪದ್ಮಶ್ರೀ’ ಪ್ರಶಸ್ತಿ ಪಟ್ಟಿಯಲ್ಲಿ ಸ್ಥಾನ ಪಡೆದಿರುವುದು ವಿಶೇಷ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಮಿಸಳ್ ಹಾಪ್ಚಾ
ಆಹಾಹಾ... ಸಾವಜಿ ಊಟ
https://bit.ly/3lVtgSD

ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್

ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಕಾಲೇಜುಗಳಲ್ಲಿ ‘ಹಿಜಾಬ್’: ವಿವಾದ
ಭಾಗವಹಿಸುವವರು:
ಯಶ್‌ಪಾಲ್ ಸುವರ್ಣ, ಉಡುಪಿಯ ಸರ್ಕಾರಿ ಪದವಿಪೂರ್ವ ಬಾಲಕಿಯರ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ, ಬಿಜೆಪಿ ಮುಖಂಡ. **ಡಾ. ಮಹಾಬಲೇಶ್ವರ ರಾವ್,** ಶಿಕ್ಷಣ ತಜ್ಞ, ಉಡುಪಿ. **ಲುಕ್ಮಾನ್ ಬಂಟ್ವಾಳ,** ಯುವ ಕಾಂಗ್ರೆಸ್ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ, ಮಂಗಳೂರು. **ವಿದ್ಯಾ ದಿನಕರ್,** ಸಾಮಾಜಿಕ ಕಾರ್ಯಕರ್ತೆ, ಮಂಗಳೂರು

ಸಂವಾದ
ಬೆಳಿಗ್ಗೆ 11ರಿಂದ 12

ಮಧು ಮಾದೇಗೌಡ, ಬಸವರಾಜ ಗುರಿಕಾರಗೆ ಕಾಂಗ್ರೆಸ್ ಟಿಕೆಟ್

ಪ್ರಜಾವಾಣಿ ವಾರ್ತೆ

ಮಧು ಮಾದೇಗೌಡ

ಬಸವರಾಜ ಗುರಿಕಾರ

ನವದೆಹಲಿ: ರಾಜ್ಯ ವಿಧಾನ ಪರಿಷತ್‌ನ ದಕ್ಷಿಣ ಪದವೀಧರ ಕ್ಷೇತ್ರ ಹಾಗೂ ಪಶ್ಚಿಮ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ತನ್ನ ಅಭ್ಯರ್ಥಿಗಳನ್ನು ಕಾಂಗ್ರೆಸ್ ಬುಧವಾರ ಪ್ರಕಟಿಸಿದೆ.

ಜಿ.ಮಾದೇಗೌಡ ಅವರ ಪುತ್ರ ಮಧು ಮಾದೇಗೌಡ ಅವರಿಗೆ ದಕ್ಷಿಣ ಪದವೀಧರ ಕ್ಷೇತ್ರದಿಂದ ಹಾಗೂ ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ಬಸವರಾಜ ಗುರಿಕಾರ ಅವರಿಗೆ ಟಿಕೆಟ್ ನೀಡಲಾಗಿದೆ.

ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ರಾಷ್ಟ್ರೀಯ ಸಂಘದ ಉಪಾಧ್ಯಕ್ಷರಾಗಿರುವ ಗುರಿಕಾರ ಅವರು ಇತ್ತೀಚೆಗೆ ನಡೆದಿದ್ದ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು.

ಪಕ್ಷದಿಂದ ಸ್ಪರ್ಧಿಸಿದ್ದ ತನ್ನ ಅಭ್ಯರ್ಥಿಯನ್ನು ಕೊನೆಯ ಕ್ಷಣದಲ್ಲಿ ಕಣದಿಂದ ನಿವೃತ್ತಗೊಳಿಸಿದ್ದ ಜೆಡಿಎಸ್, ಗುರಿಕಾರ ಅವರನ್ನು ಬೆಂಬಲಿಸಿತ್ತು.

ವಿಧಾನ ಪರಿಷತ್‌ನ ಈ ಎರಡೂ ಸ್ಥಾನಗಳು 2022ರ ಜುಲೈ 4ರಂದು ಖಾಲಿ ಆಗಲಿದೆ. ಅದಕ್ಕಿಂತ ಮೊದಲು ಜೂನ್ ಮೊದಲ ಅಥವಾ ಎರಡನೇ ವಾರ ಚುನಾವಣೆ ನಡೆಯಲಿದೆ.

ಇಂದು ಏರ್ ಇಂಡಿಯಾ ಹಸ್ತಾಂತರ ಸಾಧ್ಯತೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಏರ್ ಇಂಡಿಯಾ ವಿಮಾನಯಾನ ಕಂಪನಿಯನ್ನು ಟಾಟಾ ಸಮೂಹಕ್ಕೆ ಗುರುವಾರ ಹಸ್ತಾಂತರಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

₹ 18 ಸಾವಿರ ಕೋಟಿ ಮೊತ್ತಕ್ಕೆ ಏರ್ ಇಂಡಿಯಾವನ್ನು ಟಾಟಾ ಸಮೂಹದ ಅಂಗಸಂಸ್ಥೆ ಆಗಿರುವ ಟೆಲೆಸ್ ಪ್ರೈವೇಟ್ ಲಿಮಿಟೆಡ್‌ಗೆ ಕೇಂದ್ರ ಸರ್ಕಾರವು ಹಸ್ತಾಂತರಿಸಲಿದೆ. ಒಪ್ಪಂದದ ಪ್ರಕಾರ, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಮತ್ತು ಏರ್ ಇಂಡಿಯಾ ಎಸ್‌ಎಟಿಎಸ್‌ನ ಶೇ 50ರಷ್ಟು ಷೇರುಪಾಲು ಸಹ ಟಾಟಾ ಸಮೂಹಕ್ಕೆ ಹಸ್ತಾಂತರ ಆಗಲಿದೆ.

ಜಾಗತಿಕ ಮಟ್ಟದಲ್ಲಿ ಭಾರತದ ಆರು ಕಂಪನಿಗಳು

ಮೌಲ್ಯಯುತ ಬ್ರ್ಯಾಂಡ್: ಟಿಸಿಎಸ್‌ಗೆ ಎರಡನೆ ಸ್ಥಾನ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಐ.ಟಿ. ಸೇವಾ ವಲಯದ ಅತ್ಯಂತ ಮೌಲ್ಯಯುತ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಎರಡನೇ ಸ್ಥಾನ ಪಡೆದುಕೊಂಡಿದೆ ಎಂದು ಬ್ರ್ಯಾಂಡ್ ಮೌಲ್ಯಮಾಪನ ಸಲಹಾ ಸಂಸ್ಥೆ ಬ್ರ್ಯಾಂಡ್ ಫೈನಾನ್ಸ್ ಹೇಳಿದೆ. ಆ್ಯಕ್ಸೆಂಚರ್ ಕಂಪನಿಯು ಜಗತ್ತಿನ ಅತ್ಯಂತ ಮೌಲ್ಯಯುತ ಬ್ರ್ಯಾಂಡ್ ಪಟ್ಟಿಯಲ್ಲಿ ಮೊದಲ ಸ್ಥಾನ ಉಳಿಸಿಕೊಂಡಿದೆ.

ಸಂಸ್ಥೆಯು ಬಿಡುಗಡೆ ಮಾಡಿರುವ ‘ಬ್ರ್ಯಾಂಡ್ ಫೈನಾನ್ಸ್ ಐ.ಟಿ. ಸರ್ವಿಸ್ 25’ ವರದಿಯ ಪ್ರಕಾರ, ಪ್ರಮುಖ 25 ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಭಾರತದ ಇನ್ಫೊಸಿಸ್, ವಿಪ್ರೊ, ಎಚ್‌ಸಿಎಲ್, ಟೆಕ್ ಮಹೀಂದ್ರ ಮತ್ತು ಎಲ್‌ಟಿಐ ಬ್ರ್ಯಾಂಡ್‌ಗಳು ಸಹ ಸ್ಥಾನ ಪಡೆದಿವೆ.

2020–2022ರ ಅವಧಿಯಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಮುಂಚೂಣಿ 10 ಐ.ಟಿ. ಸೇವಾ ಕಂಪನಿಗಳ ಪೈಕಿ ಭಾರತದ ಒಟ್ಟು ಆರು ಕಂಪನಿಗಳು ಇವೆ ಎಂದು ಸಂಸ್ಥೆ ತಿಳಿಸಿದೆ.

2020–2022ರ ಅವಧಿಯಲ್ಲಿ ಭಾರತದ ಐ.ಟಿ. ಬ್ರ್ಯಾಂಡ್‌ಗಳ ಸರಾಸರಿ ಬೆಳವಣಿಗೆಯು ಶೇಕಡ 51ರಷ್ಟಾಗಿದೆ. ಇದೇ ವೇಳೆ, ಅಮೆರಿಕದ ಬ್ರ್ಯಾಂಡ್‌ಗಳ ಬೆಳವಣಿಗೆಯು ಶೇ 7ರಷ್ಟು ಇಳಿಕೆ ಕಂಡಿದೆ.

ಮನೆಯಿಂದ ಕೆಲಸ ಮಾಡುವ ವ್ಯವಸ್ಥೆ ಮತ್ತು ಡಿಜಿಟಲೀಕರಣವು ವೇಗ ಪಡೆದುಕೊಂಡಿದ್ದು ಭಾರತದಲ್ಲಿ ಐ.ಟಿ. ಸೇವಾ ಕೇಂದ್ರಗಳ ವಿಸ್ತರಣೆಯನ್ನು ಸುಗಮಗೊಳಿಸಿದೆ. ಐ.ಟಿ. ಸೇವೆಗಳ ಬ್ರ್ಯಾಂಡ್‌ಗಳ ಉತ್ತಮ ಬೆಳವಣಿಗೆ ಮತ್ತು ಹೆಚ್ಚಿನ ಜನರು ಡಿಜಿಟಲ್ ಕೌಶಲ ಪಡೆದುಕೊಂಡಿರುವುದರಿಂದಾಗಿ ಕೃತಕ ಬುದ್ಧಿಮತ್ತೆ, ದತ್ತಾಂಶ ವಿಶ್ಲೇಷಣೆ ಮತ್ತು ಇಂಟರ್‌ನೆಟ್ ಆಫ್ ಥಿಂಗ್ಸ್ (ಐಒಟಿ) ವ್ಯವಸ್ಥೆಗಳಿಗೆ ಮೂಲಸೌಕರ್ಯ ಅಭಿವೃದ್ಧಿಪಡಿಸುವಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಲಿದೆ ಎಂದು ವರದಿ ತಿಳಿಸಿದೆ.

ರ್‍ಯಾಂಕಿಂಗ್‌ನಲ್ಲಿ ಐಬಿಎಂ ನಾಲ್ಕನೇ ಸ್ಥಾನಕ್ಕೆ ಇಳಿಕೆ ಕಂಡಿದ್ದು, ಟಿಸಿಎಸ್ ಎರಡನೇ ಸ್ಥಾನಕ್ಕೇರಿದೆ ಎಂದು ಹೇಳಿದೆ. ಈ ಶ್ರೇಯಾಂಕವು ಕಂಪನಿಗೆ ಒಂದು ಪ್ರಮುಖ ಮೈಲಿಗಲ್ಲು ಆಗಿದ್ದು, ಮಾರುಕಟ್ಟೆ ಪ್ರಸ್ತುತತೆಯಲ್ಲಿ ಆಗಿರುವ ಹೆಚ್ಚಳದ ಸಂಕೇತವಾಗಿದೆ ಎಂದು ಟಿಸಿಎಸ್‌ನ ಮುಖ್ಯ ಮಾರುಕಟ್ಟೆ ಅಧಿಕಾರಿ (ಸಿಎಂಒ) ರಾಜಶ್ರೀ ಆರ್. ಅಭಿಪ್ರಾಯಪಟ್ಟಿದ್ದಾರೆ.

TATA
TATA CONSULTANCY SERVICES

ಕಂಪನಿ	ಬ್ರ್ಯಾಂಡ್ ಮೌಲ್ಯ
ಆ್ಯಕ್ಸೆಂಚರ್	₹ 2.71 ಲಕ್ಷ ಕೋಟಿ
ಟಿಸಿಎಸ್	₹ 1.26 ಲಕ್ಷ ಕೋಟಿ
ಇನ್ಫೊಸಿಸ್	₹ 96,000 ಕೋಟಿ
ವಿಪ್ರೊ	₹ 47,250 ಕೋಟಿ
ಎಚ್‌ಸಿಎಲ್	₹ 45,750 ಕೋಟಿ
ಟೆಕ್ ಮಹೀಂದ್ರ	₹ 22,500 ಕೋಟಿ

ಜಿಯೊ–ಬಿಪಿ ಚಾರ್ಜಿಂಗ್ ಕೇಂದ್ರ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಬಿ.ಪಿ. ಕಂಪನಿಗಳು ಒಟ್ಟಾಗಿ, ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸೌಲಭ್ಯವನ್ನು ದೆಹಲಿಯಲ್ಲಿ ಆರಂಭಿಸಿವೆ. ಇದು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್‌ಗೆ ದೇಶದಲ್ಲಿ ಆರಂಭವಾಗಿರುವ ಅತಿದೊಡ್ಡ ಕೇಂದ್ರ.

‘ಜಿಯೊ–ಬಿಪಿ ಕಂಪನಿಯು ದೇಶದ ಅತಿದೊಡ್ಡ ಚಾರ್ಜಿಂಗ್ ಕೇಂದ್ರಗಳಲ್ಲಿ ಒಂದನ್ನು ದೆಹಲಿಯ ದ್ವಾರಕಾದಲ್ಲಿ ಆರಂಭಿಸಿದೆ’ ಎಂದು ಕಂಪನಿ ಹೇಳಿದೆ. ಜಿಯೊ–ಬಿಪಿ ದೇಶದಲ್ಲಿ ಇ.ವಿ. ಚಾರ್ಜಿಂಗ್ ಕೇಂದ್ರಗಳ ಜಾಲವನ್ನು ನಿರ್ಮಿಸುವ ಆಲೋಚನೆ ಹೊಂದಿದೆ. ಅಲ್ಲದೆ, ಬ್ಯಾಟರಿ ಬದಲಿಸಿಕೊಳ್ಳುವ ಕೇಂದ್ರ ನಿರ್ಮಿಸುವ ಉದ್ದೇಶವೂ ಈ ಕಂಪನಿಗೆ ಇದೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ
ಪರಸ್ಪರ ಅಂತರ ಕಾಯ್ದುಕೊಳ್ಳಿ
ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಅಲೆಮಾರಿಗಳ ಸ್ವಂತ ಸೂರಿನ ಕನಸು ಭಗ್ನ!

ಒಂದನೇ ಪುಟದಿಂದ

ಒಟ್ಟಾರೆ ₹250 ಕೋಟಿಯನ್ನು ಸರ್ಕಾರ ನಿಗದಿ ಮಾಡಿತ್ತು. ರಾಜೀವ್ ಗಾಂಧಿ ವಸತಿ ಯೋಜನೆಗೂ ಅನುದಾನ ವರ್ಗಾವಣೆಯಾಗಿತ್ತು.

ಪ್ರತಿ ಮನೆ ನಿರ್ಮಾಣ ಘಟಕ ವೆಚ್ಚವನ್ನು ಗ್ರಾಮೀಣ ಪ್ರದೇಶಕ್ಕೆ ₹1.75 ಲಕ್ಷ ಮತ್ತು ನಗರ ಪ್ರದೇಶಕ್ಕೆ ₹2 ಲಕ್ಷ ನಿಗದಿ ಮಾಡಲಾಗಿತ್ತು. ಈ ಅನುದಾನ ಬಳಕೆ ಮಾಡಿಕೊಂಡು ಕನಿಷ್ಠ 14 ಸಾವಿರ ಕುಟುಂಬಗಳಿಗೆ ಸೂರು ಕಲ್ಪಿಸಿಕೊಡಲು ಅವಕಾಶ ಇತ್ತು. ಸಮಾಜ ಕಲ್ಯಾಣ ಇಲಾಖೆ, ವಸತಿ ಇಲಾಖೆ ಅಧಿಕಾರಿಗಳು ಮತ್ತು ಈ ಎರಡೂ ಇಲಾಖೆಗಳ ಅಡಿಯಲ್ಲಿರುವ ನಿಗಮಗಳ, ಅಲೆಮಾರಿ ಅಭಿವೃದ್ಧಿ ಕೋಶದ ಅಧಿಕಾರಿಗಳ ನಡುವೆ ಹಲವು ಸುತ್ತಿನ ಸಭೆಗಳು ನಡೆದು 2021ರ ಸೆಪ್ಟೆಂಬರ್‌ನಲ್ಲಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಅನುದಾನವನ್ನೂ ವರ್ಗಾವಣೆ ಮಾಡಲಾಗಿತ್ತು.

ಜ.21ರಂದು ಹಣಕಾಸು ಇಲಾಖೆ ಅಧಿಕೃತ ಟಿಪ್ಪಣಿಯೊಂದನ್ನು ಹೊರಡಿಸಿದ್ದು, ಬಿಡುಗಡೆ ಮಾಡಿರುವ ₹250 ಕೋಟಿ ಅನುದಾನವನ್ನು ಅಂಬೇಡ್ಕರ್ ವಸತಿ ಯೋಜನೆಯಡಿ ಈಗಾಗಲೇ ನಿರ್ಮಾಣ ಹಂತದಲ್ಲಿರುವ ಮನೆಗಳ ಬಾಕಿ ಕಂತುಗಳಿಗೆ ಬಳಸಿಕೊಳ್ಳಲು ಸೂಚನೆ ನೀಡಿದೆ. ಈ ಸಮುದಾಯಗಳಿಗೆ ಪ್ರತ್ಯೇಕ ಯೋಜನೆಗಳ ಬದಲು ಹೊಸದಾಗಿ ಘೋಷಣೆ ಮಾಡಿರುವ 5 ಲಕ್ಷ ಮನೆಗಳ ಗುರಿಯಲ್ಲಿಯೇ ಈ ಫಲಾನುಭವಿಗಳನ್ನು ಸೇರ್ಪಡೆ ಮಾಡಬೇಕು ಎಂದು ತಿಳಿಸಿದೆ.

ಇದರಿಂದಾಗಿ ವಿಶೇಷ ಯೋಜನೆಯಡಿ ಮನೆ ನಿರ್ಮಿಸಿಕೊಳ್ಳುವ ಅತೀ ಸೂಕ್ಷ್ಮ ಸಮುದಾಯಗಳ ಕನಸು ಭಗ್ನವಾಗಿದೆ ಎಂದು ಎಸ್‌ಸಿಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾದ ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್ ಕೊತ್ತಗೆರೆ ಬೇಸರ ವ್ಯಕ್ತಪಡಿಸಿದರು.

ಅತಿಥಿ ಉಪನ್ಯಾಸಕರ ನೇಮಕ: ಆನ್‌ಲೈನ್ ಕೌನ್ಸೆಲಿಂಗ್ ಇಂದಿನಿಂದ

ಬೆಂಗಳೂರು: ‘2021-22ನೇ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಇದೇ 27ರಿಂದ (ಗುರುವಾರ) 30 ರವರೆಗೆ ಆನ್‌ಲೈನ್ ಕೌನ್ಸೆಲಿಂಗ್ ನಡೆಯಲಿದೆ’ ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ತಿಳಿಸಿದ್ದಾರೆ. ‘ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 47 ವಿಷಯಗಳಲ್ಲಿ ವಾರಕ್ಕೆ 15 ಗಂಟೆಗಳ ಬೋಧನೆಯ ಪೂರ್ಣ ಕಾರ್ಯಭಾರವಿರುವ 7,225 ಮತ್ತು ಭಾಗಶಃ ಕಾರ್ಯಭಾರವಿರುವ 3,411 ಸೇರಿ ಒಟ್ಟು 10,636 ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುವುದು’ ಎಂದು ಅವರು ವಿವರಿಸಿದರು.

ಭ್ರಷ್ಟಾಚಾರ ಸೂಚ್ಯಂಕ: ಭಾರತಕ್ಕೆ 85ನೇ ಸ್ಥಾನ!

ನವದೆಹಲಿ (ಪಿಟಿಐ): 'ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕ 2021' (ಸಿಪಿಐ) ಪಟ್ಟಿಯಲ್ಲಿ 180 ದೇಶಗಳ ಪೈಕಿ ಭಾರತಕ್ಕೆ 85ನೇ ಸ್ಥಾನ ಲಭಿಸಿದ್ದು, ಕಳೆದ ವರ್ಷಕ್ಕೆ ಹೋಲಿಸಿದಾಗ ಒಂದು ಸ್ಥಾನ ಉತ್ತಮಪಡಿಸಿಕೊಂಡಿದೆ.

ಜರ್ಮನಿಯ ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ (ಟಿಐ) ಸಂಸ್ಥೆ ಈ ವರದಿಯನ್ನು ಸಿದ್ಧಪಡಿಸಿದ್ದು, ಭಾರತದ ಪ್ರಜಾಪ್ರಭುತ್ವದ ಸ್ಥಿತಿಗತಿಯ ಬಗ್ಗೆ ವರದಿಯು ಕಳವಳ ವ್ಯಕ್ತಪಡಿಸಿದೆ. ಹೆಚ್ಚು ಅಂಕ ಪಡೆದ (0ರಿಂದ 100ರವರೆಗೆ) ರಾಷ್ಟ್ರಗಳಲ್ಲಿ ಭ್ರಷ್ಟಾಚಾರ ಕಡಿಮೆ ಎಂದು ಪರಿಗಣಿಸಲಾಗುತ್ತದೆ.

ವಿಶ್ವದ ಬಲಿಷ್ಠ ರಾಷ್ಟ್ರವಾಗಿರುವ ಚೀನಾ ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕದಲ್ಲಿ 45 ಅಂಕಗಳೊಂದಿಗೆ ಕಳಪೆ ಸಾಧನೆ ಮಾಡಿದೆ. ಭಾರತ 40, ಇಂಡೋನೇಷ್ಯಾ 38, ನೆರೆಯ ಪಾಕಿಸ್ತಾನ 28 ಹಾಗೂ ಬಾಂಗ್ಲಾದೇಶ 26 ಅಂಕಗಳನ್ನು ಪಡೆದಿವೆ.

ಭೂತಾನ್ ಹೊರತುಪಡಿಸಿ ಇತರೆ ಎಲ್ಲ ನೆರೆಯ ರಾಷ್ಟ್ರಗಳು ಭಾರತಕ್ಕಿಂತಲೂ ಕಳಪೆ ಸಾಧನೆ ಮಾಡಿವೆ. 16 ಸ್ಥಾನಗಳ ಕುಸಿತ ಕಂಡಿರುವ ಪಾಕಿಸ್ತಾನ 140ಕ್ಕೆ ತಲುಪಿದೆ.

ಭಾರತದಲ್ಲಿನ ಭ್ರಷ್ಟಾಚಾರ ಕುರಿತು ವರದಿಯಲ್ಲಿ ಕಳವಳ ವ್ಯಕ್ತಪಡಿಸಿದ್ದು, ಕಳೆದೊಂದು ದಶಕದಲ್ಲಿ ರ್‍ಯಾಂಕಿಂಗ್ ಸ್ಥಿರವಾಗಿದ್ದರೂ, ಭ್ರಷ್ಟಾಚಾರದಲ್ಲಿ ಆಳ್ವಿಕೆ ನಡೆಸಲು ಸಹಾಯ ಮಾಡುವ ಕೆಲವು ಕಾರ್ಯವಿಧಾನಗಳು ದುರ್ಬಲಪಡಿಸುತ್ತಿವೆ ಎಂದು ಹೇಳಿದೆ. ಭಾರತದಲ್ಲಿ ಭ್ರಷ್ಟಾಚಾರ ತಡೆಯುವ ನಿಟ್ಟಿನಲ್ಲಿ ಹೆಚ್ಚಿನ ಸುಧಾರಣೆ ಕಂಡುಬಂದಿಲ್ಲ. ದೇಶದಲ್ಲಿ ಪ್ರಮುಖವಾಗಿ ಪತ್ರಕರ್ತರು ಹಾಗೂ ಸಾಮಾಜಿಕ ಕಾರ್ಯಕರ್ತರು ಅಪಾಯದಲ್ಲಿದ್ದು, ಪೊಲೀಸರು, ರಾಜಕೀಯ ಉಗ್ರರು, ಕ್ರಿಮಿನಲ್ ಗ್ಯಾಂಗ್ ಮತ್ತು ಸ್ಥಳೀಯ ಭ್ರಷ್ಟ ಅಧಿಕಾರಿಗಳ ದಾಳಿಗೆ ಬಲಿಯಾಗುತ್ತಿದ್ದಾರೆ ಎಂದು ಹೇಳಲಾಗಿದೆ.

ಲೋಕಾಯುಕ್ತರ ನೇಮಕಕ್ಕೆ ಪ್ರಕ್ರಿಯೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಲೋಕಾಯುಕ್ತರಾಗಿರುವ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಅವರ ಅವಧಿ ಗುರುವಾರ ಅಂತ್ಯಗೊಳ್ಳುತ್ತಿದೆ. ನೂತನ ಲೋಕಾಯುಕ್ತರ ನೇಮಕಕ್ಕೆ ಸರ್ಕಾರ ಪ್ರಕ್ರಿಯೆ ಆರಂಭಿಸಿದ್ದು, ಶೀಘ್ರದಲ್ಲಿ ಆಯ್ಕೆ ಅಂತಿಮಗೊಳಿಸುವ ಸಾಧ್ಯತೆ ಇದೆ.

ಲೋಕಾಯುಕ್ತ ಕಾಯ್ದೆಯ ಪ್ರಕಾರ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್ ಒಂದರಲ್ಲಿ ಮುಖ್ಯ ನ್ಯಾಯಮೂರ್ತಿಯಾಗಿ ನಿವೃತ್ತರಾದವರು ಅಥವಾ ಹೈಕೋರ್ಟ್ ಒಂದರಲ್ಲಿ ಕನಿಷ್ಠ ಹತ್ತು ವರ್ಷಗಳ ಕಾಲ ನ್ಯಾಯಮೂರ್ತಿಯಾಗಿ ನಿವೃತ್ತಿ ಹೊಂದಿದವರನ್ನು ರಾಜ್ಯದ ಲೋಕಾಯುಕ್ತರನ್ನಾಗಿ ನೇಮಕ ಮಾಡಬಹುದು.

ಮುಖ್ಯಮಂತ್ರಿಯು ಲೋಕಾಯುಕ್ತರನ್ನು ನೇಮಕ ಮಾಡುವ ಮುನ್ನ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ, ವಿಧಾನಸಭೆಯ ಅಧ್ಯಕ್ಷರು, ವಿಧಾನ ಪರಿಷತ್ ಸಭಾಪತಿ, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ವಿರೋಧ ಪಕ್ಷಗಳ ನಾಯಕರ ಸಲಹೆಯನ್ನು ಪಡೆಯಬೇಕು.

ಸಲಹೆ ಕೋರಿದ ಮುಖ್ಯಮಂತ್ರಿ: ವಿಶ್ವನಾಥ ಶೆಟ್ಟಿ ಅವರ ಅಧಿಕಾರದ ಅವಧಿ ಅಂತ್ಯಗೊಳ್ಳುತ್ತಿರುವ ಕಾರಣದಿಂದ ಹೊಸ ಲೋಕಾಯುಕ್ತರನ್ನು ನೇಮಿಸಲು ಮುಂದಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಈ ಸಂಬಂಧ ಸಲಹೆ ಕೋರಿ ಪತ್ರಗಳನ್ನು ಬರೆದಿದ್ದರು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ, ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಸೋಮವಾರ ಪತ್ರ ಬರೆದಿದ್ದರು ಎಂದು ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಸೇರಿದಂತೆ ಕೆಲವರು ಮಂಗಳವಾರವೇ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದು, ಲೋಕಾಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ತಮ್ಮ ಸಲಹೆಗಳನ್ನು ನೀಡಿದ್ದಾರೆ. ಗುರುವಾರವೇ ಲೋಕಾಯುಕ್ತರ ಹುದ್ದೆ ಖಾಲಿ ಆಗುತ್ತಿರುವುದರಿಂದ ವಿಳಂಬವಿಲ್ಲದೇ ನೇಮಕಾತಿ ಮಾಡಲು ಮುಖ್ಯಮಂತ್ರಿ ಒಲವು ತೋರಿದ್ದಾರೆ ಎಂದು ಗೊತ್ತಾಗಿದೆ.

‘ಲೋಕಾಯುಕ್ತರ ನೇಮಕಾತಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರು ಈಗಾಗಲೇ ಪ್ರಾಥಮಿಕ ಚರ್ಚೆ ನಡೆಸಿದ್ದಾರೆ. ಗುರುವಾರ ನಡೆಯುವ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರುವ ಸಾಧ್ಯತೆ ಇದೆ. ಅಲ್ಲಿಯೇ ಹೊಸ ಲೋಕಾಯುಕ್ತರ ಹೆಸರನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ’ ಎಂದು ಮೂಲಗಳು ಹೇಳಿವೆ.

ರಾಜ್ಯದವರಿಗೇ ಆದ್ಯತೆ: ಲೋಕಾಯುಕ್ತರನ್ನಾಗಿ ರಾಜ್ಯದವರನ್ನೇ ನೇಮಿಸಲು ಬಹುತೇಕರು ಒಲವು ಹೊಂದಿದ್ದಾರೆ. ಸುಪ್ರೀಂಕೋರ್ಟ್ ನ್ಯಾಯಮೂರ್ತಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ನ್ಯಾಯಮೂರ್ತಿಗಳಾಗಿ ನಿವೃತ್ತರಾಗಿರುವ ಹಲವರ ಹೆಸರುಗಳು ಪರಿಶೀಲನೆಯಲ್ಲಿವೆ ಎಂಬ ಮಾಹಿತಿ ಲಭಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ಮತ್ತು ವಾಸ್ತುಕೇಂದ್ರ, ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್ ಗುರು ಶ್ರೀದೇವನಂದನ್ ರವರಿಂದ ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ ನೆಮ್ಮದಿಗಾಗಿ,ಸಿರಿಸಂಪತ್ತು,ಸ್ತ್ರೀ ಪುರುಷ,ದಾಂಪತ್ಯ,ಮದುವೆ, ಸಂತಾನ,ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಛಾ ಅತಿಘೋರ,ನಿಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ ಆಕರ್ಷಣ ಸಂಮೋಹನ,ದುಷ್ಟಶಕ್ತಿಗಳು ಉಚ್ಚಾಟನೆ ಮತ್ತು ಶತ್ರು ಸಂಬಂಧಿತ ಮಾಟ,ದೃಷ್ಟಿಶಾಪಗಳಿಗೆ ಇಲ್ಲೇ ಇಂದೇ_ಪರಿಹಾರಕ್ಕೆ ಸಂಪರ್ಕಿಸಿರಿ: 8217437023 ನಿಮ್ಮ ಇಚ್ಛೆಗೆ 24ಘಂಟೆಗಳು ಮಾತ್ರ.

★||ನಂ.1 ವಶೀಕರಣ_ಸ್ಪೆಷಲಿಸ್ಟ್||★ ಉದ್ಯೋಗ, ವ್ಯಾಪಾರ,ಸಾಲದಭಾದೆ, ಸ್ತ್ರೀವಶೀಕರಣ, ಗಂಡಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1100 ರೂಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ಮಂಜುನಾಥಭಟ್. 9008968867

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಸ್ತ್ರೀ ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರಪರಿಹಾರ 9148890039

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಕರ್ನಾಟಕದಾದ್ಯಂತ ಕಂಪನಿ /ಆಫೀಸ್ ಕೆಲಸಗಳಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ.Any education ವಸತಿಯೂಟದೊಂದಿಗೆ Salary +OT. 17,800- 48,000/- 9538811104, 9538811223

ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೋಮಾದವರು 18,000 -56,000/- ವಸತಿಯೂಟದೊಂದಿಗೆ 8197650569, 7204396011

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600 -62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 8123884588, 8123884788

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Teachers/ Professors

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ONLINE ತರಗತಿ ನಡೆಸಲು ಪ್ರತಿ ವಿಷಯ ಕ್ಕೆ ನುರಿತ ಶಿಕ್ಷಕರು ಬೇಕಾಗಿದ್ದಾರೆ.. ಸಂಪರ್ಕಿಸಿ: 9035851947

Wanted

ಚಲನಚಿತ್ರ, ಧಾರಾವಾಹಿಗಾಗಿ ನಟ- ನಟಿ ಪೋಷಕರು, ಮಕ್ಕಳು ಅಭಿನಯಿಸಲು ಹೊಸ ಕಲಾವಿದರಿಗೆ ಅವಕಾಶವಿದೆ ಮೊದಲು ಭಾವಚಿತ್ರದೊಂದಿಗೆ ಸಂಪರ್ಕಿಸಿ: 9353637689, 9035541461

ಪ್ರವಾಸ

Travel

★15.02.2022 ವಿಮಾನದಲ್ಲಿ★ 9ದಿನಗಳು ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ನೈಮಿಷ್ಯಾರಣ್ಯ ಪ್ರವಾಸ. ಆರ್. ಗಾಂಧಿ ಟೂರ್ಸ್. (ರಿ) 9945445809/ 9902433500

Classifieds
Book Your Classifieds Ads
Online Log in to dhclassifieds.com
For More Details Call
9880856233 ▪ 9886213331
Email: Santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠಸಮಾರಾಧನೆ

ಶ್ರೀ ಕೆ.ವೆಂಕಟರಮಣ(ಕವಿ)
ಮಾಜಿ ನಗರಸಭಾ ಸದಸ್ಯರು, ಯಲಹಂಕ, ಬೆಂಗಳೂರು–560064
ಇವರು ದಿನಾಂಕ:15.1.2022ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಉತ್ತರಕ್ರಿಯಾದಿಗಳನ್ನು ದಿನಾಂಕ 27.1.2022 ರಂದು ಗುರುವಾರ ಬೆಳಗ್ಗೆ 9ಕ್ಕೆ ಪುಣ್ಯಾಹ ಮತ್ತು ಸಂಜೆ 7 ಗಂಟೆಗೆ ವೈಕುಂಠಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕೆಂದು ವಿನಂತಿ.
ಇಂತಿ ದುಃಖತಪ್ತರು
ಪತ್ನಿ:ಶ್ರೀಮತಿ ಕದಿರಿ ಅಚ್ಚಮ್ಮ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.

ವೈಕುಂಠಸಮಾರಾಧನೆ

ಶ್ರೀಮತಿ ಅಣ್ಣಮ್ಮ BA, B.Ed.,
ನಿವೃತ್ತ ಸರ್ಕಾರಿ ಶಿಕ್ಷಕರು, ದೊಮ್ಮಲೂರು
ಸಿ. ವೆಂಕಟರಮಣಗೌಡರ ಧರ್ಮಪತ್ನಿ
ಇವರು ದಿ: 18.1.2022 ರಂದು ನಿಧನರಾದರು. ತತ್ಸಬಂಧ ದಿ: 28.01.2022 ಶುಕ್ರವಾರ, ಬೆಳಗ್ಗೆ 9.00 ಗಂಟೆಗೆ ಪುಣ್ಯಾಹ ಹಾಗೂ 12.00 ಗಂಟೆಗೆ ವೈಕುಂಠ ಸಮಾರಾಧನೆಯನ್ನು ನಮ್ಮ ಸ್ವಗೃಹ, ದೊಮ್ಮಲೂರಿನಲ್ಲ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತ: ಸಿ.ವೆಂಕಟರಮಣಗೌಡ ಹಾಗೂ ಕುಟುಂಬವರ್ಗ ಫೋ: 9886798835

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೋವಿಡ್: ವಿಶ್ವದಲ್ಲಿ ಪಿಡುಗು ಕಾಣಿಸಿಕೊಂಡಾಗಿನಿಂದ ವರದಿಯಾದ ಗರಿಷ್ಠ ಪ್ರಕರಣಗಳಿವು

ವಾರದಲ್ಲಿ 2 ಕೋಟಿಗೂ ಅಧಿಕ ಪ್ರಕರಣ

ವಿಶ್ವಸಂಸ್ಥೆ/ಜಿನಿವಾ (ಪಿಟಿಐ): ವಿಶ್ವದೆಲ್ಲೆಡೆ ಕಳೆದ ವಾರ ಕೋವಿಡ್–19ನ 2.1 ಕೋಟಿಗೂ ಅಧಿಕ ಹೊಸ ಪ್ರಕರಣಗಳು ವರದಿಯಾಗಿವೆ. ಕೋವಿಡ್ ಪಿಡುಗು ಕಾಣಿಸಿಕೊಂಡಾಗಿನಿಂದ ಒಂದು ವಾರದ ಅವಧಿಯಲ್ಲಿ ವರದಿಯಾಗಿರುವ ಗರಿಷ್ಠ ಸಂಖ್ಯೆಯ ಪ್ರಕರಣಗಳು ಇವು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಕಳೆದ ಒಂದು ವಾರದ ಅವಧಿಯಲ್ಲಿ ಮೃತಪಟ್ಟವರ ಸಂಖ್ಯೆ 50 ಸಾವಿರ ಎಂದೂ ಹೇಳಿದೆ.

ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ ಸೋಂಕಿನ ಬಗ್ಗೆ ಎಚ್ಚರಿಕೆ ಅಗತ್ಯ ಎಂದೂ ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಈ ತಳಿ ವೇಗವಾಗಿ ಪ್ರಸರಣವಾಗುವ ಜೊತೆಗೆ ತ್ವರಿತವಾಗಿ ಬೆಳವಣಿಗೆ ಹೊಂದುತ್ತಿದೆ. ಡೆಲ್ಟಾ ತಳಿಗೆ ಹೋಲಿಸಿದರೆ, ಮತ್ತೊಮ್ಮೆ ಸೋಂಕು ಉಂಟು ಮಾಡುವ ಪ್ರಮಾಣ ಅಧಿಕವಾಗಿರುವ ಕಾರಣ ಸಾಕಷ್ಟು ಮುನ್ನೆಚ್ಚರಿಕೆ ಅಗತ್ಯ ಎಂದು ಕೋವಿಡ್–19 ಕುರಿತ ವಾರದ ವರದಿಯಲ್ಲಿ ಪ್ರತಿಪಾದಿಸಲಾಗಿದೆ.

ಪ್ರಯಾಣಿಕರಲ್ಲಿ ಓಮೈಕ್ರಾನ್ ತಳಿ ಸೋಂಕು ಪತ್ತೆಯಾಗುತ್ತಿದೆ. ಹೀಗಾಗಿ ಅನೇಕ ರಾಷ್ಟ್ರಗಳಲ್ಲಿ ಈಗ ಸಮುದಾಯ ಮಟ್ಟದಲ್ಲಿ ಸೋಂಕು ಪ್ರಸರಣವಾಗುತ್ತಿರುವುದು ಕಂಡುಬಂದಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

- ಜ. 23ರ ವರೆಗೆ ವರದಿಯಾದ ಪ್ರಕರಣಗಳ ಸಂಖ್ಯೆ 34.6 ಕೋಟಿ ಹಾಗೂ ಮೃತಪಟ್ಟವರ ಸಂಖ್ಯೆ 50.5 ಲಕ್ಷ
- ಡೆಲ್ಟಾಕ್ಕೆ ಹೋಲಿಸಿದರೆ ಓಮೈಕ್ರಾನ್ ತಳಿ ಸೋಂಕು ತಗುಲಿದವರಲ್ಲಿ ಲಕ್ಷಣರಹಿತ ಕೋವಿಡ್ ಇರುವುದು ಭಾರತ ಹಾಗೂ ದಕ್ಷಿಣ ಆಫ್ರಿಕಾದಲ್ಲಿ ನಡೆದ ಅಧ್ಯಯನದಿಂದ ತಿಳಿದು ಬಂದಿದೆ.
- ಸೋಂಕಿತರಲ್ಲಿ ಲಕ್ಷಣಗಳು ಕಾಣಿಸಿಕೊಳ್ಳದ ಕಾರಣ ಪತ್ತೆಯೂ ಕಡಿಮೆಯಾಗುತ್ತಿದೆ. ಇದರಿಂದ ಪ್ರಸರಣ ಹೆಚ್ಚುತ್ತಿದೆ.

ಕೋವಿಶೀಲ್ಡ್, ಕೋವ್ಯಾಕ್ಸಿನ್ ಪ್ರತಿ ಡೋಸ್‌ಗೆ ₹275 ನಿಗದಿ ಸಾಧ್ಯತೆ

ನವದೆಹಲಿ: ಭಾರತೀಯ ಔಷಧ ನಿಯಂತ್ರಕರಿಂದ ಶೀಘ್ರದಲ್ಲೇ ಸಾಮಾನ್ಯ ಮಾರುಕಟ್ಟೆಗೆ ಅನುಮೋದನೆ ಪಡೆಯುವ ನಿರೀಕ್ಷೆಯಿರುವ ಕೋವಿಡ್ ಲಸಿಕೆಗಳಾದ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಬೆಲೆಯನ್ನು ಪ್ರತಿ ಡೋಸ್‌ಗೆ ₹275 ಮತ್ತು ಹೆಚ್ಚುವರಿ ಸೇವಾ ಶುಲ್ಕವಾಗಿ ₹150 ನಿಗದಿಪಡಿಸುವ ಸಾಧ್ಯತೆ ಇದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಲಸಿಕೆಗಳನ್ನು ಕೈಗೆಟಕುವ ಬೆಲೆಗೆ ನೀಡುವಂತೆ ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರವು (ಎನ್‌ಪಿಪಿಎ) ನಿರ್ದೇಶನ ನೀಡಿದೆ ಎಂದೂ ಹೇಳಿವೆ.

ಸದ್ಯಕ್ಕೆ ಖಾಸಗಿ ಆಸ್ಪತ್ರೆಗಳಲ್ಲಿ ಕೋವ್ಯಾಕ್ಸಿನ್‌ನ ಪ್ರತಿ ಡೋಸ್‌ಗೆ ₹1,200 ಮತ್ತು ಕೋವಿಶೀಲ್ಡ್‌ನ ಪ್ರತಿ ಡೋಸ್‌ಗೆ ₹780 ಇದೆ. ಇದು ₹150 ಸೇವಾಶುಲ್ಕವನ್ನೂ ಒಳಗೊಂಡಿದೆ. ಎರಡೂ ಲಸಿಕೆಗಳಿಗೆ ದೇಶದಲ್ಲಿ ತುರ್ತು ಬಳಕೆಗೆ ಮಾತ್ರ ಅನುಮೋದನೆ ನೀಡಲಾಗಿದೆ.

ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗಳನ್ನು ಸಾಮಾನ್ಯ ಮಾರುಕಟ್ಟೆಯಲ್ಲಿ ಒದಗಿಸಲು ಕೇಂದ್ರದ ಔಷಧ ನಿಯಂತ್ರಣ ಮಂಡಳಿಯ ತಜ್ಞರ ಸಮಿತಿಯು ಈಚೆಗೆ ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

‘ಪ್ಲಾಸ್ಟಿಕ್, ಚರ್ಮದ ಮೇಲೆ ಓಮೈಕ್ರಾನ್ ಹೆಚ್ಚು ಕಾಲ ಬದುಕುತ್ತದೆ’

ಟೋಕಿಯೊ (ಪಿಟಿಐ): ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ 21 ಗಂಟೆಗಳ ಕಾಲ ಚರ್ಮದ ಮೇಲೆ ಮತ್ತು ಎಂಟು ದಿನಗಳಿಗೂ ಹೆಚ್ಚು ಕಾಲ ಪ್ಲಾಸ್ಟಿಕ್ ಮೇಲೆ ಜೀವಂತವಾಗಿರಬಹುದು. ಇತರ ತಳಿಗಳಿಗೆ ಹೋಲಿಸಿದರೆ ಇದು ವೇಗವಾಗಿ ಹರಡಬಲ್ಲದು ಎಂದು ಅಧ್ಯಯನವೊಂದು ತಿಳಿಸಿದೆ.

ಜಪಾನ್‌ನ ಕ್ಯೋಟೋ ಪ್ರಿಫೆಕ್ಚರಲ್ ಯೂನಿವರ್ಸಿಟಿ ಆಫ್ ಮೆಡಿಸಿನ್‌ನ ಸಂಶೋಧಕರು ಈ ಕುರಿತು ಅಧ್ಯಯನ ನಡೆಸಿದ್ದಾರೆ. ವುಹಾನ್‌ನಲ್ಲಿ ಮೊದಲು ಪತ್ತೆಯಾದ ‘ಸಾರ್ಸ್–ಕೋವ್2’ ತಳಿ ಹಾಗೂ ವೈರಸ್‌ನ ಇತರ ಎಲ್ಲ ‘ಕಳವಳಕಾರಿ ತಳಿ’ಗಳ ವಿಶ್ಲೇಷಣೆ ಮಾಡಿದ್ದಾರೆ. ಇನ್ನೂ ಅಂತಿಮಗೊಳ್ಳದ ವರದಿಯು ‘ಬಯೋಆರ್‌ಎಕ್ಸ್‌ಐವಿ’ ಎಂಬ ನಿಯತಕಾಲಿಕದಲ್ಲಿ ಪ್ರಕಟವಾಗಿದೆ.

ವುಹಾನ್‌ನಲ್ಲಿ ಪತ್ತೆಯಾದ ವೈರಸ್‌ಗಿಂತ, ಆಲ್ಫಾ, ಬೀಟಾ, ಡೆಲ್ಟಾ ಮತ್ತು ಓಮೈಕ್ರಾನ್ ರೂಪಾಂತರ ತಳಿಗಳು ಪ್ಲಾಸ್ಟಿಕ್ ಮತ್ತು ಚರ್ಮದ ಮೇಲೆ ಹೆಚ್ಚು ಕಾಲ ಬದುಕುತ್ತವೆ ಎಂದು ಈ ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

‘ಓಮೈಕ್ರಾನ್‌ನಿಂದ ವರ್ಧಿತ ರೋಗ ನಿರೋಧಕ ಶಕ್ತಿ ಡೆಲ್ಟಾ ತಳಿಯನ್ನು ತಟಸ್ಥಗೊಳಿಸುತ್ತದೆ’

ನವದೆಹಲಿ (ಪಿಟಿಐ): ಓಮೈಕ್ರಾನ್ ತಳಿಯ ಸೋಂಕು ತಗುಲಿದವರ ದೇಹದಲ್ಲಿ ವೃದ್ಧಿಯಾಗುವ ರೋಗ ನಿರೋಧಕ ಶಕ್ತಿಯು, ಡೆಲ್ಟಾ ಸೇರಿದಂತೆ ಕೊರೊನಾ ವೈರಸ್‌ನ ಇತರ ಎಲ್ಲ ‘ಕಳವಳಕಾರಿ ತಳಿ’ಗಳನ್ನು ತಟಸ್ಥಗೊಳಿಸುತ್ತದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಕೈಗೊಂಡಿರುವ ಅಧ್ಯಯನವೊಂದು ಹೇಳಿದೆ.

ಓಮೈಕ್ರಾನ್‌ನಿಂದಾಗಿ ವೃದ್ಧಿಯಾಗುವ ರೋಗ ನಿರೋಧಕ ಶಕ್ತಿಯು ಈ ತಳಿಯನ್ನೂ ತಟಸ್ಥಗೊಳಿಸುತ್ತದೆ. ಜೊತೆಗೆ, ಡೆಲ್ಟಾ ತಳಿ ಸೋಂಕು ಮತ್ತೊಮ್ಮೆ ಬಾಧಿಸುವ ಸಾಧ್ಯತೆಯೂ ಕಡಿಮೆಯಾಗುತ್ತದೆ ಎಂದು ಅಧ್ಯಯನವು ತಿಳಿಸಿದೆ. ಹೀಗಾಗಿ, ಓಮೈಕ್ರಾನ್ ತಳಿಗೆ ತಕ್ಕುದಾದ ಲಸಿಕೆ ಕಾರ್ಯತಂತ್ರದ ಅಗತ್ಯವಿದೆ ಎಂದು ಐಸಿಎಂಆರ್‌ನ ಅಧ್ಯಯನ ಪ್ರತಿಪಾದಿಸಿದೆ. ವಿಜ್ಞಾನಿಗಳಾದ ಪ್ರಜ್ಞಾ ಡಿ.ಯಾದವ್, ಗಜಾನನ ಎನ್.ಸಪ್ಕಾಲ್, ರಿಮಾ ಡಿ.ಸಹಾಯ್, ಪ್ರಿಯಾ ಅಬ್ರಹಾಂ ಅವರಿದ್ದ ತಂಡ ಈ ಅಧ್ಯಯನ ನಡೆಸಿದೆ.

39 ಜನರನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಇವರ ಪೈಕಿ 25 ಜನರು ಅಸ್ಟ್ರಾ–ಜೆನೆಕಾದ ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದಿದ್ದರೆ, 8 ಜನರು ಫೈಝರ್‌ನ ಲಸಿಕೆಯ ಎರಡು ಡೋಸ್‌ಗಳನ್ನು ಹಾಗೂ 6 ಮಂದಿ ಯಾವುದೇ ಲಸಿಕೆಯನ್ನು ತೆಗೆದುಕೊಂಡಿರಲಿಲ್ಲ.

ಇವರ ಪೈಕಿ 28 ಜನರು ಯುಎಇ, ಬ್ರಿಟನ್, ಅಮೆರಿಕ ಹಾಗೂ ಆಫ್ರಿಕಾದ ವಿವಿಧ ರಾಷ್ಟ್ರಗಳಿಂದ ಮರಳಿದವರಾಗಿದ್ದರೆ, 11 ಜನರು ‘ಹೆಚ್ಚು ಅಪಾಯ’ದ ಸಂಪರ್ಕವನ್ನು ಹೊಂದಿದ್ದರು. ಎಲ್ಲರಿಗೂ ಓಮೈಕ್ರಾನ್ ತಳಿ ಸೋಂಕು ತಗುಲಿತ್ತು ಎಂದು ಐಸಿಎಂಆರ್ ಮೂಲಗಳು ಹೇಳಿವೆ.

‘ಓಮೈಕ್ರಾನ್ ತಳಿ ಸೋಂಕಿಗೆ ಒಳಗಾದವರಲ್ಲಿ ಸೃಷ್ಟಿಯಾಗುವ ಪ್ರತಿಕಾಯಗಳು ಡೆಲ್ಟಾ ಸೇರಿದಂತೆ ಎಲ್ಲ ಬಗೆಯ ಕಳವಳಕಾರಿ ತಳಿಗಳನ್ನು ಪರಿಣಾಮಕಾರಿಯಾಗಿ ತಟಸ್ಥಗೊಳಿಸುವ ಸಾಮರ್ಥ್ಯ ಹೊಂದಿವೆ ಎಂಬ ಗಮನಾರ್ಹ ಅಂಶವನ್ನು ನಮ್ಮ ಅಧ್ಯಯನ ತೋರಿಸಿಕೊಟ್ಟಿದೆ’ ಎಂದು ಮೂಲಗಳು ಹೇಳಿವೆ.

‘ಆದರೆ, ಅಧ್ಯಯನದ ಭಾಗವಾಗಿದ್ದವರ ಪೈಕಿ, ಲಸಿಕೆ ಪಡೆಯದವರ ಸಂಖ್ಯೆ ಕಡಿಮೆ ಇತ್ತು. ಇದು ನಮ್ಮ ಅಧ್ಯಯನದ ಪ್ರಮುಖ ಮಿತಿಯಾಗಿತ್ತು. ಲಸಿಕೆ ಪಡೆಯದಿರುವುದೇ ಇವರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಪ್ರಮಾಣದಲ್ಲಿ ವೃದ್ಧಿಯಾಗಲು ಕಾರಣ ಇರಬಹುದು’ ಎಂದು ಅಧ್ಯಯನ ಕೈಗೊಂಡಿದ್ದ ವಿಜ್ಞಾನಿಗಳು ಹೇಳಿದ್ದಾರೆ.

ದೇಶದಲ್ಲಿ 2.85 ಲಕ್ಷ ಹೊಸ ಪ್ರಕರಣಗಳು

ನವದೆಹಲಿ(ಪಿಟಿಐ): ಬುಧವಾರ ಬೆಳಿಗ್ಗೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ ಹೊಸದಾಗಿ 2,85,914 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 4,00,85,116ಕ್ಕೆ ಏರಿದಂತಾಗಿದೆ ಎಂದು ಕೇಂದ್ರ ಆರೋಗ್ಯ ಇಲಾಖೆ ತಿಳಿಸಿದೆ.

ಕಳೆದ 24 ಗಂಟೆಗಳ ಅವಧಿಯಲ್ಲಿ 665 ಮಂದಿ ಸೋಂಕಿನಿಂದಾಗಿ ಮೃತಪಟ್ಟಿದ್ದು, ಮೃತರ ಒಟ್ಟು ಸಂಖ್ಯೆ 4,91,127 ಎಂದು ಸಚಿವಾಲಯದ ವರದಿ ತಿಳಿಸಿದೆ. ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಕಂಡುಬಂದಿದ್ದು, 22,23,018 ಪ್ರಕರಣಗಳಿವೆ. ದೈನಂದಿನ ಕೋವಿಡ್ ದೃಢ ಪ್ರಮಾಣವು ಶೇಕಡ 16.16 ರಷ್ಟಿದೆ. ದೇಶದಲ್ಲಿ ಇದುವರೆಗೆ 163.58 ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ ಎಂದ ಸಚಿವಾಲಯ ತಿಳಿಸಿದೆ.

ಆಜಾದ್‌ಗೆ ‘ಪದ್ಮಭೂಷಣ’: ಕಾಂಗ್ರೆಸ್‌ನಲ್ಲಿ ಕಚ್ಚಾಟ

ಒಂದನೇ ಪುಟದಿಂದ

ಇನ್ನೊಂದೆಡೆ, ‘ಪದ್ಮಭೂಷಣ’ವನ್ನು ತಿರಸ್ಕರಿಸಿರುವ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಅವರ ನಿಲುವನ್ನು ಸ್ವಾಗತಿಸಿರುವ ಕೆಲವರು, ಆಜಾದ್ ಅವರೂ ಇಂತಹ ನಿಲುವನ್ನು ಪ್ರಕಟಿಸದಿರುವುದಕ್ಕೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಬುದ್ಧದೇವ ಭಟ್ಟಾಚಾರ್ಯ ಅವರು ಪ್ರಶಸ್ತಿ ತಿರಸ್ಕರಿಸಿರುವ ವಿಷಯವನ್ನು ರೀಟ್ವೀಟ್ ಮಾಡಿರುವ ಜೈರಾಮ್ ರಮೇಶ್, ‘ಅವರು (ಬುದ್ಧದೇವ) ಸರಿಯಾದುದನ್ನೇ ಮಾಡಿದ್ದಾರೆ. ಅವರು ಗುಲಾಂ (ಗುಲಾಮ) ಅಲ್ಲ. ಬದಲಿಗೆ, ಆಜಾದ್ (ಸ್ವತಂತ್ರ) ಆಗಲು ಬಯಸುತ್ತಾರೆ’ ಎಂದು ಪ್ರತಿಕ್ರಿಯೆ ನೀಡುವ ಮೂಲಕ ಪರೋಕ್ಷವಾಗಿ ತಮ್ಮ ಪಕ್ಷದ ಮುಖಂಡ ಗುಲಾಂ ನಬಿ ಆಜಾದ್ ವಿರುದ್ಧ ತೀಕ್ಷ್ಣವಾಗಿ ಹರಿಹಾಯ್ದಿದ್ದಾರೆ.

‘ಆಜಾದ್ ಅವರ ಸೇವೆಯನ್ನು ಗುರುತಿಸಿ ‘ಪದ್ಮಭೂಷಣ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇದು ಅವರಿಗೆ ದೊರೆತ ಅರ್ಹ ಮನ್ನಣೆ’ ಎಂದು ಲೋಕಸಭೆಯ ಕಾಂಗ್ರೆಸ್ ಸದಸ್ಯ ಮನೀಷ್ ತಿವಾರಿ ಅಭಿಪ್ರಾಯ ಪಟ್ಟಿದ್ದಾರೆ.

‘ವಿರೋಧ ಪಕ್ಷದ ಮುಖಂಡರೊಬ್ಬರ ಸೇವೆಯನ್ನು ಮತ್ತೊಂದು ಪಕ್ಷದ ಸರ್ಕಾರ ಗುರುತಿಸುವುದು ಒಳ್ಳೆಯದು’ ಎಂದು ಸಂಸದ ಶಶಿ ತರೂರ್ ಟ್ವೀಟ್ ಮಾಡಿದ್ದಾರೆ.

ಸ್ಪಷ್ಟನೆ ನೀಡಿದ ಆಜಾದ್: ಸರ್ಕಾರ ಪ್ರಶಸ್ತಿ ಘೋಷಿಸಿದ ಕೂಡಲೇ ಆಜಾದ್ ಅವರು ಪಕ್ಷವನ್ನೇ ಬದಲಿಸಬಹುದು ಎಂಬ ವದಂತಿಯು ಸಾಮಾಜಿಕ ಜಾಲತಾಣದ ಮೂಲಕ ಹರಿದಾಡುತ್ತಿದೆ. ಆಜಾದ್ ಅವರು ತಮ್ಮ ಪ್ರೊಫೈಲ್‌ನಿಂದ ಕಾಂಗ್ರೆಸ್ ಚಿಹ್ನೆಯನ್ನೇ ತೆಗೆದುಹಾಕಿದ್ದಾರೆ ಎಂದೂ ಕೆಲವರು ಟ್ವೀಟ್ ಮಾಡಿದ್ದಾರೆ. ಆದರೆ, ಆಜಾದ್ ತಕ್ಷಣವೇ ಸ್ಪಷ್ಟನೆ ನೀಡಿ ಅದನ್ನು ನಿರಾಕರಿಸಿದ್ದಾರೆ.

‘ಇಲ್ಲಸಲ್ಲದ ಗೊಂದಲ ಸೃಷ್ಟಿಸಲು ಕೆಲವು ಕಿಡಿಗೇಡಿಗಳು ಈ ರೀತಿಯ ಅಪಪ್ರಚಾರದಲ್ಲಿ ತೊಡಗಿದ್ದಾರೆ. ನನ್ನ ಟ್ವಿಟರ್ ಖಾತೆಯ ಪ್ರೊಫೈಲ್ ಬದಲಿಸಿಲ್ಲ. ಮೊದಲಿನಂತೆಯೇ ಇದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಆಂಧ್ರಪ್ರದೇಶ: 13 ಹೊಸ ಜಿಲ್ಲೆಗಳ ರಚನೆಗೆ ಅಧಿಸೂಚನೆ

ಹೈದರಾಬಾದ್: ಆಡಳಿತದಲ್ಲಿ ಸುಧಾರಣೆ ತರುವ ಉದ್ದೇಶದಿಂದ ಆಂಧ್ರಪ್ರದೇಶದ ಜಗನ್‌ಮೋಹನ್ ರೆಡ್ಡಿ ನೇತೃತ್ವದ ಸರ್ಕಾರವು 13 ಹೊಸ ಜಿಲ್ಲೆಗಳ ರಚನೆಗೆ ಬುಧವಾರ ಅಧಿಸೂಚನೆಯನ್ನು ಹೊರಡಿಸಿದೆ.

ಆಂಧ್ರಪ್ರದೇಶದಲ್ಲಿ ಪ್ರಸ್ತುತ 13 ಜಿಲ್ಲೆಗಳಿದ್ದು, ಸುಗಮವಾಗಿ ಆಡಳಿತ ನಡೆಸುವ ದೃಷ್ಟಿಯಿಂದ ಮತ್ತೆ 13 ಜಿಲ್ಲೆಗಳ ರಚನೆಗೆ ಮುಂದಾಗಿದೆ.

ಎನ್‌ಟಿಆರ್ (ವಿಜಯವಾಡ), ಅಲ್ಲೂರಿ ಸೀತಾರಾಮ ರಾಜು (ಪಾಡೇರು), ಶ್ರೀ ಸತ್ಯಸಾಯಿ (ಪುಟ್ಟಪರ್ತಿ), ಅನ್ನಮಯ್ಯ (ರಾಯಚೋಟಿ) ಮತ್ತು ಶ್ರೀ ಬಾಲಾಜಿ (ತಿರುಪತಿ) ಎಂದು ಕೆಲವು ಹೊಸ ಜಿಲ್ಲೆಗಳಿಗೆ ಹೆಸರು ಇಡಲಾಗಿದೆ. ಯುಗಾದಿಯಿಂದ ಈ ಹೊಸ ಜಿಲ್ಲೆಗಳು ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ ಎನ್ನಲಾಗಿದೆ.

ರೈಲಿಗೆ ಬೆಂಕಿ

ರೈಲ್ವೇ ನೇಮಕಾತಿ ಮಂಡಳಿಯ ಪರೀಕ್ಷೆಯಲ್ಲಿ ಅನಿರೀಕ್ಷಿತ ಫಲಿತಾಂಶ ಬಂದಿದೆ ಎಂದು ಪ್ರತಿಭಟನೆ ನಡೆಸುತ್ತಿದ್ದ ಅಭ್ಯರ್ಥಿಗಳು ಬಿಹಾರದ ಗಯಾದಲ್ಲಿ ಬುಧವಾರ ರೈಲಿಗೆ ಬೆಂಕಿ ಹಚ್ಚಿದರು –ಚಿತ್ರ ಪಿಟಿಐ

ಅಧಿಕಾರಿಗಳ ನಿಯೋಜನೆ

ಬಿಜೆಪಿಯೇತರ 9 ರಾಜ್ಯಗಳಿಂದ ವಿರೋಧ

ನವದೆಹಲಿ (ಪಿಟಿಐ): ಐಎಎಸ್ ಅಧಿಕಾರಿಗಳನ್ನು ಕೇಂದ್ರಕ್ಕೆ ನಿಯೋಜನೆಗೊಳಿಸುವ ನಿರ್ಧಾರದ ಕುರಿತ ಕೇಂದ್ರ ಸರ್ಕಾರದ ಪ್ರಸ್ತಾವವನ್ನು ಬಿಜೆಪಿಯೇತರ 9 ರಾಜ್ಯ ಸರ್ಕಾರಗಳು ವಿರೋಧ ವ್ಯಕ್ತಪಡಿಸಿವೆ. ಆದರೆ, 8 ರಾಜ್ಯಗಳು ಒಪ್ಪಿಗೆ ನೀಡಿವೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಸಂಬಂಧಿಸಿದ ಸೇವಾ ನಿಯಮಗಳಲ್ಲಿ ಬದಲಾವಣೆ ಮಾಡುವ ಪ್ರಸ್ತಾವಕ್ಕೆ ಇನ್ನೂ ಪ್ರತಿಕ್ರಿಯೆ ನೀಡದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಜ್ಞಾಪನಾಪತ್ರ ಕಳುಹಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಒಡಿಶಾ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ತೆಲಂಗಾಣ, ಛತ್ತೀಸ್‌ಗಢ, ಜಾರ್ಖಂಡ್ ಮತ್ತು ರಾಜಸ್ಥಾನ ರಾಜ್ಯಗಳು ಸೇವಾ ನಿಯಮಗಳಲ್ಲಿನ ತಿದ್ದುಪಡಿಗಳ ವಿರುದ್ಧ ಧ್ವನಿ ಎತ್ತಿವೆ. ಮತ್ತೊಂದೆಡೆ, ಅರುಣಾಚಲ ಪ್ರದೇಶ, ಮಣಿಪುರ, ತ್ರಿಪುರಾ, ಮಧ್ಯಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ ಮತ್ತು ಹಿಮಾಚಲ ಪ್ರದೇಶಗಳು ತಮ್ಮ ಒಪ್ಪಿಗೆ ನೀಡಿವೆ ಎಂದು ಅವರು ಹೇಳಿದ್ದಾರೆ.

ಕರ್ನಾಟಕ ಮತ್ತು ಮೇಘಾಲಯವು ಈ ಮೊದಲು, ಕಳೆದ ತಿಂಗಳು ಕಳುಹಿಸಲಾಗಿದ್ದ ಪ್ರಸ್ತಾವವನ್ನು ವಿರೋಧಿಸಿದ್ದವು. ಬಿಹಾರ ಕೂಡ ವಿರೋಧ ವ್ಯಕ್ತಪಡಿಸಿತ್ತು. ಆದರೆ, ಪರಿಷ್ಕೃತ ಪ್ರಸ್ತಾವವನ್ನು ಕಳುಹಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮದ್ಯ ಕುಡಿದು ವಾಹನ ಚಾಲನೆ ಅಪರಾಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಮದ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುವುದು ಗಂಭೀರವಾದ ದುರ್ನಡತೆ ಮಾತ್ರವಲ್ಲ, ಅದು ಅಪರಾಧವೂ ಹೌದು ಎಂದು ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಹಾಗೂ ಬಿ.ವಿ.ನಾಗರತ್ನಾ ಅವರಿದ್ದ ನ್ಯಾಯಪೀಠ, ‘ಮದ್ಯ ಕುಡಿದ ಯಾವ ವ್ಯಕ್ತಿಗೂ ವಾಹನ ಚಾಲನೆ ಮಾಡಲು ಅನುಮತಿ ನೀಡಬಾರದು. ಮದ್ಯ ಕುಡಿದು ವಾಹನ ಚಾಲನೆ ಮಾಡುವುದು ಹಾಗೂ ಆ ಮೂಲಕ ಇತರರ ಜೀವದೊಂದಿಗೆ ಚೆಲ್ಲಾಟವಾಗುವುದು ಗಂಭೀರವಾದ ದುರ್ನಡತೆ’ ಎಂದು ಹೇಳಿತು.

ಉತ್ತರ ಪ್ರದೇಶದ ಪ್ರಾಂತೀಯ ಸಶಸ್ತ್ರ ಪೊಲೀಸ್ (ಪಿಎಸಿ) ಪಡೆಯನ್ನು ಕರೆದೊಯ್ದ ಟ್ರಕ್‌ನ ಚಾಲಕನೊಬ್ಬ ಕುಡಿದು ವಾಹನ ಚಾಲನೆ ಮಾಡಿದ್ದ ಎಂಬ ಆರೋಪಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

2000ದಲ್ಲಿ ಕುಂಭಮೇಳಕ್ಕೆ ಅಲಹಾಬಾದ್‌ನಿಂದ ಪೊಲೀಸ್ ಸಿಬ್ಬಂದಿಯನ್ನು ಕರೆದೊಯ್ಯುವಾಗ, ಕುಡಿದು ವಾಹನ ಚಾಲನೆ ಮಾಡಿದ್ದ ಎಂಬ ಆರೋಪ ಎದುರಿಸುತ್ತಿರುವ ಟ್ರಕ್ ಚಾಲಕನಿಗೆ ಕಡ್ಡಾಯ ನಿವೃತ್ತಿ ನೀಡಬೇಕು’ ಎಂದು ನ್ಯಾಯಪೀಠ ಆದೇಶಿಸಿತು.

ಮೀಸಲಾತಿ ನೀಡುವಂತೆ ಕೋರ್ಟ್ ಆದೇಶ ನೀಡುವಂತಿಲ್ಲ: ‘ಸುಪ್ರೀಂ’

ನವದೆಹಲಿ: ‘ಯಾವುದೇ ವರ್ಗದ ಜನರಿಗೆ ಮೀಸಲಾತಿ ನೀಡುವಂತೆ ನ್ಯಾಯಾಲಯವೊಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತಿಲ್ಲ’ ಎಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಬಿ.ವಿ.ನಾಗರತ್ನಾ ಅವರಿದ್ದ ನ್ಯಾಯಪೀಠ ಈ ತೀರ್ಪು ನೀಡಿದೆ.

ಪಂಜಾಬ್ ರಾಜ್ಯದ ಸರ್ಕಾರಿ ವೈದ್ಯ ಮತ್ತು ದಂತ ವೈದ್ಯ ಕಾಲೇಜುಗಳಲ್ಲಿ ಕ್ರೀಡಾ ಕೋಟಾದಡಿ ಶೇ 3ರಷ್ಟು ಮೀಸಲಾತಿ ನೀಡುವಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ 2019ರ ಆಗಸ್ಟ್‌ನಲ್ಲಿ ನೀಡಿದ್ದ ಆದೇಶವನ್ನು ನ್ಯಾಯಪೀಠ ರದ್ದುಗೊಳಿಸಿತು.

‘ಯಾವುದೇ ವರ್ಗಕ್ಕೆ ಮೀಸಲಾತಿ ಕಲ್ಪಿಸುವ ಅಧಿಕಾರ ರಾಜ್ಯಕ್ಕೆ ಇದೆ. ಈ ವಿಷಯವಾಗಿ ಕೋರ್ಟ್ ಆದೇಶ ನೀಡುವಂತಿಲ್ಲ. ಅಲ್ಲದೇ, ಮೀಸಲಾತಿಯನ್ನು ನೀಡಲೇಬೇಕು ಎಂದು ನ್ಯಾಯಾಲಯಗಳು ನಿರ್ದೇಶನ ನೀಡಬಾರದು’ ಎಂದು ನ್ಯಾಯಪೀಠ ಹೇಳಿದೆ.

‘ಇಂಥ ಆದೇಶ ನೀಡುವ ಮೂಲಕ ಹೈಕೋರ್ಟ್ ದೊಡ್ಡ ಪ್ರಮಾದ ಎಸಗಿದೆ ಹಾಗೂ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದೆ’ ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಆಸ್ಟ್ರೇಲಿಯನ್ ಓಪನ್ ಟೆನಿಸ್: ಮೆಡ್ವೆಡೆವ್ ಜಯಭೇರಿ

ಸೆಮಿಗೆ ಸಿಟ್ಸಿಪಾಸ್, ಕಾಲಿನ್ಸ್

ಮೆಲ್ಬರ್ನ್ (ಎಎಫ್‌ಪಿ): ಮ್ಯಾರಥಾನ್ ಪಂದ್ಯದಲ್ಲಿ ಕೆನಡಾದ ಫೆಲಿಕ್ಸ್ ಒಜೇರ್ ಅಲಿಯಾಸೀಮ್ ಅವರ ದಿಟ್ಟ ಆಟಕ್ಕೆ ತಿರುಗೇಟು ನೀಡಿದ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು. ಸುಲಭ ಜಯ ಸಾಧಿಸಿದ ಗ್ರೀಸ್‌ನ ಸ್ಟೆಫನೋಸ್ ಸಿಟ್ಸಿಪಾಸ್ ಮತ್ತು ಅಮೆರಿಕದ ಡ್ಯಾನಿಯೆಲಿ ಕಾಲಿನ್ಸ್ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಡ್ಯಾನಿಲ್ ಮೆಡ್ವೆಡೆವ್ ಚೆಂಡನ್ನು ರಿಟರ್ನ್ ಮಾಡಿದ ಬಗೆ –ಎಎಫ್‌ಪಿ ಚಿತ್ರ

ನಾಲ್ಕು ತಾಸು 42 ನಿಮಿಷಗಳ ಪ್ರಬಲ ಪೈಪೋಟಿಯಲ್ಲಿ ಮೆಡ್ವೆಡೆವ್, 21 ವರ್ಷದ ಫೆಲಿಕ್ಸ್ ವಿರುದ್ಧ 6-7 (4/7), 3-6, 7-6 (7/2), 7-5, 6-4ರಲ್ಲಿ ಗೆಲುವು ಸಾಧಿಸಿದರು. ನಾಲ್ಕರ ಘಟ್ಟದ ಪಂದ್ಯದಲ್ಲಿ ಅವರು ಸ್ಟೆಫನೋಸ್ ಸಿಟ್ಸಿಪಾಸ್ ಎದುರು ಸೆಣಸುವರು.

ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಶ್ರೇಯಾಂಕ ರಹಿತ ಆಟಗಾರ್ತಿ, ಎಸ್ಟೋನಿಯಾದ ಕಯಾ ಕನೆಪಿ ಅವರ ಸವಾಲು ಮೀರಿನಿಂತ ಪೋಲೆಂಡ್‌ನ ಇಗಾ ಸ್ವಾಟೆಕ್ ಕೂಡ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದರು.

11ನೇ ಶ್ರೇಯಾಂಕದ ಆಟಗಾರ ಇಟಲಿಯ ಜನಿಕ್ ಸಿನ್ನರ್ ಎದುರು ನಡೆದ 2 ತಾಸು ಆರು ನಿಮಿಷಗಳ ಪಂದ್ಯದಲ್ಲಿ ಸಿಟ್ಸಿಪಾಸ್ 6-3, 6-4, 6-2ರಲ್ಲಿ ಜಯ ಗಳಿಸಿದರು. ಪಂದ್ಯದ ನಂತರ ‘ನಿರೀಕ್ಷಿತ ವಲಯ’ ಪ್ರವೇಶಿಸಿದೆ ಎಂದು ಹೇಳಿದ ಸಿಟ್ಸಿಪಾಸ್, ಇದು ಈ ಟೂರ್ನಿಯಲ್ಲಿ ತಮ್ಮ ನೆಚ್ಚಿನ ಪಂದ್ಯವಾಗಿತ್ತು ಎಂದು ಅಭಿಪ್ರಾಯಪಟ್ಟರು.

ಸ್ವಾಟೆಕ್, ಕೊಲಿನ್ಸ್ ಜಯಭೇರಿ: ಇಗಾ ಸ್ವಾಟೆಕ್ ಮತ್ತು ಡ್ಯಾನಿಯೆಲಿ ಕಾಲಿನ್ಸ್ ಮಹಿಳಾ ವಿಭಾಗದ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗುವರು. ಕೇವಲ 88 ನಿಮಿಷಗಳ ಪಂದ್ಯದಲ್ಲಿ ಶ್ರೇಯಾಂಕರಹಿತ ಆಟಗಾರ್ತಿ ಫ್ರಾನ್ಸ್‌ನ ಅಲಿಸ್ ಕಾರ್ನೆಟ್ ವಿರುದ್ಧ 7–5, 6–1ರಲ್ಲಿ ಕಾಲಿನ್ಸ್ ಜಯಭೇರಿ ಮೊಳಗಿಸಿದರು. ಏಳನೇ ಶ್ರೇಯಾಂಕಿತೆ ಸ್ವಾಟೆಕ್ 4-6, 7-6 (7/2), 6-3ರಲ್ಲಿ ಕಯಾ ಕೆನಪಿ ವಿರುದ್ಧ ಗೆದ್ದರು.

ವಿಂಡೀಸ್ ಎದುರಿನ ಸರಣಿಗೆ ತಂಡ: ರವಿಗೆ ಸ್ಥಾನ; ಮರಳಿದ ಕುಲದೀಪ್

ನವದೆಹಲಿ (ಪಿಟಿಐ): ಯುವ ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ವೆಸ್ಟ್ ಇಂಡೀಸ್ ಎದುರಿನ ಸೀಮಿತ ಓವರ್‌ಗಳ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಚೈನಾಮನ್ ಬೌಲರ್ ಕುಲದೀಪ್ ಯಾದವ್ ತಂಡಕ್ಕೆ ಮರಳಿದ್ದಾರೆ.

ರವಿ ಬಿಷ್ಣೋಯಿ

ಬುಧವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಏಕದಿನ ಮತ್ತು ಟಿ20 ಸರಣಿಗಳಲ್ಲಿ ಆಡುವ ತಂಡಗಳನ್ನು ಪ್ರಕಟಿಸಿದೆ. ಗಾಯದಿಂದ ಚೇತರಿಸಿಕೊಂಡು, ಫಿಟ್‌ನೆಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ರೋಹಿತ್ ಶರ್ಮಾ ತಂಡವನ್ನು ಮುನ್ನಡೆಸಲಿದ್ದಾರೆ. ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಕೂಡ ಲಭ್ಯರಿದ್ದಾರೆ. ತವರಿನ ಸರಣಿಯಲ್ಲಿ ಯುವ ಆಟಗಾರರಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ.

ಋತುರಾಜ್ ಗಾಯಕವಾಡ್, ವೆಂಕಟೇಶ್ ಅಯ್ಯರ್, ಆವೇಶ್ ಖಾನ್, ದೀಪಕ್ ಹೂಡಾ ಮತ್ತು ಹರ್ಷಲ್ ಪಟೇಲ್ ಅವರು ಸ್ಥಾನ ಪಡೆದಿದ್ದಾರೆ. ಕರ್ನಾಟಕದ ಬೌಲರ್ ಪ್ರಸಿದ್ಧಕೃಷ್ಣ ಏಕದಿನ ತಂಡದಲ್ಲಿ ಅವಕಾಶ ಗಳಿಸಿದ್ದಾರೆ. ಮೊಣಕಾಲಿನ ಶಸ್ತ್ರಚಿಕಿತ್ಸೆಯಿಂದಾಗಿ ಕುಲದೀಪ್ ಕೆಲವು ತಿಂಗಳುಗಳಿಂದ ಕಣಕ್ಕಿಳಿದಿರಲಿಲ್ಲ. .

ಏಕದಿನ ಕ್ರಿಕೆಟ್ ತಂಡ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಋತುರಾಜ್ ಗಾಯಕವಾಡ್, ಶಿಖರ್ ಧವನ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ದೀಪಕ್ ಹೂಡಾ, ರಿಷಭ್ ಪಂತ್ (ವಿಕೆಟ್‌ಕೀಪರ್), ದೀಪಕ್ ಚಾಹರ್, ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಆವೇಶ್ ಖಾನ್.

ಟಿ20 ತಂಡ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಇಶಾನ್ ಕಿಶನ್, ರವಿ ಬಿಷ್ಣೋಯಿ, ವೆಂಕಟೇಶ್ ಅಯ್ಯರ್, ಹರ್ಷಲ್ ಪಟೇಲ್, ರಿಷಭ್ ಪಂತ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ದೀಪಕ್ ಚಾಹರ್, ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಆವೇಶ್ ಖಾನ್, ಭುವನೇಶ್ವರ್ ಕುಮಾರ್, ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್.

ಮುಂಬಾಗೆ ಸೋತ ಬುಲ್ಸ್

ಬೆಂಗಳೂರು: ರೇಡರ್, ನಾಯಕ ಪವನ್ ಶೆರಾವತ್ ಮತ್ತೊಮ್ಮೆ ಮಿಂಚಿನ ಆಟದ ಮೂಲಕ ‘ಸೂಪರ್ ಟೆನ್’ ಸಾಧನೆ ಮಾಡಿದರು. ಆದರೆ ಯು ಮುಂಬಾದ ಸಂಘಟಿತ ಹೋರಾಟದ ಎದುರು ಬೆಂಗಳೂರು ಬುಲ್ಸ್ ಸಪ್ಪೆಯಾಯಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಲೀಗ್‌ನ ಬುಧವಾರದ ಪಂದ್ಯದಲ್ಲಿ ಯು ಮುಂಬಾ 45–34ರಲ್ಲಿ ಬುಲ್ಸ್ ವಿರುದ್ಧ ಜಯ ಗಳಿಸಿತು. ಮುಂಬಾ ಪರ ಅಭಿಷೇಕ್ 11 ಟಚ್ ಪಾಯಿಂಟ್ ಗಳಿಸಿದರೆ ರಾಹುಲ್ 8 ಪಾಯಿಂಟ್ ಗಳಿಸಿದರು. ಬುಲ್ಸ್‌ಗಾಗಿ ಪವನ್ 11 ಟಚ್ ಪಾಯಿಂಟ್ ಸೇರಿದಂತೆ ಒಟ್ಟು 14 ಪಾಯಿಂಟ್ ಗಳಿಸಿದರು. ಭರತ್ 7 ಮತ್ತು ಸೌರಭ್ ನಂದಾಲ್ 4 ಪಾಯಿಂಟ್ ಗಳಿಸಿದರು.

ಗುರುವಾರದ ಪಂದ್ಯದಲ್ಲಿ ಯುಪಿ ಯೋಧಾ ಪುಣೇರಿ ಪಲ್ಟನ್ ಸೆಣಸಲಿವೆ.

ಐಎಸ್‌ಎಲ್: ಬಿಎಫ್‌ಸಿಗೆ ಜಯ

ಬ್ಯಾಂಬೊಲಿಮ್, ಗೋವಾ (ಪಿಟಿಐ): ಆಲ್‌ರೌಂಡ್ ಆಟದ ಮೂಲಕ ಚೆನ್ನೈಯಿನ್ ಎಫ್‌ಸಿ ತಂಡವನ್ನು ನಿಯಂತ್ರಿಸಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು. ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಬಿಎಫ್‌ಸಿ 3–0ಯಿಂದ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿತು.

ಗೋಲು ಗಳಿಸಿದ ಇಮಾನ್ ಬಸಾಫ ಅವರ ಸಂಭ್ರಮ

ಗುರುಪ್ರೀತ್ ಸಿಂಗ್ ಸಂಧು ಬದಲಿಗೆ ಲಾರಾ ಶರ್ಮಾ ಅವರಿಗೆ ಗೋಲ್‌ಕೀಪಿಂಗ್ ಜವಾಬ್ದಾರಿ ವಹಿಸಿ ಕಣಕ್ಕೆ ಇಳಿದ ಬೆಂಗಳೂರು ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾಯಿತು. ನಾಲ್ಕನೇ ನಿಮಿಷದಲ್ಲಿ ಬ್ರೂನೊ ಸಿಲ್ವಾ ಮತ್ತು ಇಮಾನ್ ಬಸಾಫ ಜಂಟಿಯಾಗಿ ಪ್ರಬಲ ದಾಳಿ ನಡೆಸಿದರು. ಆದರೆ ಚೆನ್ನೈಯಿನ್ ತಂಡದ ದೇಬ್‌ಜಿತ್ ಮಜುಂದಾರ್ ಅವರು ಮೋಹಕ ‘ಸೇವ್’ ಮೂಲಕ ಮಿಂಚಿದರು.12ನೇ ನಿಮಿಷದಲ್ಲಿ ಸುನಿಲ್ ಚೆಟ್ರಿ ಅವರನ್ನು ಕೆಳಗೆ ಬೀಳಿಸಿದ ಕಾರಣ ಚೆನ್ನೈಯಿನ್‌ಗೆ ಪೆನಾಲ್ಟಿ ವಿಧಿಸಲಾಯಿತು. ಇಮಾನ್ ಬಘಾಸ ಮಿಂಚಿನ ಶಾಟ್ ಮೂಲಕ ಗೋಲು ಗಳಿಸಿದರು.

42ನೇ ನಿಮಿಷದಲ್ಲಿ ಸುನಿಲ್ ಚೆಟ್ರಿ ಮಾಡಿದ ಮ್ಯಾಜಿಕ್‌ನಲ್ಲಿ ಉದಾಂತ ಸಿಂಗ್ ಚೆಂಡನ್ನು ಗುರಿ ಮುಟ್ಟಿಸಿ ಸಂಭ್ರಮಿಸಿದರು. 52ನೇ ನಿಮಿಷದಲ್ಲಿ ಉದಾಂತ ಮತ್ತೊಂದು ಗೋಲು ಗಳಿಸಿದರು.

ಗುರುವಾರ ತಿಲಕ್ ಮೈದಾನದಲ್ಲಿ ನಡೆಯಲಿರುವ ಪಂದ್ಯದಲ್ಲಿ ಒಡಿಶಾ ಎಫ್‌ಸಿ, ಹೈದರಾಬಾದ್ ಎಫ್‌ಸಿಯನ್ನು ಎದುರಿಸಲಿದೆ.

ಫುಟ್‌ಬಾಲ್ ಪಟು ನಾಗೇಂದ್ರ ನಿಧನ

ಬೆಂಗಳೂರು: ಭಾರತ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಎ.ಡಿ. ನಾಗೇಂದ್ರ (79) ಬುಧವಾರ ರಾತ್ರಿ ನಿಧನರಾದರು. ಅನಾರೋಗ್ಯಪೀಡಿತರಾಗಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಪುತ್ರ ಸುರೇಶ್ ತಿಳಿಸಿದ್ದಾರೆ. ಡಿಫೆಂಡರ್ ಆಗಿದ್ದ ಅವರು ಸಂತೋಷ್ ಟ್ರೋಫಿ ಟೂರ್ನಿಯ ಪ್ರಶಸ್ತಿ ಗೆದ್ದ ಮೈಸೂರು ತಂಡದಲ್ಲಿ ಆಡಿದ್ದರು.

ಎ.ಡಿ.ನಾಗೇಂದ್ರ

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ ನಂತರ ಆಡಳಿತ ಮಂಡಳಿಯ ಸದಸ್ಯ ಆಗಿದ್ದರು. 19 ವರ್ಷದೊಳಗಿನವರ ರಾಷ್ಟ್ರೀಯ ತಂಡದ ಕೋಚ್ ಕೂಡ ಆಗಿದ್ದರು.



ದ ಕಿಂಗ್‌ಫಿಷರ್ ಅಲ್ಟ್ರಾ ಡರ್ಬಿ ರೇಸ್ ಟ್ರೋಫಿ ವಿತರಣೆ ವೇಳೆ (ಎಡದಿಂದ ಬಲಕ್ಕೆ) ಝೂಕರೆಲಿ ಕುದುರೆಯ ಸಹ ಮಾಲೀಕರಾದ ಎ.ಎಸ್. ನರೀ ವಾಲಾ, ಡಿ.ಆರ್ ಥ್ಯಾಕರ್, ಮುಕುಲ್ ಎ ಸೋನವಾಲಾ, ಬಿಟಿಸಿ ಮಾಜಿ ಮುಖ್ಯಸ್ಥ ಡಿ. ವಿನೋದ್ ಶಿವಪ್ಪ, ಅಧ್ಯಕ್ಷ ಕೆ. ಉದಯ್ ಈಶ್ವರನ್, ಯುಬಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರಿಷಿ ಪರ್ದಾಲ್, ಕುದುರೆ ಮಾಲೀಕರಾದ ಕೆ.ಎನ್. ಧುಂಜಿಬೋಯ್, ಜಾಹರ್ ಇದ್ದರು.

ಗುರಿಯತ್ತ ಮುನ್ನುಗಿದ ಝೂಕರೆಲಿ ಕುದುರೆ ಮತ್ತು ಜಾಕಿ ಟ್ರೆವರ್ ಪಟೇಲ್ –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಚಳಿಗಾಲದ ಪ್ರತಿಷ್ಠಿತ ರೇಸ್ ಸಡಗರ

ಝೂಕರೆಲಿಗೆ ಅಲ್ಟ್ರಾ ಡರ್ಬಿ ಕಿರೀಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಒಟ್ಟು ₹ 82.77 ಲಕ್ಷ ಗೆದ್ದ ಝೂಕರೆಲಿ
- ಝೂಕರೆಲಿ ಮುನ್ನಡೆಸಿದ ಜಾಕಿ ಟ್ರೇವರ್ ಪಟೇಲ್
- ಆಲ್ ಅಟ್ರ್ಯಾಕ್ಟಿವ್ ಅಶ್ವಕ್ಕೆ ಎರಡನೇ ಸ್ಥಾನ

ಬೆಂಗಳೂರು: ನಿರೀಕ್ಷೆಯಂತೆ ಝೂಕರೆಲಿ ಬುಧವಾರ ಮುಕ್ತಾಯವಾದ ಬೆಂಗಳೂರು ಚಳಿಗಾಲದ ಪ್ರತಿಷ್ಠಿತ ಕಿಂಗ್‌ಫಿಷರ್ ಅಲ್ಟ್ರಾ ಡರ್ಬಿ ರೇಸ್‌ನಲ್ಲಿ ಪ್ರಶಸ್ತಿ ಜಯಿಸಿತು.

ಪೆಸಿ ಶ್ರಾಫ್ ತರಬೇತಿಯಲ್ಲಿ ಪಳಗಿರುವ ಝೂಕರೆಲಿಯು ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಬುಧವಾರ ಮಧ್ಯಾಹ್ನ ಸೇರಿದ್ದ ರೇಸ್‌ಪ್ರಿಯರನ್ನು ನಿರಾಶೆಗೊಳಿಸಲಿಲ್ಲ. ಏಳು ಸ್ಪರ್ಧಿಗಳಿದ್ದ ಕಣದಲ್ಲಿ ಝೂಕರೆಲಿ ಸವಾರಿ ಮಾಡಿದ ಜಾಕಿ ಟ್ರೆವರ್ ಪಟೇಲ್ ಜಯಭೇರಿ ಬಾರಿಸಿದರು. ರೇಸ್ ಪ್ರಾರಂಭದಲ್ಲಿ ರೆವಲ್ಯೂಷನ್, 1000 ಮೀಟರ್ಸ್ ದಾಟಿದ ನಂತರ ಸಿಲ್ವೇರಿಯಸ್ ಲೀಡ್ ಪಡೆದು ಓಡುತ್ತಿದ್ದರೆ, ಝೂಕರೆಲಿ ಕೊನೆಯ ಸ್ಥಾನದಲ್ಲಿ ಓಡುತ್ತಲಿತ್ತು. ಕೊನೆಯ 600 ಮೀ. ತಿರುವಿನಲ್ಲಿ ವೇಗ ಹೆಚ್ಚಿಸಿಕೊಂಡ ಝೂಕರೆಲಿ 4ನೇ ಸ್ಥಾನಕ್ಕೆ ಮುನ್ನುಗಿತು.

ಆನಂತರ ಕೊನೆಯ ಹಂತದ ನೇರ ಓಟದಲ್ಲಿ, ಬಿಲ್ಲಿನಿಂದ ಬಿಡುಗಡೆಯಾದ ಬಾಣದಂತೆ ನುಗ್ಗಿದ ಝೂಕರೆಲಿ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿ 15 ¼ ಲೆಂತ್‌ನಿಂದ ಡರ್ಬಿ ಕಿರೀಟವನ್ನು ಮುಡಿಗೇರಿಸಿಕೊಂಡಿತು. ಕೊನೆಯ ನೇರ ಓಟದ ಪ್ರಾರಂಭದಲ್ಲಿ ಮುನ್ನಡೆ ಪಡೆದಿದ್ದ ಆಲ್ ಅಟ್ರ್ಯಾಕ್ಟಿವ್ ಪ್ರಯಾಸದಿಂದ ಸಿಲ್ವೇರಿಯಸ್ ಅನ್ನು ಒಂದು ಲೆಂತ್ ಅಂತರದಿಂದ ಹಿಂದಿಕ್ಕಿ 2ನೇ ಸ್ಥಾನ ಪಡೆಯಿತು. ಎಟರ್ನಲ್ ಬ್ಲೇಝ್ 4ನೇ ಸ್ಥಾನ ಗಳಿಸುವಲ್ಲಿ ಸಫಲವಾಯಿತು. ಡರ್ಬಿಯ 2,400 ಮೀಟರ್ಸ್ ಕ್ರಮಿಸಲು ಝೂಕರೆಲಿ 2 ನಿಮಿಷ 31.244 ಸೆಕೆಂಡು ಸಮಯ ತೆಗೆದು ಕೊಂಡಿತು.

ಈ ಗೆಲುವಿನೊಂದಿಗೆ ತನ್ನ ಮಾಲೀಕರಿಗೆ ಸುಮಾರು ಎರಡು ಲಕ್ಷ ಮೌಲ್ಯದ ಟ್ರೋಫಿಯೊಂದಿಗೆ ಒಟ್ಟು ₹ 82.77 ಲಕ್ಷಗಳಲ್ಲಿ ₹ 68.29 ಲಕ್ಷಗಳನ್ನು ತನ್ನ ಮಾಲೀಕರಿಗೆ ದೊರಕಿಸಿತು.

ಕಿಂಗ್‌ಫಿಷರ್ ಅಲ್ಟ್ರಾ ಡರ್ಬಿ ವೀಕ್ಷಿಸಲು ಬಂದ ರೇಸ್ ಪ್ರಿಯರು

ರೇಸ್ ವೀಕ್ಷಿಸಲು ಬಂದಿದ್ದ ನಟ ಅಭಿಷೇಕ್ ಅಂಬರೀಷ್

ಆರು ಬಹುಮಾನಗಳನ್ನು ಪಡೆದ ಕುದುರೆಗಳ ವಿವರ

ಸ್ಥಾನ	ಸಂಖ್ಯೆ	ಹೆಸರು	ಟ್ರೇನರ್	ಜಾಕಿ	ಸಮಯ	ಬಹುಮಾನದ ಮೊತ್ತ (₹)
1	5	ಝೂಕರೆಲಿ	ಪೆಸಿ ಶ್ರಾಫ್	ಟ್ರೆವರ್ ಪಟೇಲ್	2ನಿ,31.24ಸೆ	82,77,391
2	1	ಆಲ್ ಅಟ್ರ್ಯಾಕ್ಟಿವ್	ಬಿ.ಪೃಥ್ವಿರಾಜ್	ಸೂರಜ್ ನರೇಡು	2:33.74	27,59,130
3	4	ಸಿಲ್ವೇರಿಯಸ್	ಅರ್ಜನ್ ಮಂಗ್ಲೋರ್ಕರ್	ಶ್ರೀನಾಥ್	2:33.91	13,79,565
4	6	ಎಟರ್ನಲ್ ಬ್ಲೇಝ್	ಎಸ್.ಗಣಪತಿ	ಸಿ.ಎಸ್.ಜೋಧ	2:34.11	6,89,783
5	3	ಎಟೋಷಾ	ನೀಲ್ ದಾರಾಶ	ಎ.ಸಂದೇಶ್	2:37.17	4,13,869
6	2	ಏಂಜಲಿಕೊ	ಅಟ್ಟೋಲಾಹಿ	ಅಕ್ಷಯ್ ಕುಮಾರ್	2:37.98	2,75,912

‘ಕೋವಿಡ್ ಹರಡಲು ಬಯೋಬಬಲ್ ಅವ್ಯವಸ್ಥೆ ಕಾರಣ’

ಥಾಮಸ್ ಡೆನೆರ್ಬಿ

ಮುಂಬೈ (ಪಿಟಿಐ): ಆಟಗಾರ್ತಿಯರಲ್ಲಿ ಕೋವಿಡ್ ಖಚಿತಪಟ್ಟು, ಏಷ್ಯಾ ಕಪ್ ಟೂರ್ನಿಯಿಂದ ಭಾರತ ಮಹಿಳಾ ಫುಟ್‌ಬಾಲ್ ತಂಡವು ಹೊರಗುಳಿಯಲು ಅಸುರಕ್ಷಿತ ಬಯೋಬಬಲ್ ವ್ಯವಸ್ಥೆಯೇ ಕಾರಣ. ಹೋಟೆಲ್ ಸಿಬ್ಬಂದಿಯಿಂದ ಸೋಂಕು ಹರಡಿತು ಎಂದು ತಂಡದ ಕೋಚ್ ಥಾಮಸ್ ಡೆನೆರ್ಬಿ ನೇರ ಆರೋಪ ಮಾಡಿದ್ದಾರೆ.

ಈ ಕುರಿತು ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್‌ನ ಟೂರ್ನಿ ಆಯೋಜಕರನ್ನು ತರಾಟೆಗೆ ತೆಗೆದುಕೊಂಡಿರುವ ಥಾಮಸ್, ಫಿಫಾ ವಿಶ್ವಕಪ್ ಅರ್ಹತೆಯತ್ತ ಸಾಗುವ ಭಾರತ ಕನಸು ಕೈಗೂಡದಿರುವಲ್ಲಿ ಆಟಗಾರ್ತಿಯರ ಯಾವುದೇ ತಪ್ಪಿಲ್ಲ. ಇದಕ್ಕೆ ಎಎಫ್‌ಸಿ ರೂಪಿಸಿದ್ದ ಬಯೋಬಬಲ್ ವ್ಯವಸ್ಥೆಯ ಲೋಪವೇ ಕಾರಣ ಎಂದಿದ್ದಾರೆ.

ಏಷ್ಯಾಕಪ್ ಹಾಕಿ: ಭಾರತದ ಪ್ರಶಸ್ತಿ ಜಯದ ಕನಸು ಭಗ್ನ

ಮಸ್ಕತ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ಮಹಿಳಾ ತಂಡವು ಏಷ್ಯಾಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸಿತು. ಇದರೊಂದಿಗೆ ಪ್ರಶಸ್ತಿ ಜಯದ ಕನಸು ಭಗ್ನಗೊಂಡಿತು.

ಸುಲ್ತಾನ್ ಕಬೂಸ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಸವಿತಾ ಪೂನಿಯಾ ನಾಯಕತ್ವದ ಬಳಗವು 2–3ರಿಂದ ದಕ್ಷಿಣ ಕೊರಿಯಾ ತಂಡಕ್ಕೆ ಮಣಿಯಿತು.

ಭಾರತಕ್ಕೆ 28ನೇ ನಿಮಿಷದಲ್ಲಿ ವಂದನಾ ಕಟಾರಿಯಾ ಮುನ್ನಡೆ ತಂದುಕೊಟ್ಟರು. ಕೊರಿಯಾ ನಾಯಕಿ ಎನುಬಿ ಚಿಯೊನ್ (31ನೇ ನಿ.) ಗೋಲು ಗಳಿಸಿ ಸಮಬಲಕ್ಕೆ ಕಾರಣರಾದರು. ಸೆಯುಂಗ್ ಜು ಲೀ (45ನೇ ನಿ.) ಮತ್ತು ಹೆಜಿನ್ ಚೊ (47ನೇ ನಿ.) ಗಳಿಸಿದ ಗೋಲುಗಳ ಮೂಲಕ ಕೊರಿಯಾ ಮುನ್ನಡೆ ಗಳಿಸಿತು.

ಭಾರತ ತಂಡವು 54ನೇ ನಿಮಿಷದಲ್ಲಿ ಲಾಲ್‌ರೆಮ್ಸಿಯಾಮಿ ಗಳಿಸಿದ ಗೋಲಿನ ಮೂಲಕ ಹಿನ್ನಡೆಯನ್ನು ತಗ್ಗಿಸಿಕೊಳ್ಳಲು ಮಾತ್ರ ಯಶಸ್ವಿಯಾಯಿತು.

ಭಾರತ ತಂಡವು ಮೂರನೇ ಸ್ಥಾನಕ್ಕಾಗಿ ನಡೆಯುವ ಪಂದ್ಯದಲ್ಲಿ ಶುಕ್ರವಾರ ಚೀನಾ ತಂಡವನ್ನು ಎದುರಿಸಲಿದೆ. ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಜಪಾನ್ 2–1ರಿಂದ ಚೀನಾ ತಂಡವನ್ನು ಮಣಿಸಿ ಫೈನಲ್ ತಲುಪಿತು.

ಫೈನಲ್ ಪಂದ್ಯವೂ ಶುಕ್ರವಾರ ಜಪಾನ್ ಮತ್ತು ದಕ್ಷಿಣ ಕೊರಿಯಾ ಮಧ್ಯೆ ನಡೆಯಲಿದೆ.

ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿ ಮುಂದಕ್ಕೆ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಸಂತೋಷ್ ಟ್ರೋಫಿ ಫುಟ್‌ಬಾಲ್ ಚಾಂಪಿಯನ್ ಷಿಪ್‌ಅನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಕೇರಳದ ಮಲಪ್ಪುರಂನಲ್ಲಿ ಫೆಬ್ರುವರಿ 20ರಿಂದ ಮಾರ್ಚ್ 6ರವರೆಗೆ ಟೂರ್ನಿ ನಿಗದಿಯಾಗಿತ್ತು.

ಈ ಕುರಿತು ಮುಂದಿನ ತಿಂಗಳು ಪರಿಸ್ಥಿತಿಯನ್ನು ಅವಲೋಕಿಸಿ ಟೂರ್ನಿಯ ವೇಳಾಪಟ್ಟಿಯನ್ನು ಮರುನಿಗದಿ ಮಾಡಲಾಗುವುದು ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ತಿಳಿಸಿದೆ.

‘ಭಾಗವಹಿಸುವ ಎಲ್ಲ ರಾಜ್ಯ ಸಂಸ್ಥೆಗಳು ಮತ್ತು ಕೇರಳ ಸರ್ಕಾರದೊಂದಿಗೆ ಸಮಾಲೋಚಿಸಿ ಟೂರ್ನಿ ಮುಂದೂಡಲಾಗಿದೆ‘ ಎಂದು ಎಐಎಫ್‌ಎಫ್ ಪ್ರಕಟಣೆ ತಿಳಿಸಿದೆ.

ಮೈಸೂರು ರೇಸ್

ರೌಖ್ ಗೆಲ್ಲುವ ನಿರೀಕ್ಷೆ

ಏರ್ ಫೋರ್ಸ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೌಖ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಆಲ್ ಟೈಮ್ ಫ್ರೆಂಡ್ಸ್ 2, ರಷ್ಯನ್ ಸ್ಪೈ 10, ಹೈಲ್ಯಾಂಡ್ ಪಾರ್ಕ್ 4
2ನೇ ರೇಸ್: ಇಟಾಲಿಯನ್ ಸ್ಟಾಲಿಯನ್ 2, ಏರ್‌ವೆಲಾಸಿಟಿ 6, ಪಿಲ್‌ಗ್ರಿಮ್ 8
3ನೇ ರೇಸ್: ಡಿ ಥ್ರೀ ನೈನ್ 4, ಎಡ್ಡಿ ದಿ ಈಗಲ್ 5, ಥಿಯಾಸ್ ಗ್ಲೋರಿ 6
4ನೇ ರೇಸ್: ಶೀ ಈಸ್ ಎ ಟೈಗರ್ 6, ಸರ್ಪ್ರೈಸ್ ಪ್ಯಾಕೇಜ್ 7, ಹೀ ಈಸ್ ಡನ್ ಇಟ್ 4
5ನೇ ರೇಸ್: ಟರ್ಫ್ ಲೆಜೆಂಡ್ 2, ರೈಸಿಂಗ್ ಸನ್ 11, ಡೇರಿಂಗ್ ಪ್ರಿನ್ಸ್ 10
6ನೇ ರೇಸ್: ರೌಖ್ 3, ಅಸೆಂಡೆಂಟ್ 4, ಬ್ರೇಕ್ ಅವೇ 6
7ನೇ ರೇಸ್: ಯುಂಗ್‌ಫ್ರಾಜೋಖ್ 9, ಮಾರ್ಚ್ ಟು ವಿಕ್ಟರಿ 1, ಟಿಯಾ ಮೇರಿಯಾ 4

ಉತ್ತಮ ಬೆಟ್: ಯುಂಗ್‌ಫ್ರಾಜೋಖ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ



Range starts at ₹10.99 lakhs* | Special Benefit for Corporate/Govt. Institutions - ₹15 000 OR Loyalty Bonus - ₹15 000 | Exchange Benefit - ₹25 000*

Available in 1.0 TSI & 1.5 TSI engines | 25.4 Infotainment System | Full LED Bi Module Headlamps | Ventilated Front Seats | Electric Sunroof

Simplify your ownership with the MyŠKODA App | MyŠKODA | Toll-free 1800 2700 260 www.skoda-auto.co.in | MyŠKODA CONNECT | ŠKODA Certified Pre-Owned | POWERED BY TSI

Showrooms: Bengaluru (Jakkur): PPS Motors: 8800776947; **Bengaluru** (HSR Layout): TAFE Access: 7874223333; **Bengaluru** (St. Marks Road): TAFE Access: 7874223333; **Bengaluru** (Sadashivanagar): PPS Motors: 8800776947; **Bengaluru** (Mahadevpura): Raja Motors: 18003091099; **Mangalore:** TAFE Access: 7874334444; **Hubli:** Priti Cars: 7518701229/9902056184; **Mysore:** Palace ŠKODA: 0821-6615555
Branches: Bengaluru (Mysore Road): PPS Motors: 8800776947; **JP Nagar:** TAFE Access: 080-41000032; **Belgaum:** Priti Cars: 7518701222/9902056184; **Tumkur:** PPS Motors: 8800776947; **Mysore:** Palace ŠKODA: 0821-6615555/6366955730; **Udupi:** TAFE Access: 7874334444; **Shimoga:** TAFE Access: 7874334444; **Bellary:** PPS Motors: 8800776947
Service Centres: Bengaluru (Hennur Road): PPS Motors: 8800776947; **Bengaluru** (Off Hosur Road): TAFE Access: 9591998570; **Bengaluru** (Sreerampura Okhlipuram): PPS Motors: 8800776947; **Bengaluru** (Mahadevpura): Raja Motors: 18003092099; **Mangalore:** TAFE Access: 9384822472; **Hubli:** Priti Cars: 9686205095; **Mysore:** Palace ŠKODA: 0821-6615555
Compact Workshop: Tumkur: PPS Motors: 8800776947

Book your ŠKODA KUSHAQ

*Credit at the sole discretion of the financer. EMI starting from ₹100/ Lac EMI for first 3 months & from 4th EMI ₹2 145/ Lac till the end of the tenor of 60 months. All offers are from the dealer. Corporate and loyalty offers cannot be clubbed. Exchange offer mentioned is for ŠKODA to ŠKODA exchange, a non-ŠKODA car may get lower exchange amount. All finance offers available are subject to fulfilment of eligibility criteria laid down by the respective finance company/bank. Delivery of the car is subject to stock availability. Specifications given differ from model to model. Accessories shown may not be a part of standard equipment. Always insist on ŠKODA parts and accessories available at authorised sales and service centres. Information relating to colours, prices, construction, technical details and equipment was valid at the time of issuance and these are subject to changes without any prior notice. All disputes are subject to Mumbai courts only. Terms & conditions apply.